

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 18 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 123 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4



ಕೈ ಕೊಟ್ಟ ಮುಂಗಾರು ರಾಜ್ಯದಲ್ಲಿ ಬರದ ಭೀತಿ

ಆಹಾರ ಧಾನ್ಯ ಉತ್ಪಾದನೆ ಕುಂಠಿತ; ಕುಡಿಯುವ ನೀರಿಗೂ ಹಾಹಾಕಾರದ ಆತಂಕ

ಬೆಂಗಳೂರು, ಆ.17(ಕೆಎಂಶಿ) – ಮುಂಗಾರು ಮತ್ತೆ ಕೈ ಕೊಟ್ಟಿರುವುದರಿಂದ ರಾಜ್ಯದಲ್ಲಿ ಭೀಕರ ಬರಗಾಲದ ಭೀತಿ ಆವರಿಸಿದೆ.



ಮಳೆ ಕೊರತೆಯಿಂದ ರಾಜ್ಯದ 17 ಜಿಲ್ಲೆಗಳಲ್ಲಿ ಬರಗಾಲ ತಾಂಡವವಾಡುತ್ತಿದೆ. ಆದರೆ, ರಾಜ್ಯ ಸರ್ಕಾರ ಇದುವರೆಗೂ ಎಚ್ಚೆತ್ತುಕೊಂಡಿಲ್ಲ.

ಒಟ್ಟಾರೆ ರಾಜ್ಯದಲ್ಲಿ 103 ತಾಲೂಕು ಹಾಗೂ 400 ಹೋಬಳಿಗಳಲ್ಲಿ ಬರ ಆವರಿಸಿಕೊಂಡಿದೆ. ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಬರದ ಛಾಯೆಯಿಂದ ಆಹಾರ ಧಾನ್ಯಗಳ ಉತ್ಪಾದನೆ ಕುಂಠಿತಗೊಂಡು ಬೇಸಿಗೆಯಲ್ಲಿ ಕುಡಿಯುವ ನೀರಿಗೂ ಹಾಹಾಕಾರದ ಸ್ಥಿತಿ ನಿರ್ಮಾಣವಾಗುತ್ತಿದೆ. ಮುಂಗಾರು ದುರ್ಬಲವಾಗಿರುವುದರಿಂದ ಮೈಸೂರು, ಕೊಡಗು, ಹಾಸನ, ಶಿವಮೊಗ್ಗ, ದಕ್ಷಿಣ ಕನ್ನಡ, ಉಡುಪಿ, ರಾಮನಗರ, ಬೆಂಗಳೂರು ನಗರ, ಕೋಲಾರ, ಚಿಕ್ಕಬಳ್ಳಾಪುರ, ವಿಜಯನಗರ, ಕೊಪ್ಪಳ, ಬಾಗಲಕೋಟೆ, ಹಾವೇರಿ, ಚಿಕ್ಕಮಗಳೂರು ಜಿಲ್ಲೆಗಳ ಬಹುತೇಕ ಭಾಗದಲ್ಲಿ ಬರದ ಛಾಯೆ ಆವರಿಸಿದೆ.

ಸತತ ಮೂರು ವಾರಗಳಿಂದ ಮಳೆ ಅಭಾವ ರಾಜ್ಯದಲ್ಲಿ ಉಂಟಾಗಿದೆ. ವಾಡಿಕೆಗಿಂತ ಶೇ.74ರಷ್ಟು ಮಳೆ ಕೊರತೆಯಿಂದ ಮುಂಗಾರು ಹಂಗಾಮಿನ ಬೆಳೆಗಳು ಒಣಗುತ್ತಿವೆ. ಬಿತ್ತನೆ ಜಮೀನು ಹದ ಮಾಡಿಕೊಂಡಿದ್ದ ರೈತರು ಮಳೆಯಿಲ್ಲದೆ, ಸೂಕ್ತ ತೇವಾಂಶವಿಲ್ಲದೆ ಬಿತ್ತನೆ ಮಾಡಲಾಗದೆ ಕಂಗಾಲಾಗಿದ್ದಾರೆ.

ಆಗಸ್ಟ್ ಅಂತ್ಯಕ್ಕೆ ಮಹಾರಾಷ್ಟ್ರದಲ್ಲಿ ಮಳೆಯಾಗುವುದರ ಜತೆಗೆ ಉತ್ತರ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಸಾಧಾರಣ ಮಳೆ ಅಲ್ಲಲ್ಲಿ ಬೀಳುವ ಮುನ್ಸೂಚನೆ ಇರುವುದಾಗಿ ಹವಾಮಾನ ತಜ್ಞರು ತಿಳಿಸಿದ್ದಾರೆ.

ದಕ್ಷಿಣ ಒಳನಾಡಿನಲ್ಲಿ ಕೊಡಗು ಹೊರತುಪಡಿಸಿದರೆ, ಉಳಿದ ಯಾವುದೇ ಜಿಲ್ಲೆಗಳಲ್ಲಿ ಶೇ.10ರಿಂದ ಶೇ.15ರಷ್ಟು ಮಾತ್ರ ಮಳೆಯಾಗುವ ಸಾಧ್ಯತೆಗಳಿವೆ. ಇದರಿಂದ ಕೃಷಿಕನಿಗೆ ಯಾವುದೇ ರೀತಿಯ ಪ್ರಯೋಜನವಾಗುವುದಿಲ್ಲ.

ಕೊಡಗಿನಲ್ಲಿ ಶೇ.50 ಮಿ.ಮೀ.ವರೆಗೂ ಮಳೆಯಾದರೂ ಕಾವೇರಿ ನದಿ ಪಾತ್ರದ ಜಲಾಶಯಗಳಿಗೆ ನದಿ ನೀರು ಹರಿದು ಬರುವ ಸಾಧ್ಯತೆಗಳು ವಿರಳ.

ಈಗಾಗಲೇ ತಮಿಳುನಾಡು ನೀರಿಗಾಗಿ ಕ್ಯಾತೆ ತೆಗೆದಿದ್ದು, ಪ್ರತಿನಿತ್ಯ ನೀರು ಬಿಡುತ್ತಿರುವುದರಿಂದ ಕೆಆರ್‌ಎಸ್‌ನಲ್ಲಿ ನೀರಿನ ಪ್ರಮಾಣ ಇಳಿಕೆಯಾಗುತ್ತಿದೆ.

ಜೂನ್ ತಿಂಗಳಲ್ಲಿ ಮಳೆ ಕೈಕೊಟ್ಟು ಆತಂಕದ ವಾತಾವರಣ ಸೃಷ್ಟಿಸಿತ್ತು. ಆದರೆ, ಜುಲೈನಲ್ಲಿ ಚೇತರಿಸಿಕೊಂಡ ಮುಂಗಾರು ಉತ್ತರ ಕರ್ನಾಟಕದಲ್ಲಿ ಅತಿವೃಷ್ಟಿಯಾಯಿತು. ಅಲ್ಲಿನ ಜಲಾಶಯಗಳು ಭರ್ತಿಯಾಗತೊಡಗಿದವು.

ಆದರೆ, ಮಲೆನಾಡು ಹಾಗೂ ದಕ್ಷಿಣ ಒಳನಾಡಿನಲ್ಲಿ ನಿರೀಕ್ಷಿತ ಪ್ರಮಾಣದ ಮಳೆ ಬೀಳದೆ, ಜಲಾಶಯ ಹಾಗೂ ಕೆರೆ–ಕಟ್ಟೆಗಳಿಗೆ ಭರ್ತಿಯಾಗುವಷ್ಟು ನೀರು ಹರಿದು ಬರಲಿಲ್ಲ. ಆದರೆ, ಕಳೆದ ಮೂರು ವಾರಗಳಿಂದ ಮಳೆ ಇಲ್ಲದೆ, ರಾಜ್ಯದ ಅರ್ಧಭಾಗಕ್ಕೂ ಹೆಚ್ಚು ಬರ ಪರಿಸ್ಥಿತಿ ಕಂಡುಬರುತ್ತಿದೆ. ಕೆಲವೆಡೆ ಜುಲೈನಲ್ಲಿ ಬಿದ್ದ ಮಳೆಯಿಂದಾಗಿ ಸರಾಸರಿ ವಾಡಿಕೆ ಮಳೆಯಾಗಿದ್ದರೂ ಉಂಟಾಗಿರುವ ಬೆಳೆ ಹಾನಿ ತಪ್ಪಿಸಲು ಸಾಧ್ಯವಿಲ್ಲ.

ರಾಜ್ಯದಲ್ಲಿ ಭೀಕರ ಪರಿಸ್ಥಿತಿ ಎದುರಾಗಿದ್ದರೂ ಕೇಂದ್ರ ಮಾರ್ಗಸೂಚಿ ಪ್ರಕಾರ ಬರ ಘೋಷಣೆ ಮಾಡಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಸಚಿವ ಸಂಪುಟದ ಉಪ ಸಮಿತಿ ಶೀಘ್ರದಲ್ಲೇ ಸಭೆ ಸೇರಿ ರಾಜ್ಯ ಸರ್ಕಾರದ ಹಳೆಯ ಮಾರ್ಗಸೂಚಿಯನ್ನೇ ಆಧಾರವಾಗಿಟ್ಟುಕೊಂಡು ಬರ ಘೋಷಣೆ ಮಾಡಲು ಕಂದಾಯ ಹಾಗೂ ಕೃಷಿ ಸಚಿವಾಲಯಗಳು ಮುಂದಾಗಿವೆ.

ತಮಿಳುನಾಡಿಗೆ ನೀರು ಬಿಡುಗಡೆ ಖಂಡಿಸಿ
ಶಾಸಕ ದರ್ಶನ್ ನೇತೃತ್ವದಲ್ಲಿ ಕೆಆರ್‌ಎಸ್‌ಗೆ ಮುತ್ತಿಗೆ

ಕೆಆರ್‌ಎಸ್, ಆ.17– ಕೃಷ್ಣರಾಜಸಾಗರ ಅಣೆಕಟ್ಟೆಯಿಂದ ತಮಿಳುನಾಡಿಗೆ ನೀರು ಬಿಡುಗಡೆ ಮಾಡಿರುವ ಸರ್ಕಾರದ ಕ್ರಮ ಖಂಡಿಸಿ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ನೇತೃತ್ವದಲ್ಲಿ ರೈತ ಸಂಘದ ಕಾರ್ಯಕರ್ತರು ಗುರುವಾರ ಅಣೆಕಟ್ಟೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು. ಅಣೆಕಟ್ಟೆ ಇನ್ನೂ ಭರ್ತಿಯಾಗಿಲ್ಲದಿದ್ದರೂ ಸರ್ಕಾರ ತಮಿಳುನಾಡಿಗೆ ನೀರು ಬಿಟ್ಟಿರುವುದು ಖಂಡನೀಯ. ಮಂಡ್ಯ ಜಿಲ್ಲೆಯ ರೈತರ ಹಿತ ಬಲಿ ಕೊಟ್ಟು ಅಣೆಕಟ್ಟೆಯಿಂದ ನೀರು ಹರಿಸುವುದನ್ನು ಕೂಡಲೇ ನಿಲ್ಲಿಸಬೇಕು ಎಂದು ಆಗ್ರಹಿಸಿ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ರೈತ ಸಂಘದ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು.



ಕಾವೇರಿ ನದಿ ನೀರು ಹಂಚಿಕೆ ಸಂಕಷ್ಟ ಪರಿಸ್ಥಿತಿ ಬಗ್ಗೆ ಸುಪ್ರೀಂಕೋರ್ಟ್‌ಗೆ ರಾಜ್ಯ ಸರ್ಕಾರ ಮನದಟ್ಟು ಮಾಡಿಸಿ ಜಿಲ್ಲೆಯ ರೈತರ ಹಿತವನ್ನು ಕಾಪಾಡಬೇಕೆಂದು ಪ್ರತಿಭಟನಾನಿರತ ರೈತರು ಒತ್ತಾಯಿಸಿದರು. ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ನೀರು ಬಿಡುಗಡೆ ಮಾಡುತ್ತಿರುವ ಬಗ್ಗೆ ರೈತರು ಬೇಕಾದರೆ ನ್ಯಾಯಾಲಯಕ್ಕೆ ಹೋಗಲಿ ಎಂದು ಹೇಳಿರುವುದು ನಾಚಿಕೆಗೇಡು. ಸರ್ಕಾರದ ಸಚಿವರಾಗಿ ನಾಡಿನ ರೈತರ ಹಿತದ ಬಗ್ಗೆ ಚಿಂತಿಸದೆ ಉಡಾಫೆಯಾಗಿ ವರ್ತಿಸಿದ್ದಾರೆ. ಜಲಾಶಯದ ಅಚ್ಚುಕಟ್ಟು ಪ್ರದೇಶದ ನಾಲೆಗಳಿಗೆ ಕಟ್ಟು ಪದ್ಧತಿಯಲ್ಲಿ ನೀರು ಬಿಟ್ಟು, ತಮಿಳುನಾಡಿಗೆ ಮಾತ್ರ ಹೆಚ್ಚಿನ ಪ್ರಮಾಣದ ನೀರು ಬಿಟ್ಟಿದ್ದಾರೆ. ಈ ತಕ್ಷಣ ನದಿಗೆ ಬಿಡಲಾಗಿರುವ ನೀರು ಸ್ಥಗಿತಗೊಳಿಸಿ ನಾಲೆಗಳಿಗೆ ನಿರಂತರ ನೀರು ಹರಿಸುವಂತೆ ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ, ಮುಖಂಡರಾದ ಪ್ರಸನ್ನಗೌಡ, ಜಯರಾಮೇಗೌಡ ಮತ್ತಿತರರು ಇದ್ದರು.

ನಿರ್ಧಾರ ಪುನರ್ ಪರಿಶೀಲಿಸುವಂತೆ ಪ್ರಾಧಿಕಾರಕ್ಕೆ ಮನವಿ

ಬೆಂಗಳೂರು: ಪ್ರತಿನಿತ್ಯ 10,000 ಕ್ಯೂಸೆಕ್ಸ್‌ನಂತೆ 15 ದಿನಗಳ ಕಾಲ ತಮಿಳುನಾಡಿಗೆ ನೀರು ಹರಿಸುವ ನಿರ್ಧಾರ ಪುನರ್ ಪರಿಶೀಲಿಸುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಮನವಿ ಮಾಡಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.



ಕೃಷ್ಣ ಕಚೇರಿ ಬಳಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಶಿವಕುಮಾರ್, 'ನಮ್ಮಲ್ಲಿ ಮಳೆ ಕೊರತೆಯಿಂದ ನೀರಿನ ಅಭಾವ ಹೆಚ್ಚಾಗಿದೆ. ಆದರೂ ಆರಂಭದಲ್ಲಿ ನಾವು ತಮಿಳುನಾಡಿಗೆ ನೀರು ಹರಿಸಿದ್ದೇವೆ. ಆದರೂ ಅವರನ್ನು ತೃಪ್ತಿಪಡಿಸಲು ಆಗುತ್ತಿಲ್ಲ. ನಮಗೆ ಕೃಷಿ ಉದ್ದೇಶಕ್ಕಿಂತ ಕುಡಿಯುವ ಉದ್ದೇಶಕ್ಕೆ ನೀರು ಇಟ್ಟುಕೊಳ್ಳುವುದು ಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಾಧಿಕಾರಕ್ಕೆ ನಿರ್ಧಾರ ಪುನರ್ ಪರಿಶೀಲಿಸುವಂತೆ ಮನವಿ ಮಾಡುತ್ತೇವೆ' ಎಂದು ತಿಳಿಸಿದರು. ಕುಮಾರಸ್ವಾಮಿಯವರು ಸರ್ವಪಕ್ಷ ಸಭೆ ಕರೆಯುವ ಬಗ್ಗೆ ಟ್ವೀಟ್ ಮಾಡಿರುವ ಬಗ್ಗೆ ಪ್ರಶ್ನಿಸಿದಾಗ, 'ಕುಮಾರಸ್ವಾಮಿ ಅವರು ಕೇಳಿರೋದ್ರಲ್ಲಿ ಯಾವುದೇ ತಪ್ಪಿಲ್ಲ. ಕೇವಲ ಕಾವೇರಿ ವಿಚಾರ ಮಾತ್ರವಲ್ಲ, ● 9ನೇ ಪುಟಕ್ಕೆ

ನಮ್ಮ ರೈತರ ಹಿತ ಬಲಿಕೊಟ್ಟು ತಮಿಳುನಾಡಿಗೆ ನೀರು ಬಿಡುಗಡೆ

- ● ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಕಿಡಿನುಡಿ
- ● ಇಂಡಿಯಾಗೆ ಜೀವದಾನ; ರಾಜ್ಯದ ಹಿತ ಬಲಿದಾನ



ಬೆಂಗಳೂರು, ಆ.17(ಕೆಎಂಶಿ)– ಪ್ರತಿಪಕ್ಷಗಳ 'ಇಂಡಿಯಾ' ಒಗ್ಗಟ್ಟಿಗಾಗಿ ರಾಜ್ಯದ ರೈತರ ಹಿತ ಬಲಿ ಕೊಟ್ಟು ಸರ್ಕಾರ ತಮಿಳುನಾಡಿಗೆ ನೀರು ಹರಿಸುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಕಿಡಿಕಾರಿದ್ದಾರೆ.

ತಮ್ಮ ಒಗ್ಗಟ್ಟು ಬಲಪಡಿಸಲು ಜಲಸಂಪನ್ಮೂಲ ಸಚಿವರಾಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮಿಳುನಾಡಿಗೆ ಪ್ರತಿನಿತ್ಯ ನಮ್ಮ ಜಲಾಶಯಗಳಿಂದ ನೀರು ಹರಿಸಲು ಆದೇಶಿಸಿದ್ದಾರೆ.

ತಕ್ಷಣವೇ ಮುಖ್ಯಮಂತ್ರಿ ಸಿದ್ದರಾಮಯ್ಯ ಮಧ್ಯೆ ಪ್ರವೇಶಿಸಿ ನೀರು ಹರಿಸುವುದನ್ನು ತಡೆದು ರಾಜ್ಯದ ರೈತರ ಹಿತಕಾಪಾಡಬೇಕು ಎಂದು ಅವರು ಒತ್ತಾಯಿಸಿದ್ದಾರೆ. ಎನ್‌ಡಿಎ ಒಕ್ಕೂಟಕ್ಕೆ ಪರ್ಯಾಯವಾಗಿ ರಚನೆಗೊಂಡಿರುವ ಇಂಡಿಯಾದಲ್ಲಿ ಕಾಂಗ್ರೆಸ್, ತಮಿಳುನಾಡಿಗೆ ಉನ್ನತ ಸ್ಥಾನ–ಮಾನ ನೀಡಿದೆ. ಆ ಒಗ್ಗಟ್ಟನ್ನು ವರಿಷ್ಠರ ಮುಂದೆ ಪ್ರದರ್ಶಿಸಲು ಕೆಪಿಸಿಸಿ ಅಧ್ಯಕ್ಷರಾಗಿರುವ ಶಿವಕುಮಾರ್ ನಮ್ಮ ರೈತರ ಹಿತ ಬಲಿ ಕೊಡುತ್ತಿದ್ದಾರೆ ಎಂದಿದ್ದಾರೆ. ಮಳೆ ಕೊರತೆಯಿಂದ ರಾಜ್ಯ ಬರಗಾಲಕ್ಕೆ ತುತ್ತಾಗುತ್ತಿದೆ. ಕಾವೇರಿ ಜಲಾನಯನ ಪ್ರದೇಶದ ನಾಲ್ಕು ಅಣೆಕಟ್ಟೆಗಳಲ್ಲಿ ಶೇ.50ರಷ್ಟು ನೀರಿನ ಕೊರತೆ ಇದೆ. ತಮಿಳುನಾಡಿಗೆ ಹಿಂಗಾರು ಮಳೆಯಾಗಿ ಅವರ ಅಣೆಕಟ್ಟುಗಳು ಭರ್ತಿಯಾಗುತ್ತವೆ. ಆದರೆ, ಇದನ್ನು ಪರಿಗಣಿಸದೇ ಸಿದ್ದರಾಮಯ್ಯ ಸರ್ಕಾರ ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೂ ತೊಂದರೆಯಾಗುವಂತೆ ತಮಿಳುನಾಡಿಗೆ ನೀರು ಹರಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ಕಾಂಗ್ರೆಸ್ ಸರಕಾರದ ವಿರುದ್ಧ ತೀವ್ರ ರೀತಿಯಲ್ಲಿ ಹರಿಹಾಯ್ದಿದ್ದಾರೆ.

ಮೇಕೆದಾಟು ಪಾದಯಾತ್ರೆ ಹೈಡ್ರಾಮಾ ಆಡಿ, ಕನ್ನಡಿಗರ ತಲೆ ಮೇಲೆ ಮಕ್ಮಲ್ ಟೋಪಿ ಇಟ್ಟ ಕಾಂಗ್ರೆಸ್, ಈಗ ಇಂಡಿಯಾಗೆ ಜೀವದಾನ ಮಾಡಲು ರಾಜ್ಯದ ಕಾವೇರಿ ಹಿತವನ್ನೇ ಬಲಿದಾನ ಮಾಡಿದೆ. ಅಂದುಕೊಂಡಿದ್ದೇ ಆಗಿದ್ದು, ನಮ್ಮ ಭಯ ನಿಜವಾಗಿದೆ. ಕಾಂಗ್ರೆಸ್ ಸರಕಾರ ಕನ್ನಡಿಗರಿಗೆ, ಅದರಲ್ಲೂ ಅನ್ನದಾತರಿಗೆ ಘೋರ ವಿಶ್ವಾಸದ್ರೋಹ ಎಸಗಿದೆ ಎಂದು ಅವರು ಕಿಡಿಕಾರಿದ್ದಾರೆ.

ಮಳೆ ಅಭಾವದಿಂದ ಜಲಾಶಯಗಳು ತುಂಬಿಲ್ಲ. ರೈತರ ಬೆಳೆಗೆ ನೀರಿಲ್ಲ, ಬೆಂಗಳೂರಿಗೆ ಕುಡಿಯುವ ನೀರಿಗೂ ತತ್ವಾರ. ನಮ್ಮ ಹೊಟ್ಟೆಗೇ ಹಿಟ್ಟಿಲ್ಲ, ನೆರೆಮನೆಯವರ ಜುಟ್ಟಿಗೆ ಮಲ್ಲಿಗೆ ಮುಡಿಸಲು ಹೊರಟಿದೆ ಸರಕಾರ. ಕನ್ನಡಿಗರಿಗೆ ವಂಚಿಸಿ ರಾಜಾರೋಷವಾಗಿ ನೀರು ಹರಿಸುವ ಮೂಲಕ ತಮಿಳುನಾಡು ಜತೆ ರಾಜಕೀಯ ಚೌಕಾಬಾರ ಆಡುತ್ತಿದೆ. ಇದೇನು ಇನ್ನೊಂದು ಗ್ಯಾರಂಟಿನಾ? ಎಂದು ಅವರು ಪ್ರಶ್ನಿಸಿದ್ದಾರೆ. 2024ರ ಲೋಕಸಭೆ ಗೆಲುವಿಗೆ ಕಾವೇರಿ ಹಿತವನ್ನು ನೆರೆರಾಜ್ಯಕ್ಕೆ ಅಡವಿಟ್ಟಿದೆ ಹಸ್ತಪಕ್ಷ ● 9ನೇ ಪುಟಕ್ಕೆ

ಮೈಸೂರು, ಚಾಮರಾಜನಗರ ಲೋಕಸಭಾ ಕ್ಷೇತ್ರಗಳಲ್ಲಿ ನಮ್ಮ ಅಭ್ಯರ್ಥಿಗಳು ಗೆಲ್ಲಲೇಬೇಕು

● ಮೈಸೂರು ಉಸ್ತುವಾರಿ ಸಚಿವರು, ಶಾಸಕರಿಗೆ ಸಿಎಂ, ಡಿಸಿಎಂ ಟಾಸ್ಕ್ ● ಬಿಬಿಎಂಪಿಯೊಂದಿಗೆ ಮೈಸೂರು ಪಾಲಿಕೆ ಚುನಾವಣೆ



ಮೈಸೂರು, ಆ.17– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮೈಸೂರು ಹಾಗೂ ಚಾಮರಾಜನಗರ ಲೋಕಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಶತಾಯ–ಗತಾಯ ಗೆಲುವು ಸಾಧಿಸಲೇಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಟ್ಟಾಜ್ಞೆ ಮಾಡಿದ್ದಾರೆ.

ಇಂದು ಮೈಸೂರು ಜಿಲ್ಲೆಯ ಉಸ್ತುವಾರಿ ಸಚಿವರು ಹಾಗೂ ಶಾಸಕರೊಂದಿಗೆ ಸುದೀರ್ಘ ಚರ್ಚೆ ನಡೆಸಿದ ಸಿಎಂ ಹಾಗೂ ಡಿಸಿಎಂ, ಈ ಎರಡೂ ಕ್ಷೇತ್ರಗಳಲ್ಲಿ ಯಾರು ಅಭ್ಯರ್ಥಿಗಳಾಗಬೇಕೆಂಬುದರ ಬಗ್ಗೆ ಈಗಿನಿಂದಲೇ ಸಮಾಲೋಚನೆ ನಡೆಸಿ ಒಮ್ಮತದ ಅಭ್ಯರ್ಥಿ ಆಯ್ಕೆ ಮಾಡಲಾಗುವುದು. ಹಾಗೆಯೇ ಒಗ್ಗಟ್ಟಿನಿಂದ ಪಕ್ಷದ ಅಭ್ಯರ್ಥಿ ಗೆಲುವಿಗೆ ಶ್ರಮಿಸಬೇಕು ಎಂದು ಕಿವಿಮಾತು ಹೇಳಿದ್ದಾರೆ.

ಇದೇ ವೇಳೆ ಮೈಸೂರು ಮಹಾನಗರ ಪಾಲಿಕೆಗೂ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜೊತೆ ಚುನಾವಣೆ ನಡೆಸುವ ಬಗ್ಗೆಯೂ ಪ್ರಸ್ತಾಪಿಸಿದ್ದಾರೆ. ಮೈಸೂರು ಮಹಾನಗರ ಪಾಲಿಕೆ ಅಧಿಕಾರಾವಧಿ ನವೆಂಬರ್‌ಗೆ ಅಂತ್ಯಗೊಳ್ಳಲಿದೆ. ಈಗಾಗಲೇ ಬಿಬಿಎಂಪಿಗೆ ಚುನಾವಣೆಗಳನ್ನು ನಡೆಸುವ ಸಂಬಂಧ ನಿರ್ಧರಿಸಲಾಗಿದ್ದು, ಈ ಎರಡೂ ನಗರ ಪಾಲಿಕೆಗಳಿಗೆ ಏಕ ಕಾಲದಲ್ಲಿ ಚುನಾವಣೆ ನಡೆಸುವ ಸಂಬಂಧ ಸಮಾಲೋಚನೆ ನಡೆಸಲಾಗಿದೆ.

ಅಲ್ಲದೇ ಜಿಲ್ಲೆಯ ಶಾಸಕರು ಮತ್ತು ಉಸ್ತುವಾರಿ ಸಚಿವರು ಯಾವುದೇ ಗೊಂದಲಕ್ಕೆ ಅವಕಾಶ ಮಾಡಿಕೊಡದೇ ಸಮನ್ವಯತೆಯಿಂದ ಕಾರ್ಯ ನಿರ್ವಹಿಸಿಕೊಂಡು ಹೋಗುವುದು, ಸರ್ಕಾರ ಮತ್ತು ಪಕ್ಷದ ನಡುವೆ ಹೊಂದಾಣಿಕೆ ಸೂತ್ರವನ್ನು ಅನುಸರಿಸುವುದು ಹಾಗೂ ಐದು ಗ್ಯಾರಂಟಿ ಯೋಜನೆಗಳನ್ನು ಮಧ್ಯಮ ಮತ್ತು ಬಡ ವರ್ಗದ ಸಮುದಾಯದ ಮನೆ ಬಾಗಿಲಿಗೆ ತಲುಪಿಸುವ ಬಗ್ಗೆಯೂ ಚರ್ಚೆ ನಡೆಸಲಾಯಿತು.

ಈ ವೇಳೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಬಿಬಿಎಂಪಿಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸುವುದು ಖಚಿತ. ಅದೇ ರೀತಿ ಮೈಸೂರು ನಗರ ಪಾಲಿಕೆಯಲ್ಲೂ ನಾವು ಗೆಲ್ಲಲೇಬೇಕು. ಅದಕ್ಕಾಗಿ ಈಗಿನಿಂದಲೇ ತಯಾರಿ ನಡೆಸುವಂತೆ ಸೂಚಿಸಿದ್ದಾರೆ.




ಮೈಸೂರಲ್ಲಿ ಸೆಮಿ ಕಂಡಕ್ಟರ್ ಘಟಕ ಅನುಮಾನ

● 2 ಸಾವಿರ ಇಂಜಿನಿಯರ್ ಸೇರಿ 10 ಸಾವಿರ ಉದ್ಯೋಗಾವಕಾಶದ ನಿರೀಕ್ಷೆ ಹುಸಿಯಾಗುವ ಸಾಧ್ಯತೆ ● ಕರ್ನಾಟಕ ಸರ್ಕಾರದೊಂದಿಗೆ ಕಂಪನಿ ಎಂಓಯು ಮಾಡಿಕೊಂಡಿತ್ತು ● ಕಡಕೊಳದ ಕೋಚನಹಳ್ಳಿಯಲ್ಲಿ 234 ಎಕರೆ ಭೂಮಿ ● ಎಲೆಕ್ಟ್ರಾನಿಕ್ ಡಿವೈಸ್‌ಗೆ ಮೀಸಲಿಡಲಾಗಿದೆ

■ ಬಾಪುಲಿಂಗರಾಜ್ ಅರಸ್

ಮೈಸೂರು, ಆ.17–ಮೈಸೂರಲ್ಲಿ ಸ್ಥಾಪಿಸಲುದ್ದೇಶಿಸಿದ್ದ ಇಸ್ರೇಲ್ ಮೂಲದ, ದೇಶದ ಮೊದಲ ಬೃಹತ್ ಸೆಮಿ ಕಂಡಕ್ಟರ್ ಘಟಕ ಸ್ಥಾಪನೆಯಾಗುವುದು ಈಗ ಅನುಮಾನವಾಗಿದೆ. ಮೈಸೂರಿನ ಕಡಕೊಳ ಕೈಗಾರಿಕಾ ಪ್ರದೇಶದಲ್ಲಿ ಇದಕ್ಕಾಗಿ 234 ಎಕರೆ ಭೂಮಿ ಕಾಯ್ದಿರಿಸಲಾಗಿತ್ತು. ಇಂಜಿನಿಯರ್‌ಗಳು ಸೇರಿದಂತೆ ಸುಮಾರು 10 ಸಾವಿರ ಜನರಿಗೆ ಉದ್ಯೋಗ ದೊರೆಯುವ ಯೋಜನೆ ಕಾರ್ಯಗತವಾಗುವುದೇ ಅನುಮಾನವಾಗಿದೆ.

ಇಸ್ರೇಲ್ ಮೂಲದ ಐಎಸ್‌ಎಂಸಿ ಅನಲಾಗ್ ಫ್ಯಾಬ್ ಪ್ರೈವೆಟ್ ಲಿಮಿಟೆಡ್ ಮೈಸೂರಿನ ಕಡಕೊಳ ಕೈಗಾರಿಕಾ ಪ್ರದೇಶದಲ್ಲಿ ದೇಶದ ಮೊದಲ ಸೆಮಿ ಕಂಡಕ್ಟರ್ ಚಿಪ್ ತಯಾರಿಕಾ ● 9ನೇ ಪುಟಕ್ಕೆ



"ಮೈಸೂರಿನಲ್ಲಿ ಸೆಮಿ ಕಂಡಕ್ಟರ್ ಚಿಪ್ ತಯಾರಿಕಾ ಕಾರ್ಖಾನೆ ಸ್ಥಾಪಿಸಬೇಕಾಗಿದ್ದ ಕಂಪನಿಯನ್ನು ಅಮೇರಿಕಾ ಮೂಲದ ಇಂಟೆಲ್ ಕಂಪನಿ ಖರೀದಿಸಿದೆ. ಆದರೆ ಇಂಟೆಲ್ ಕಂಪನಿಯು ನಮ್ಮ ದೇಶವನ್ನು ಪ್ರವೇಶಿಸಲು ಹಲವಾರು ಕಾನೂನು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಬೇಕಾಗಿದೆ. ಈ ಕಾರಣಕ್ಕಾಗಿ ಪ್ರಧಾನಿ ಮೋದಿಯವರು ಕಾರ್ಯಪ್ರವೃತ್ತರಾಗಿದ್ದಾರೆ. ಬಸವರಾಜ ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿದ್ದಾಗ ಕರ್ನಾಟಕ ಸರ್ಕಾರ ಮತ್ತು ಸಂಬಂಧಿಸಿದ ಕಂಪನಿ ನಡುವೆ ಎಂಓಯು ಆಗಿತ್ತಾದರೂ, ಈಗ ಆ ಕಂಪನಿಯನ್ನು ಇಂಟೆಲ್ ಖರೀದಿಸಿರುವುದರಿಂದ ಎಲ್ಲಾ ಪ್ರಕ್ರಿಯೆಗಳು ಮತ್ತೆ ಮೊದಲಿನಿಂದಲೇ ಆಗಬೇಕಾಗಿದೆ.



– ಸಂಸದ ಪ್ರತಾಪ್ ಸಿಂಹ

"ಮೈಸೂರು ಅಭಿವೃದ್ಧಿಯ ಜೊತೆಗೆ ಕೈಗಾರಿಕೆಗಳ ಅಭಿವೃದ್ಧಿ ಆಗಬೇಕು. ಇದಕ್ಕೆ ಬೇಕಾದ ಪೂರಕ ಮೂಲ ಸೌಕರ್ಯವನ್ನು ಸರ್ಕಾರ ಕಲ್ಪಿಸಬೇಕು. ಯಾವುದೇ ಪಕ್ಷದ ಸರ್ಕಾರವಿದ್ದರೂ ಕೈಗಾರಿಕಾ ಬೆಳವಣಿಗೆಯನ್ನು ಉತ್ತೇಜಿಸಬೇಕು. –ವಾಸು, ಮಾಜಿ ಶಾಸಕರು ಹಾಗೂ ಕೈಗಾರಿಕಾ ಸಂಘದ ಅಧ್ಯಕ್ಷರು



ಸರ್ಕಾರದ ವೈಫಲ್ಯ ಕಾರಣ

ಸರ್ಕಾರದ ಸರಿಯಾದ ಸಹಕಾರ ಇಲ್ಲದ ಕಾರಣ ಮೈಸೂರಿನಲ್ಲಿ ಕೈಗಾರಿಕಾ ಬೆಳವಣಿಗೆ ಸಾಧ್ಯವಾಗುತ್ತಿಲ್ಲ. ಕೈಗಾರಿಕೆ ಸ್ಥಾಪನೆ ಮಾಡುವವರಿಗೆ ಸರ್ಕಾರ ಎಲ್ಲಾ ರೀತಿಯ ಮೂಲ ಸೌಕರ್ಯ ಕಲ್ಪಿಸಬೇಕು. ಆಗ ದೇಶ–ವಿದೇಶದ ಕಂಪನಿಗಳು ಕೈಗಾರಿಕೆ ಸ್ಥಾಪನೆ ಮಾಡಲು ಉತ್ಸುಕತೆ ತೋರುತ್ತವೆ. ಇಲ್ಲವೆಂದರೆ ಹೀಗೆ ಕಂಪನಿಗಳು ದೂರ ಸರಿಯುತ್ತವೆ ಎಂದು ಅಭಿಪ್ರಾಯಪಟ್ಟರು. ಮೈಸೂರಿನ ಕೆಐಎಡಿಬಿಯವರು 2013 ರಿಂದ ಕೈಗಾರಿಕಾ ಸ್ಥಾಪನೆಗೆ ಕೈಗಾರಿಕೋದ್ಯಮಿಗಳಿಗೆ ಜಾಗ ನೀಡಿಲ್ಲ. ಕೈಗಾರಿಕೆಗಳ ಸ್ಥಾಪನೆಗೆ ಕೆಐಎಡಿಬಿ ಬಳಿ ನೂರಾರು ಎಕರೆ ಭೂಮಿ ಇದೆ. ಆದರೆ ಜಾಗ ಕೊಡಲು ಮೀನಾಮೇಷ ಎಣಿಸುತ್ತಿದೆ. ಹೀಗಾದರೆ ಮೈಸೂರಿನ ಕೈಗಾರಿಕಾ ಅಭಿವೃದ್ಧಿ ಹೇಗೆ ಸಾಧ್ಯ?

–ಕೆ.ಬಿ.ಲಿಂಗರಾಜು ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಅಧ್ಯಕ್ಷ



ಮೈಸೂರಿಗೆ ಬರಲಿದೆ ಫಾಕ್ಸ್‌ಕಾನ್!



ಮೈಸೂರಿನ ಕಡಕೊಳ ಕೈಗಾರಿಕಾ ಪ್ರದೇಶದಲ್ಲಿ ಎಲೆಕ್ಟ್ರಾನಿಕ್ ಡಿವೈಸ್ ಘಟಕಕ್ಕೆ ಮೀಸಲಿಟ್ಟಿರುವ ಜಾಗದಲ್ಲಿ ಥೈವಾನ್ ಮೂಲದ ಫಾಕ್ಸ್‌ಕಾನ್ ತಂತ್ರಜ್ಞಾನ ಸಂಸ್ಥೆ ಸ್ಥಾಪನೆ ಆಗುವ ಸಾಧ್ಯತೆ ಇದೆ ಎಂದು ಸರ್ಕಾರದ ಕೈಗಾರಿಕಾ ಇಲಾಖೆಯ ಉದ್ಯೋಗ ಮಿತ್ರ ವ್ಯವಸ್ಥಾಪಕ ನಿರ್ದೇಶಕ ದೊಡ್ಡ ಬಸವರಾಜು ತಿಳಿಸಿದ್ದಾರೆ.

ಇಸ್ರೇಲ್ ಮೂಲದ ಐಎಸ್‌ಎಂಸಿ ಅನಲಾಗ್ ಫ್ಯಾಬ್ ಪ್ರೈವೆಟ್ ಲಿಮಿಟೆಡ್ ಮೈಸೂರಿನ ಕಡಕೊಳ ಕೈಗಾರಿಕಾ ಪ್ರದೇಶದಲ್ಲಿ ಸೆಮಿ ಕಂಡಕ್ಟರ್ ಚಿಪ್ ತಯಾರಿಕಾ ಘಟಕ ಸ್ಥಾಪನೆ ಮಾಡಬೇಕಿತ್ತು. ಕಂಪನಿಯ ಅಧಿಕಾರಿಗಳು ಕಡಕೊಳ ಕೈಗಾರಿಕಾ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆ ಕೂಡ ಮಾಡಿದ್ದರು. ಘಟಕ ಸ್ಥಾಪನೆ ಸಂಬಂಧ ಮಾಹಿತಿ ಕೂಡ ಪಡೆದಿದ್ದರು. ಆದರೆ ತರುವಾಯ ಕಾರಣವಿಲ್ಲದೆ ಕಂಪನಿ ಮೈಸೂರಿನಲ್ಲಿ ಚಿಪ್ ತಯಾರಿಕಾ ಘಟಕ ಸ್ಥಾಪನೆಯಿಂದ ಹಿಂದೆ ಸರಿದಿದೆ ಎಂದು ದೊಡ್ಡ ಬಸವರಾಜು "ಮೈಸೂರು ಮಿತ್ರ"ನಿಗೆ ತಿಳಿಸಿದರು.

ವೇದಾಂತ ಕಂಪನಿಯ ಸಹಯೋಗದಲ್ಲಿ ಫಾಕ್ಸ್‌ಕಾನ್ ಬೆಂಗಳೂರಿನಲ್ಲಿ 300 ಎಕರೆ ಪ್ರದೇಶದಲ್ಲಿ ಎಲೆಕ್ಟ್ರಾನಿಕ್ ವಸ್ತುಗಳ ತಯಾರಿಕಾ ಘಟಕ ಸ್ಥಾಪನೆ ಮಾಡುತ್ತಿದೆ. ಇದರ ಜೊತೆಗೆ ಕರ್ನಾಟಕದಲ್ಲಿ 2,000 ಕೋಟಿ ಹಾಗೂ 2,900 ಕೋಟಿ ರೂಪಾಯಿ ವೆಚ್ಚದ ಇನ್ನೆರಡು ಘಟಕ ಸ್ಥಾಪನೆ ಮಾಡಲು ಈಗಾಗಲೇ ಎಂಓಯು ಮಾಡಿಕೊಂಡಿದೆ. ಇದರಲ್ಲಿ ಒಂದು ಕಂಪನಿ ಮೈಸೂರಿನ ಕಡಕೊಳ ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪನೆ ಆಗುವ ಸಾಧ್ಯತೆ ಇದೆ ಎಂದರು. ವೇದಾಂತ ಕಂಪನಿಯಡಿ ಫಾಕ್ಸ್‌ಕಾನ್ ಒಂದು ಘಟಕ ಮೈಸೂರಿನಲ್ಲಿ ಸ್ಥಾಪನೆ ಆಗಬಹುದು. ಮೊಬೈಲ್ ತಯಾರಿಕೆಗೆ ಅವಶ್ಯವಿರುವ ಕಚ್ಚಾ ವಸ್ತುಗಳನ್ನು ಮೈಸೂರು ಘಟಕದಲ್ಲಿ ತಯಾರಿಸಲು ತೀರ್ಮಾನಿಸಲಾಗಿದೆ.



ಇಷ್ಟು ದೊಡ್ಡ ಬಂಡವಾಳ ಹೂಡಿಕೆಗೆ ಅವಶ್ಯ ವಿರುವ ಭೂಮಿ ಸದ್ಯ ಮೈಸೂರು ಬಿಟ್ಟು ಬೇರೆ ಎಲ್ಲೂ ಇಲ್ಲ. ಈ ಕಾರಣ ಫಾಕ್ಸ್‌ಕಾನ್ ಕಂಪನಿ ಘಟಕ ಮೈಸೂರಿನಲ್ಲೇ ಸ್ಥಾಪನೆ ಆಗುವ ಸಾಧ್ಯತೆ ಇದೆ. ಈ ವಿಚಾರವನ್ನು ಕಂಪನಿ ಅಧಿಕಾರಿಗಳಿಗೆ ಈಗಾಗಲೇ ತಿಳಿಸಲಾಗಿದೆ. ಕಂಪನಿಯವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಒಟ್ಟಾರೆ ಎಲೆಕ್ಟ್ರಾನಿಕ್ ಡಿವೈಸ್ ತಯಾರಿಕೆಗೆ ಮೀಸಲಿಟ್ಟಿರುವ ಜಾಗವನ್ನು ಅದೇ ಉದ್ದೇಶಕ್ಕೆ ಬಳಸಿಕೊಳ್ಳಲಾಗುವುದು ಎಂದು ದೊಡ್ಡ ಬಸವರಾಜು ತಿಳಿಸಿದರು.

ಫಾಕ್ಸ್‌ಕಾನ್‌ನವರು ಮತ್ತಷ್ಟು ಭೂಮಿ ಅವಶ್ಯವಿದೆ ಎಂದು ಕೇಳಿದರೆ ಅದನ್ನು ಕೊಡಲು ಕೆಐಎಡಿಬಿನವರು ಸಿದ್ಧರಿದ್ದಾರೆ. ಈ ಸಂಬಂಧ ಕಡಕೊಳ ಬಳಿಯ ಕೋಚನಹಳ್ಳಿ ಸುತ್ತಮುತ್ತ 404 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ. ಭೂ ಸ್ವಾಧೀನಕ್ಕೆ ರೈತರಿಗೆ ನೋಟಿಸ್ ಕೂಡ ನೀಡಲಾಗಿದೆ. ಅಡಿಷನಲ್ ಡೈರಕ್ಟೊರೇಟ್ ಆಫ್ ಲ್ಯಾಂಡ್ ರೆಕಾರ್ಡ್‌ನಲ್ಲಿ ಭೂ ಸ್ವಾಧೀನದ ಅಂತಿಮ ಪ್ರಕ್ರಿಯೆಗಳು ನಡೆಯುತ್ತಿದೆ ಎಂದು ಮೈಸೂರಿನ ಕೆಐಎಡಿಬಿ ಅಧಿಕಾರಿಯೊಬ್ಬರು ತಿಳಿಸಿದರು

ಗುಣಮಟ್ಟದ ಶಿಕ್ಷಣದಿಂದ ವಿಶ್ವದಲ್ಲೇ ಪ್ರಖ್ಯಾತಿ ಗಳಿಸಿದ್ದ ಮೈಸೂರು ವಿವಿ ಈಗ ಪ್ರಶ್ನಾರ್ಥಕ

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಬೇಸರ

ಮೈಸೂರು, ಆ.17(ಬಿಎಲ್‌ಯು)– ಗುಣಮಟ್ಟದ ಶಿಕ್ಷಣದಿಂದ ಇಡೀ ವಿಶ್ವದಲ್ಲೇ ಪ್ರಖ್ಯಾತಿ ಗಳಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ಬಗ್ಗೆ ಈಗ ನಾನಾ ರೀತಿ ಪ್ರಶ್ನೆ ಮಾಡುವ ಪರಿಸ್ಥಿತಿ ಎದುರಾಗಿದೆ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಮಾನಸಗಂಗೋತ್ರಿಯ ಶ್ರೀ ಬಸವೇಶ್ವರ ಕೇಂದ್ರದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಹಾಗೂ ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ ಸಂಯುಕ್ತವಾಗಿ ಆಯೋಜಿಸಿದ್ದ ಬಸವ ಜಯಂತಿ ಮತ್ತು ಶೂನ್ಯ ಸಂಪಾದನೆಗಳು ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಈಗಿನಂತೆ ನ್ಯಾಕ್ ಸೇರಿದಂತೆ ಯಾವುದೇ ಮಾನ್ಯತೆ ಇಲ್ಲದ ಸಮಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಗುಣಮಟ್ಟದ ಶಿಕ್ಷಣದ ಹೆಗ್ಗಳಿಕೆ ಗಳಿಸಿತ್ತು ಎಂದರು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ ಇಡೀ ವಿಶ್ವದಲ್ಲಿ ಎಲ್ಲೆಡೆ ಕೆಲಸಕ್ಕೆ ಹೋದರೂ ಸಂದರ್ಶನವಿಲ್ಲದೆ ನೇಮಕಗೊಳ್ಳುತ್ತಿದ್ದರು.

ಮೈಸೂರು ವಿಶ್ವವಿದ್ಯಾನಿಲಯದ ಗುಣ



ಮಟ್ಟದ ಶಿಕ್ಷಣ ಅಷ್ಟರ ಮಟ್ಟಿಗೆ ಜಗತ್ತಿನಲ್ಲಿ ಖ್ಯಾತಿಯಾಗಿತ್ತು. ಆದರೆ ಈಗ ಇಲ್ಲಿನ ಶಿಕ್ಷಣ ವ್ಯವಸ್ಥೆಯನ್ನು ಪ್ರಶ್ನೆ ಮಾಡುವಂತೆ ಆಗಿದೆ ಎಂದು ಸುತ್ತೂರು ಶ್ರೀಗಳು ಅಸಮಾಧಾನ ವ್ಯಕ್ತಪಡಿಸಿದರು.

ಮೈಸೂರು ವಿಶ್ವವಿದ್ಯಾನಿಲಯವು ಸ್ವಸಾಮರ್ಥ್ಯದಿಂದ ತನ್ನ ಶಕ್ತಿ ವೃದ್ಧಿಸಿಕೊಂಡಿತ್ತು. ಇಲ್ಲಿ ಕಲಿತವರು ವಿಶ್ವದ ಎಲ್ಲಾ ದೇಶಗಳಲ್ಲಿ ಉನ್ನತ ವ್ಯಾಸಂಗಕ್ಕೆ ಹೋಗುತ್ತಿದ್ದರು. ಆದರೆ ಈಗಿನ ಪರಿಸ್ಥಿತಿ ಪ್ರಶ್ನಾರ್ಥಕವಾಗಿದೆ ಎಂದು ಹೇಳಿದರು.

ಬಸವಣ್ಣನವರ ವಿಚಾರಧಾರೆಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಸ್ತಾರಗೊಳ್ಳುತ್ತಿದೆ. ಈ ಮೂಲಕ ಸರ್ವಕಾಲಕ್ಕೂ ಸರ್ವವ್ಯಾಪಿಯಾಗಿ ಸಾಗುತ್ತಿರುವ ಬಸವಾದಿ ಶರಣರ ಸಾಹಿತ್ಯ ಆದರ್ಶಪ್ರಾಯವಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ವಿ.ಆರ್.ಶೈಲಜಾ ಹೇಳಿದರು.

ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಎ.ಮುರಿಗೆಪ್ಪ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಪ್ರೊ.ವಿಜಯಕುಮಾರಿ ಎಸ್.ಕರಿಕಲ್, ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಚಂದ್ರಶೇಖರಯ್ಯ ವೇದಿಕೆಯಲ್ಲಿ ಉಪಸ್ಥಿತರಿದ್ದರು.

> "ಹಲವು ರೀತಿಯ ವಿಚಾರಧಾರೆಗಳಿಂದ ಬುದ್ಧ, ಬಸವ ಹಾಗೂ ಅಂಬೇಡ್ಕರ್ ಯಾವಾಗಲೂ ಪ್ರಸ್ತುತರಾಗಿದ್ದಾರೆ. ಆಧ್ಯಾತ್ಮಿಕ ಹಾಗೂ ಭೌತಿಕ ಬದುಕಿಗೆ ಇವರು ಮಾರ್ಗದರ್ಶಕರಾಗಿದ್ದಾರೆ. ಮೊದಲು ನೀನು ಸುಧಾರಣೆಯಾಗು, ನಂತರ ಜಗತ್ತಿನಲ್ಲಿ ಸುಧಾರಣೆ ತರಲು ಪ್ರಯತ್ನ ಮಾಡು ಎಂಬ ಬಸವಣ್ಣನವರ ಮಾತು ಪ್ರಸ್ತುತ ಎಲ್ಲರಿಗೂ ಆದರ್ಶವಾಗಿದೆ.
> –ಸುತ್ತೂರು ಶ್ರೀಗಳು.

ಸಹಕಾರಿ ಕ್ಷೇತ್ರದಲ್ಲಿ ಕಾನೂನು ಕಾಯ್ದೆಯಡಿ ವಹಿವಾಟು

ಮೈಸೂರು, ಆ.17(ಜಿಎ)– ಸಹಕಾರಿ ಕ್ಷೇತ್ರದಲ್ಲಿ ಈ ಹಿಂದೆ ಯಾವುದೇ ವಹಿವಾಟುಗಳು ಶಿಸ್ತು ಪಾಲಿಸದೇ ನಡೆಯುತ್ತಿತ್ತು. ಆದರೆ, ಈಗ ಎಲ್ಲವೂ ಕಾನೂನು ಕಾಯ್ದೆಯಡಿ ನಡೆಯುತ್ತಿದೆ ಎಂದು ಸೌಹಾರ್ದ ಸಂಯುಕ್ತ ಸಹಕಾರಿ ಮತ್ತು ಮುಡಾ ಮಾಜಿ ಅಧ್ಯಕ್ಷರೂ ಆದ ಹೆಚ್.ವಿ ರಾಜೀವ್ ತಿಳಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್‌ನ ಎಸ್.ಪಿ.ಭಟ್ ಸಭಾಂಗಣದಲ್ಲಿ ಸಹಕಾರ ಭಾರತಿ ವತಿಯಿಂದ ಸಹಕಾರ ಸಂಘಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಮತ್ತು ಸದಸ್ಯರಿಗೆ ಏರ್ಪಡಿಸಿದ್ದ ಒಂದು ದಿನದ ಅಭ್ಯಾಸ ವರ್ಗ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಹಕಾರಿಗಳನ್ನು ಒಗ್ಗೂಡಿಸುವ ಕೆಲಸವನ್ನು ಮಾಡಲಾಗುತ್ತಿದ್ದು, ಇದರಿಂದ ಅನೇಕ ಬದಲಾವಣೆಗಳು ಆಗಿವೆ. ಮಹಿಳೆಯರು ಸಹಕಾರಿ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸುತ್ತಿದ್ದಾರೆ. ಮಹಿಳೆಯರು ಸಹಕಾರಿ ಕ್ಷೇತ್ರದಲ್ಲಿ ಬೆಳವಣಿಗೆ ಹೊಂದಲು ಈ ರೀತಿ ಕಾರ್ಯಕ್ರಮಗಳು ಸಹಕಾರಿಯಾಗಿವೆ ಎಂದರು.

ಯಾವುದೇ ಸರ್ಕಾರಗಳು ಅಧಿಕಾರಕ್ಕೆ ಬಂದಾಗ ಕಾಯ್ದೆಗಳನ್ನು ಅವರ ಅಗತ್ಯಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಳ್ಳುತ್ತಾರೆ. ಆದರೆ, ನಾವು ಯಾವುದೇ ಸರ್ಕಾರದ ಪರವಾಗಿಲ್ಲ. ವಿರೋಧವಾಗಿಲ್ಲ. ಆಳ್ವಿಕೆ ಮಾಡುವ ಸರ್ಕಾರಗಳಿಗೆ ಸಮಸ್ಯೆಗಳ ಮನವರಿಕೆ ಮಾಡಲು ನಮ್ಮ ಸಂಘಟನೆಯೇ ಬಹಳ ಮುಖ್ಯ. ಇತರೆ ಸಮಸ್ಯೆಗಳಿಗೆ ಪರಿಹಾರ ಹುಡುಕಿಕೊಳ್ಳೋಣ ಎಂದು ಸಲಹೆ ನೀಡಿದರು.

ಕೇಂದ್ರ ಸರ್ಕಾರವೂ ಗ್ರಾಮೀಣ ಮಟ್ಟದಿಂದ ಸಹಕಾರವನ್ನು ಬೆಳೆಸಬೇಕೆಂದು ಹಲವು ಆಯಾಮಗಳಲ್ಲಿ ಸಂಪರ್ಕಿಸಿ ಮಾಧ್ಯಮದ ಮೂಲಕ ಒಗ್ಗೂಡಿಸುವ ಚಿಂತನೆ ಇಟ್ಟುಕೊಂಡಿದೆ. ಈ ಹಿಂದೆ ಸಹಕಾರಿ ಕ್ಷೇತ್ರ ರಾಜ್ಯ ಸರ್ಕಾರದ ಒಂದು ಭಾಗವಾಗಿತ್ತು. ಕೇಂದ್ರದ ಕೃಷಿ ಇಲಾಖೆಯಡಿ ಸಹಕಾರ ಕ್ಷೇತ್ರ ಇದ್ದುದರಿಂದ ನಾವು ಸಮಸ್ಯೆಗಳನ್ನು ಯಾರಿಗೆ ತಿಳಿಸಬೇಕು ಎಂಬ ಗೊಂದಲವಿತ್ತು. ನೋಟು ಅಮಾನ್ಯೀಕರಣವಾದಾಗ ನಮ್ಮ ಸಮಸ್ಯೆಯನ್ನು ಯಾರ ಬಳಿ ಹೇಳಬೇಕೆಂದು ತಿಳಿದಿರಲಿಲ್ಲ. ಅಂದು ಕೃಷಿ ಸಚಿವರಿಗೂ ಅದರ ಬಗ್ಗೆ ಅರಿವು ಇರಲಿಲ್ಲ. ಅದಕ್ಕಾಗಿ ಕೇಂದ್ರ ಸರ್ಕಾರವು ಸಂಘಟನೆಗಳ ರೂಪದಲ್ಲಿ ರಾಷ್ಟ್ರದ ವಿಚಾರಗಳಲ್ಲಿ ಭಾಗವಹಿಸುವುದಕ್ಕೆ ಈಗ ವಿಶೇಷ ವೇದಿಕೆ ಕಲ್ಪಿಸಿದೆ ಎಂದು ತಿಳಿಸಿದರು.

ಈ ಹಿಂದೆ ಸಹಕಾರ ಕ್ಷೇತ್ರದಲ್ಲಿ ಯಾವುದೇ ನಿಯಮಾವಳಿಗಳಡಿ ವಹಿವಾಟು ನಡೆಯುತ್ತಿರಲಿಲ್ಲ. ಶಿಸ್ತು ಪಾಲನೆಯೂ ಆಗುತ್ತಿರಲಿಲ್ಲ. ಆದರೆ, ಈಗ ಎಲ್ಲಾ ಸಹಕಾರಿಗಳು ಅಭ್ಯಾಸ ವರ್ಗ ಕಾರ್ಯಕ್ರಮದಿಂದ ಸಹಕಾರ ಕ್ಷೇತ್ರ ಕಾನೂನು ಮತ್ತು ಕಾಯ್ದೆಗಳನ್ನು ಅರಿತುಕೊಂಡು ಉತ್ತಮವಾಗಿ ವಹಿವಾಟು ನಡೆಸುತ್ತಿವೆ ಎಂದು ಹರ್ಷ ವ್ಯಕ್ತಪಡಿಸಿದರು. ನಂತರ ಕಾರ್ಯಕ್ರಮದಲ್ಲಿ ಸಹಕಾರ ಭಾರತಿ ಉಪಾಧ್ಯಕ್ಷ ಬಿ.ಹೆಚ್.ಕೃಷ್ಣರೆಡ್ಡಿ ಅವರು ಸಹಕಾರ ಸಂಘಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರು, ಜವಾಬ್ದಾರಿಗಳು ಮತ್ತು ಪ್ರಚಲಿತ ವಿದ್ಯಮಾನಗಳ ಕುರಿತು ವಿವರಿಸಿದರು. ಹಾಲು ಉತ್ಪಾದಕರ ಸಮಸ್ಯೆಗಳು ಮತ್ತು ಪರಿಹಾರಗಳ ಕುರಿತು ಹಾಲು ಪ್ರಕೋಷ್ಠ ಪ್ರಮುಖರಾದ ನರಸಿಂಹ ಕಾಮತ್ ಸಂವಾದ ನಡೆಸಿದರು. ಸಹಕಾರ ಭಾರತಿ ಜಿಲ್ಲಾಧ್ಯಕ್ಷ ಬಿ.ಮಹದೇವಸ್ವಾಮಿ, ರಾಜ್ಯ ಉಪಾಧ್ಯಕ್ಷೆ ನಾಗಮಣಿ, ನೆಕ್ಟರ್ ಫ್ರೆಶ್ ಮಾಲೀಕರಾದ ಛಾಯ, ರಾಜ್ಯ ಕಾರ್ಯಕಾರಿಣಿ ಸದಸ್ಯ ಎಸ್.ಆರ್.ನಾರಾಯಣರಾವ್ ಮತ್ತು ಸಂಘಟನಾ ಕಾರ್ಯದರ್ಶಿ ಬಿ.ಆರ್.ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.



ಹಿರಿಯ ನಾಗರಿಕರ ಸಾರ್ವತ್ರಿಕ ಪಿಂಚಣಿ ಯೋಜನೆ ಜಾರಿಗೆ ಆಗ್ರಹಿಸಿ ನಾಳೆ ಸಮಾವೇಶ



ಮೈಸೂರು,ಆ.17(ಪಿಎಂ)– ಪಿಂಚಣಿದಾರರ ಸಂಘಟನೆಗಳ ಸಮನ್ವಯ ಸಮಿತಿ ವತಿಯಿಂದ ಹಿರಿಯ ನಾಗರಿಕರಿಗೆ ಕೊಡುಗೆ ರಹಿತ ಮಾಸಿಕ ಕನಿಷ್ಠ 3 ಸಾವಿರ ರೂ. ಸಾರ್ವತ್ರಿಕ ಪಿಂಚಣಿ ಯೋಜನೆ ಜಾರಿಗೊಳಿಸಲು ಒತ್ತಾಯಿಸಿ ಆ.19ರಂದು 'ಎಲ್ಲರಿಗೂ ಪಿಂಚಣಿ' ಶೀರ್ಷಿಕೆಯಡಿ ಸಮಾವೇಶ ಆಯೋಜಿಸಲಾಗಿದೆ ಎಂದು ಸಮಿತಿ ಸಂಚಾಲಕ ಸಿ.ಆರ್.ಕೃಷ್ಣಮೂರ್ತಿ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ದೇಶದಲ್ಲಿ ಎಲ್ಲಾ ಪಿಂಚಣಿ ಯೋಜನೆಗಳು ಕೊಡುಗೆ ಪಿಂಚಣಿ ಯೋಜನೆಗಳಾಗಿವೆ. ಅಂದರೆ ಸೇವಾ ಅವಧಿಯಲ್ಲಿ ನೌಕರರು ಪಾವತಿಸಿದ ಹಣದಲ್ಲಿ ಪಿಂಚಣಿ ನೀಡುವ ವ್ಯವಸ್ಥೆಯಾಗಿದೆ. ಆದರೆ ಯಾವುದೇ ರೀತಿಯ ಪಿಂಚಣಿ ಇಲ್ಲದ 60 ವರ್ಷ ಮೇಲ್ಪಟ್ಟ ಪ್ರತಿಯೊಬ್ಬ ಹಿರಿಯ ನಾಗರಿಕರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಾರ್ವತ್ರಿಕ ಪಿಂಚಣಿ ಯೋಜನೆ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು. ಈಗಾಗಲೇ ಯುರೋಪ್ ದೇಶಗಳಲ್ಲಿ ಹೋರಾಟದ ಫಲವಾಗಿ ಹಿರಿಯ ನಾಗರಿಕರಿಗಾಗಿ ಸಾರ್ವತ್ರಿಕ ಪಿಂಚಣಿ ಯೋಜನೆ ಜಾರಿಗೊಳಿಸಲಾಗಿದೆ. ನಮ್ಮ ದೇಶದಲ್ಲಿ ಈ ಯೋಜನೆ ಜಾರಿಯಾಗಬೇಕು. ಈ ನಿಟ್ಟಿನಲ್ಲಿ ಆಯೋಜಿಸಿರುವ ಸದರಿ ಸಮಾವೇಶದಲ್ಲಿ ಚರ್ಚಿಸಿ ಹೋರಾಟದ ಸಂಬಂಧ ರೂಪುರೇಷೆ ಸಿದ್ಧಪಡಿಸಲಾಗುವುದು ಎಂದರು.

1995 ಪಿಂಚಣಿ ಯೋಜನೆಯಡಿ ಪಿಂಚಣಿ ಹೆಚ್ಚಳ ಮಾಡಬೇಕು ಹಾಗೂ ಸರ್ಕಾರಿ ವ್ಯವಸ್ಥೆಯಲ್ಲಿ ಹಳೇ ಪಿಂಚಣಿ ಯೋಜನೆ ಮರು ಜಾರಿಗೊಳಿಸಬೇಕೆಂದೂ ಒತ್ತಾಯಿಸಲಾಗುವುದು ಎಂದರು. ಸಮಿತಿ ಸದಸ್ಯರಾದ ಶ್ರೀಕಾಂತ್, ನರಸಿಂಹಮೂರ್ತಿ, ಬಿ.ಆರ್.ಉಮಾಕಾಂತ್, ಗೋವಿಂದರಾಜು, ಪಿ.ಎಂ.ಪರಮೇಶ್ವರಯ್ಯ ಗೋಷ್ಠಿಯಲ್ಲಿದ್ದರು.

ಭಾರತೀಯ ಪರಂಪರೆಯ ಶ್ರೇಷ್ಠ ವ್ಯಕ್ತಿಗಳನ್ನು ಸ್ಮರಿಸಬೇಕು

'ಸದ್ಗುರು ದರ್ಶನ' ಕೃತಿ ಲೋಕಾರ್ಪಣೆ ಮಾಡಿ ಡಾ.ಎಚ್.ವಿ.ನಾಗರಾಜರಾವ್ ಅಭಿಮತ

ಮೈಸೂರು, ಆ. 17–ನಮ್ಮ ಭಾರತೀಯ ಪರಂಪರೆಯ ಶ್ರೇಷ್ಠ ಸಾಧಕರನ್ನು, ಚೇತನಗಳನ್ನು ಸ್ಮರಿಸಬೇಕು ಎಂದು ಹಿರಿಯ ಸಂಸ್ಕೃತ ವಿದ್ವಾಂಸ ಡಾ.ಎಚ್.ವಿ. ನಾಗರಾಜರಾವ್ ಅಭಿಪ್ರಾಯಪಟ್ಟರು.

ಅವರು ಕೃಷ್ಣಮೂರ್ತಿಪುರಂ ನಮನ ಕಲಾ ಮಂಟಪದಲ್ಲಿ ನಡೆದ ಕೃತಿ ಲೋಕಾರ್ಪಣೆ ಮತ್ತು ಸ್ವಾತಂತ್ರ್ಯೋತ್ಸವ ಕವಿಗೋಷ್ಠಿ ಸಮಾರಂಭದಲ್ಲಿ ಹಿರಿಯ ಲೇಖಕ ಟಿ.ಎಸ್.ನಾಗರಾಜ ರಾವ್ ಸಂಪಾದಿತ 'ಸದ್ಗುರು ದರ್ಶನ' ಕೃತಿಯನ್ನು ಲೋಕಾರ್ಪಣೆ ಮಾಡಿ ಮಾತನಾಡುತ್ತಿದ್ದರು.

ಕೃತಿಯಲ್ಲಿ ಆಚಾರ್ಯತ್ರಯರೊಂದಿಗೆ ಪರಂಪರೆಯ ಶ್ರೇಷ್ಠ ಗುರುಗಳ ಕುರಿತಂತೆ ನಾಡಿನ ವಿವಿಧ ವಿದ್ವಾಂಸರು ಬರೆದ ಮಹತ್ವದ ಲೇಖನಗಳಿವೆ ಎಂದ ಅವರು, ವೇದ ಉಪನಿಷತ್ತುಗಳ ಬಗ್ಗೆ ವಿದೇಶಿ ವಿದ್ವಾಂಸರಿಗಿರುವಷ್ಟು ಕುತೂಹಲ ಮತ್ತು ಅಭಿಮಾನ ನಮಗಿಲ್ಲದಿರುವುದು ವಿಷಾದನೀಯ ಎಂದು ಅವರು ನುಡಿದರು.

ತತ್ವಶಾಸ್ತ್ರ ಎಂಬುದು ಒಂದು ಹರಿಯುವ ನದಿಯಿದ್ದಂತೆ. ಇದನ್ನು ನಮಗೆ ಕೊಡಮಾಡಿದ ಸಾಧಕರ ಬಗ್ಗೆ, ದಾಸಪರಂಪರೆಯ ಬಗ್ಗೆ ಲೇಖನಗಳಿರುವ ಈ ಕೃತಿ ಕನ್ನಡಕ್ಕೆ, ಭಾರತೀಯ ಪರಂಪರೆಗೆ ಕೊಟ್ಟ ಕೊಡುಗೆ ಎಂದು ಡಾ.ಎಚ್.ವಿ.ನಾಗರಾಜರಾವ್ ಅಭಿಪ್ರಾಯಪಟ್ಟರು.

ಮೂಲತಃ ಭಾರತ ಜ್ಞಾನಪ್ರಧಾನ ದೇಶವಾಗಿದ್ದು, ಇಲ್ಲಿ ವಿದ್ಯೆಗೆ ಹೆಚ್ಚಿನ ಮಹತ್ವವಿತ್ತು. ಸಂಸ್ಕೃತ ಭಾಷೆ ವಿಶ್ವವ್ಯಾಪಿ ಭಾಷೆಯಾಗಿದ್ದು ಸಂಸ್ಕೃತದಲ್ಲಿ ದೇಶಾದ್ಯಂತ ಅನೇಕ ವಿದ್ವಾಂಸರು ತಮ್ಮ ಕೊಡುಗೆಯನ್ನು ನೀಡಿದ್ದು, ಅದನ್ನು ವಿದೇಶಿಯರೂ ಅಧ್ಯಯನ ಮಾಡುತ್ತಿರುವುದು ಭಾರತೀಯ ಪರಂಪರೆಯ ಹೆಮ್ಮೆ ಮತ್ತು ಅಭಿಮಾನಕ್ಕೆ ಕಾರಣ ಎಂದು ಅವರು ನುಡಿದರು.

ಹಿರಿಯ ಸಮಾಜಸೇವಕ, ಚಿಂತಕ ಡಾ.ಕೆ.ರಘುರಾಂ ವಾಜಪೇಯಿ ಮಾತನಾಡಿ, ಭಾರತೀಯ ಸಂಸ್ಕೃತಿಯಲ್ಲಿ ಆಚಾರ್ಯರಿಗೆ ಮತ್ತು ಆಧ್ಯಾತ್ಮಿಕ ಗುರುಗಳಿಗೆ ವಿಶೇಷ ಸ್ಥಾನವಿದೆ. ಲೋಕಕ್ಷೇಮವನ್ನೇ ಗುರಿಯಾಗುಳ್ಳ ಮಹನೀಯರ ಕುರಿತಾದ ಕೃತಿ ಬಿಡುಗಡೆ ಹಾಗೂ ಸ್ವಾತಂತ್ರ್ಯದ ಹಬ್ಬ ಸಮ್ಮಿಳಿತಗೊಂಡಿರುವುದು ಸಂತಸ ತಂದಿದೆ. ನಮ್ಮ ಪರಂಪರೆಯ ಅರಿವು ಭಾರತೀಯರಿಗೆ ಅತ್ಯಂತ ಅಗತ್ಯ ಎಂದು ನುಡಿದರು. ಕೃತಿಯ ಸಂಪಾದಕ ತಾ.ಶ್ರೀ. ನಾಗರಾಜರಾವ್ ಮಾತನಾಡಿ, ಕೃತಿ ಹೊರಬರುವಲ್ಲಿ ಸಹಕರಿಸಿದ ಎಲ್ಲರಿಗೂ ವಂದಿಸಿ, ಕೃತಜ್ಞತೆ ತಿಳಿಸಿದರು.

ಇದೇ ವೇಳೆ 77ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ವಿಶ್ರಾಂತ ಬಿಎಸ್‌ಎಫ್ ಯೋಧ ಧ್ರುವರಾವ್ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು. ವಂಗೀಪುರ ನಂಬಿಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದರು.



ಅರ್ಜಿ ಆಹ್ವಾನ

ಮೈಸೂರು,ಆ.17–ಮೈಸೂರಿನ ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜಿನ 2023–24ನೇ ಶೈಕ್ಷಣಿಕ ಸಾಲಿಗೆ 10 ತಿಂಗಳ ಅವಧಿಗೆ ಅತಿಥಿ ಉಪನ್ಯಾಸಕ/ಸಂಪನ್ಮೂಲ ವ್ಯಕ್ತಿಗಳಾಗಿ ಬೋಧನೆ ಮಾಡಲು ಇಚ್ಛಿಸುವ ಅಭ್ಯರ್ಥಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿಗದಿಪಡಿಸಿದ ಸಂಚಿತ ಗೌರವ ಸಂಭಾವನೆ ಗೌರವ ಧನದ ಆಧಾರದ ಮೇಲೆ ಕಾರ್ಯ ನಿರ್ವಹಿಸಲು ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆ.22 ಅರ್ಜಿ ಸಲ್ಲಿಸಲು ಕೊನೆಯ ದಿನ. ಆ.24ರಂದು ಮೈಸೂರಿನ ಕಾವಾ ಕಾಲೇಜಿನಲ್ಲಿ ಬೆಳಗ್ಗೆ 11 ಗಂಟೆಗೆ ಸಂದರ್ಶನವನ್ನು ನಡೆಸಲಾಗುವುದು. ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ www.mysore.nic.in ಅಥವಾ www.cavamysore.karntaka.gov.in ಮತ್ತು ಕಾರ್ಯಾಲಯದ ದೂ.ಸಂ: 0821–2438931 ಅನ್ನು ಸಂಪರ್ಕಿಸಬಹುದು ಎಂದು ಕಾವಾ ಕಾಲೇಜಿನ ಡೀನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರಿನ ಪೇರೆಂಟ್ಸ್ ಅಸೋಸಿಯೇಷನ್ ಆಫ್ ಡೆಫ್ ಚಿಲ್ಡ್ರನ್‌ನವರು ನಡೆಸುತ್ತಿರುವ ಇನ್ಸ್‌ಟ್ಯೂಟ್ ಆಫ್ ಮದರ್ ಅಂಡ್ ಡೆಫ್ ಚೈಲ್ಡ್ ಸಂಸ್ಥೆಯಲ್ಲಿ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ಕಾರ್ಯಕಾರಿ ಸಮಿತಿ ಸದಸ್ಯ ಗಿರೀಶ್ ಧ್ವಜಾರೋಹಣ ನೆರವೇರಿಸಿದರು. ಸದಸ್ಯರಾದ ಸಿದ್ದೇಗೌಡ, ದಿನಕರ್ ಶೆಟ್ಟಿ, ಓಂಪ್ರಕಾಶ್, ಹರಿಯಪ್ಪ ನಾಯಕ್, ಪ್ರಭಾಕರಯ್ಯ, ಶ್ರೀಮತಿ ಜಲಜ ಗೋವಿಂದಪ್ಪ, ಶಿಕ್ಷಕಿಯರು ಹಾಗೂ ಶ್ರವಣದೋಷ ಮಕ್ಕಳು ಇದ್ದಾರೆ.

ಎಸ್.ಎಂ.ದರ್ಶನ್‌ಗೆ ಡಾಕ್ಟರ್ ಆಫ್ ಫಿಲಾಸಫಿ ಪದವಿ

ಮೈಸೂರು,ಆ.17(ಪಿಎಂ)– ಬೆಳಗಾವಿಯ



ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯವು (ವಿಟಿಯು) ಎಸ್.ಎಂ.ದರ್ಶನ್ ಅವರಿಗೆ 'ಫ್ಯಾಕಲ್ಟಿ ಆಫ್ ಮೆಕ್ಯಾನಿಕಲ್ ಎಂಜಿನಿಯರಿಂಗ್ ಸೈನ್ಸ್' ವಿಭಾಗದಲ್ಲಿ 'ಡಾಕ್ಟರ್ ಆಫ್ ಫಿಲಾಸಫಿ' ಪದವಿ ನೀಡಿದೆ. ಬಿ.ಸುರೇಶ್ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ ಮಹಾಪ್ರಬಂಧಕ್ಕೆ ವಿಟಿಯು ಅವರಿಗೆ ಡಾಕ್ಟರ್ ಆಫ್ ಫಿಲಾಸಫಿ ಪದವಿ ನೀಡಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ. ಡಾ.ಎಸ್.ಎಂ.ದರ್ಶನ್ ಅವರು ಎಸ್.ಶ್ರೀನಿವಾಸಮೂರ್ತಿ ಮತ್ತು ಎಸ್. ವಿಜಯಲಕ್ಷ್ಮೀ ದಂಪತಿ ಪುತ್ರ.

ನಾಳೆ ಡಾ.ಎಸ್‌ಪಿಬಿ ಗೀತೆಗಳ ಗಾಯನ



ಮೈಸೂರು,ಆ.17(ಪಿಎಂ)–ಗಾನ ಚಂದನ ಕಲಾಬಳಗದ ವತಿಯಿಂದ ಆ.19ರಂದು ಖ್ಯಾತ ಗಾಯಕ ಡಾ.ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರ ಗೀತೆಗಳ ಗಾಯನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕಲಾಬಳಗದ ಅಧ್ಯಕ್ಷ ಆರ್.ಸುಧೀಂದ್ರ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ಅಂದು ಸಂಜೆ 5ಕ್ಕೆ ಕಾರ್ಯಕ್ರಮ ನಡೆಯಲಿದೆ. ಶಾಸಕ ಟಿ.ಎಸ್.ಶ್ರೀವತ್ಸ, ಮೇಯರ್ ಶಿವಕುಮಾರ್ ಮತ್ತಿತರರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಡಾ.ಎಸ್‌ಪಿಬಿ ಅವರ ಗೀತೆಗಳನ್ನು 9 ಮಂದಿ ಗಾಯಕರು ಸಾದರಪಡಿಸಲಿದ್ದಾರೆ. ಸಾರ್ವಜನಿಕರಿಗೆ ಪ್ರವೇಶ ಉಚಿತವಿದೆ ಎಂದರು. ಗಾಯಕರಾದ ಆರ್.ನಟರಾಜ್, ಎಂ.ಡಿ.ಪಾರ್ಥಸಾರಥಿ, ಶಶಿಕಲಾ, ಮಧುಸೂದನ್ ಸುದ್ದಿಗೋಷ್ಠಿಯಲ್ಲಿದ್ದರು.

ಅಂಗಾಂಗ ದಾನದ ಮಹತ್ವ ಕುರಿತು ಜಾಗೃತಿ



ಮೈಸೂರು, ಆ. 17– ಸಾವಿನ ನಂತರ ನಮ್ಮ ಕೆಲವು ಅಂಗಗಳು ಉಪಯೋಗ ಆಗಬಹುದು. ತಲೆ ಕೂದಲು, ಚರ್ಮ, ಹೃದಯ, ಕಣ್ಣು ಇತರ ಎಲ್ಲಾ ಭಾಗಗಳನ್ನು ನಾವು ದಾನ ಮಾಡಬಹುದು. ಆದರೆ ಅದಕ್ಕೆ ಸಮಯದ ಅವಧಿ ಇದ್ದು ನಿರ್ದಿಷ್ಟ ಸಮಯದ ಒಳಗೆ ಅವುಗಳ ದಾನ ಮಾಡುವುದರಿಂದ ಬೇರೊಬ್ಬರಿಗೆ ಜೀವದಾನ ಮಾಡುವ ಒಳ್ಳೆಯ ಕಾರ್ಯ ನಮ್ಮಿಂದಾಗಬಹುದು ಎಂದು ಎಂ.ಎಸ್. ಮಲ್ಲಿಕಾರ್ಜುನ ಸ್ವಾಮಿ ಹೇಳಿದರು.

ಸರಸ್ವತಿಪುರಂನಲ್ಲಿರುವ ಟಿಟಿಎಲ್ ಕಾಲೇಜು ಆವರಣದಲ್ಲಿ, ಟಿಟಿಎಲ್ ಟ್ರಸ್ಟ್ ಮತ್ತು ರಾಷ್ಟ್ರೀಯ ದೇಹಾಂಗ ದಾನ ಜಾಗೃತಿ ಸಮಿತಿ ಹಾಗೂ ಟಿಟಿಎಲ್ ವಾಣಿಜ್ಯ ವ್ಯವಹಾರ ನಿರ್ವಹಣಾ ಕಾಲೇಜು ಮತ್ತು ಟಿಟಿಎಲ್ ಸ್ವತಂತ್ರ ಪದವಿ ಪೂರ್ವ ಕಾಲೇಜು ವತಿಯಿಂದ ಅಂಗಾಂಗ ದಾನದ ಮಹತ್ವ ಮತ್ತು ಜಾಗೃತಿ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಯುವ ಜನತೆಯಲ್ಲಿ ಅಂಗಾಂಗ ದಾನ ಮಾಡಲು ಎರಡು ಗುಂಡಿಗೆ ಧೈರ್ಯ ಬೇಕು ಹಾಗೂ ಬದುಕಿರುವಾಗ ಸಿಗದಿರುವ ಗೌರವ ಸತ್ತ ನಂತರ, ದೇಹತ್ಯಾಗ ಮಾಡಿದಾಗ ಗೌರವ ತಂದುಕೊಡುವ ಏಕೈಕ ಮಾರ್ಗವೆಂದರೆ ಅಂಗಾಂಗ ದಾನ ಮಾಡುವುದರಿಂದ ಸಿಗುತ್ತದೆ. ಚಿರಕಾಲ ಭೂಮಿ ಮೇಲೆ ಇರುತ್ತೇವೆ ಎಂದು ಸರಳವಾಗಿ ದೇಹಾಂಗದಾನ ಮಾಡುವುದರ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಬಿ.ವಿ. ಪ್ರಶಾಂತ್ ಮಾತನಾಡಿ, ಅಂಗಾಂಗದಾನ ಒಂದು ನೈಸರ್ಗಿಕ ಮಾರ್ಗ. ಎಲ್ಲರೂ ದಾನಿಗಳಾಗಬೇಕು. ಇಂದಿನ ಯುವ ಪೀಳಿಗೆ ಅನುಸರಿಸಿದರೆ ಭಾರತ ಮಾದರಿ ರಾಷ್ಟ್ರ ಆಗಬಹುದು. ಸತ್ತ ಮೇಲೆ ಎಷ್ಟು ಗಂಟೆ ಒಳಗೆ ಒಂದು ದೇಹವನ್ನು ದಾನ ಮಾಡಬೇಕು ಎನ್ನುವ ಅರಿವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಭ್ರಮರಾಂಭ ಎಸ್, ಕಾಲೇಜಿನ ಹಿರಿಯ ಉಪನ್ಯಾಸಕರಾದ ರಾಮಚಂದ್ರಯ್ಯ, ಯುವ ರೆಡ್ ಕ್ರಾಸ್ ಘಟಕದ ಅಧಿಕಾರಿ ಹೆಚ್.ಆರ್. ಗಿರೀಶ ಇನ್ನಿತರರು ಹಾಜರಿದ್ದರು.

ನಾಳೆಯಿಂದ ಎರಡು ದಿನ ಅರ್ಥ್ ಮೇಳ



ಮೈಸೂರು,ಆ.17(ಪಿಎಂ)– ಪರಿಸರ ಸ್ನೇಹಿ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟದ 'ಅರ್ಥ್ ಮೇಳ' ಆ.19 ಮತ್ತು 20ರಂದು ನಡೆಯಲಿದೆ ಎಂದು ಮೇಳದ ಆಯೋಜಕಿ ರುಚಿಕಾ ಜಿ.ನಾಯ್ಡು ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಕೆಆರ್‌ಎಸ್ ರಸ್ತೆಯ ಫೀನಿಕ್ಸ್ ಇಂಟರ್‌ನ್ಯಾಷನಲ್ ಅಕಾಡೆಮಿ ಆವರಣದಲ್ಲಿ ಬೆಳಗ್ಗೆ 11ರಿಂದ ರಾತ್ರಿ 7.30ರವರೆಗೆ ಮೇಳ ನಡೆಯಲಿದೆ. ಸಾರ್ವಜನಿಕರಿಗೆ ಪ್ರವೇಶ ಉಚಿತವಿದೆ ಎಂದರು. 26 ಮಹಿಳಾ ಉದ್ಯಮಿಗಳು ಮೇಳದಲ್ಲಿ ಪಾಲ್ಗೊಂಡು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲಿದ್ದಾರೆ. ಉಪ್ಪಿನಕಾಯಿ, ಸೆಣಬಿನ ಚೀಲಗಳು, ಕರಕುಶಲ ವಸ್ತುಗಳು, ಪ್ಯಾಕ್ ಮಾಡಲಾದ ಆಹಾರ ಪದಾರ್ಥಗಳು ಸೇರಿದಂತೆ ಮೊದಲಾದ ಉತ್ಪನ್ನಗಳು ಮೇಳದಲ್ಲಿ ದೊರೆಯಲಿವೆ ಎಂದು ತಿಳಿಸಿದರು. ಚಕ್ರವರ್ತಿ ಜಿ. ಕಲ್ಯಾಣ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಪ್ರಗತಿ ಸಹಕಾರ ಸಂಘದ ವಾರ್ಷಿಕ ಮಹಾಸಭೆ

ಮೈಸೂರು, ಆ.17– ಮೈಸೂರು ವಿದ್ಯಾರಣ್ಯಪುರಂ ಕನಕಗಿರಿಯ ಪ್ರಗತಿ ಸಹಕಾರ ಸಂಘದ 2022–23ನೇ ಸಾಲಿನ ಸರ್ವ ಸದಸ್ಯರ 8ನೇ ವಾರ್ಷಿಕ ಮಹಾಸಭೆ ಆ.27(ಭಾನುವಾರ)ರ ಬೆಳಗ್ಗೆ 10.30ಕ್ಕೆ ವಿದ್ಯಾರಣ್ಯಪುರಂನ ಹೊಯ್ಸಳ ಗಾರ್ಡನ್ ರೆಸ್ಟೋರೆಂಟ್‌ನ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.8.2023 ಶುಕ್ರವಾರ, ಮಳೆ ನಕ್ಷತ್ರ: ಮಖ 17.08.2023ರಿಂದ 30.08.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಪುಬ್ಬ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ವಸ್ತ್ರ ಉತ್ಸವ–2023, ಸ್ಥಳ: ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10 ರಿಂದ ರಾತ್ರಿ 9 ರವರೆಗೆ

■ **ಜೆಎಸ್‌ಎಸ್ ನರ್ಸಿಂಗ್ ಕಾಲೇಜು:** ನರ್ಸಿಂಗ್ ವಿಜ್ಞಾನದ ಸುಧಾರಣೆ ಕುರಿತು ಅಂತರರಾಷ್ಟ್ರೀಯ ಸಮ್ಮೇಳನ, ಮುಖ್ಯ ಅತಿಥಿಗಳು: ಜೆಎಸ್‌ಎಸ್ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಶ್ರೀಮತಿ ಆರತಿ ಫ್ರಾನ್ಸಿಸ್, ಡಾ.ರತಿಬಾಲಚಂದ್ರನ್, ಡಾ.ಸಿ.ಪಿ.ಮಧು, ಕೆ.ಎಲ್.ರೇವಣ್ಣಸ್ವಾಮಿ, ಅಧ್ಯಕ್ಷತೆ: ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಉಪಕುಲಪತಿ ಡಾ.ಸುರೇಂದ್ರ ಸಿಂಗ್, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 10ಕ್ಕೆ.

■ **ಗಣಪತಿ ಮಿತ್ರ ಮಂಡಳಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು:** ಬೆಳಗ್ಗೆ 11ಕ್ಕೆ ರಂಗ ಪಿತಾಮಹ ದಿನಾಚರಣೆ, ಉದ್ಘಾಟನೆ: ಶಾಸಕ ಟಿ.ಎಸ್.ಶ್ರೀವತ್ಸ, ಅಧ್ಯಕ್ಷತೆ: ಕೆ.ಆರ್.ಬ್ಯಾಂಕ್ ನಿರ್ದೇಶಕ ತಾಯೂರು ವಿಠ್ಠಲಮೂರ್ತಿ, ಮುಖ್ಯ ಅತಿಥಿಗಳು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ. ಸುದರ್ಶನ್, ಗಣಪತಿ ಮಿತ್ರ ಮಂಡಳಿ ಗೌರವಾಧ್ಯಕ್ಷ ಮಾಲಿಂಗು, ಸುರೇಶ್, ಬಾಲಕೃಷ್ಣ, ಎಲ್.ರಂಗಯ್ಯ, ಭಾಸ್ಕರ್, ಸಂಜೆ 5ಕ್ಕೆ ಸಮಾರೋಪ ಸಮಾರಂಭ, ಗಣ್ಯರಿಗೆ ಅಭಿನಂದನೆ, ಸಾನ್ನಿಧ್ಯ: ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ: ಶಾಸಕ ಕೆ.ಹರೀಶ್‌ಗೌಡ, ಅಧ್ಯಕ್ಷತೆ: ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಮುಖ್ಯ ಅತಿಥಿಗಳು: ಡಾ.ಎಸ್.ವೆಂಕಟೇಶ್, ಪಾಲಿಕೆ ಸದಸ್ಯ ಮಾ.ವಿ.ರಾಮಪ್ರಸಾದ್, ಗೋಲ್ಡ್ ಸುರೇಶ್, ವಾಣಿ, ರಾಮದೇವರ ದೇವಸ್ಥಾನ, ಅರಮನೆ ಉತ್ತರ ಬಾಗಿಲು ಅರ್ಚಕ ವೆಂಕಟೇಶ್, ಸ್ಥಳ: ಟೌನ್‌ಹಾಲ್.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು:** ಸ್ನಾತಕೋತ್ತರ ವಿಭಾಗದ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ ಸಮಾರಂಭ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಕರ್ನಾಟಕ ಲೋಕಸೇವಾ ಆಯೋಗದ ನಿವೃತ್ತ ಅಧ್ಯಕ್ಷ ಎಸ್.ಪಿ.ಷಡಕ್ಷರಿಸ್ವಾಮಿ, ಸಮಾರೋಪ ಭಾಷಣ: ಸಂಸ್ಕೃತಿ ಚಿಂತಕ ಪ್ರೊ.ಎಂ.ಕೃಷ್ಣೇಗೌಡ, ಉಪಸ್ಥಿತರು: ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ. ಸಾಂಬಶಿವಯ್ಯ, ಪ್ರಾಂಶುಪಾಲರಾದ ಡಾ.ಪ್ರತಿಭಾ, ಸ್ಥಳ: ಸುವರ್ಣ ಮಹೋತ್ಸವ ಭವನ, ಬೆಳಗ್ಗೆ 11ಕ್ಕೆ.

■ **ಎಸ್.ಪಿ.ಬಿ. ಇವೆಂಟ್ಸ್:** ಎಸ್.ಪಿ.ಬಿ.ಸ್ಮರಣಾರ್ಥ ಸಂಗೀತ ಸಂಜೆ, ಮುಖ್ಯ ಅತಿಥಿಗಳು : ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಶಾಸಕ ಜಿ.ಡಿ.ಹರೀಶ್‌ಗೌಡ, ಶ್ರೀಮತಿ ಮಾನಸಹೊಳ್ಳ, ಡಾ. ಪವಿತ್ರಾ ಪ್ರಭಾಕರ್‌ರೆಡ್ಡಿ, ಸಂದೇಶ್, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 5.30ಕ್ಕೆ.

■ **ಶ್ರೀ ವ್ಯಾಸರಾಜ ಮಠ ಸೋಸಲೆ (ಮುನಿತ್ರಯ ಪೀಠ), ಶ್ರೀ ವ್ಯಾಸತೀರ್ಥ ವಿದ್ಯಾಪೀಠ :** ಅಧಿಕ ಮಾಸದ ಪ್ರಯುಕ್ತ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞ, ವಿದ್ವಾನ್ ಸಿ.ಎಸ್. ಶ್ರೀನಿವಾಸಮೂರ್ತಿ ಆಚಾರ್ಯ ಅವರಿಂದ ಉತ್ತರಕಾಂಡ ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಸಂಜೆ 6ರಿಂದ 7ರವರೆಗೆ.

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಮಹಾಮೇದಾನಂದ ಅವರಿಂದ ದೇವರೊಡನೆ ಸಂಭಾಷಣೆ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಚಿನ್ಮಯ ಮಿಷನ್, ಮೈಸೂರು** : ಸ್ವಾಮಿ ಗಹನಾನಂದ ಅವರಿಂದ ಜ್ಞಾನಯೋಗ (ಭಗವದ್ಗೀತೆಯ 4ನೇ ಅಧ್ಯಾಯ) ಕುರಿತು ಪ್ರವಚನ, ಸ್ಥಳ: ಶ್ರೀ ಗುರುದೇವ ದತ್ತ ಸನ್ನಿಧಿ, ಗೋಕುಲಂ 3ನೇ ಹಂತ, ಸಂಜೆ 6.30 ರಿಂದ.

■ **ಚಿನ್ಮಯ ಮಿಷನ್** : ಸ್ವಾಮಿ ಗಹನಾನಂದ ಅವರಿಂದ ಜ್ಞಾನಯೋಗ (ಭಗವದ್ಗೀತೆಯ 4ನೇ ಅಧ್ಯಾಯ) ಕುರಿತು ಕನ್ನಡದಲ್ಲಿ ಪ್ರವಚನ, ಸ್ಥಳ: ಚಿನ್ಮಯ ಮಿಷನ್, 6ನೇ ಮುಖ್ಯ ರಸ್ತೆ, ಗೋಕುಲಂ 3ನೇ ಹಂತ, ಸಂಜೆ 6.30 ರಿಂದ.

■ **ಗಾನಭಾರತೀ:** ಸ್ವರಮೂರ್ತಿ ವಿ.ಎನ್.ರಾವ್ ಸಂಸ್ಮರಣಾ ಸಂಗೀತ ಕಛೇರಿ, ವಿದುಷಿ ಜೆ. ಯೋಗವಂದನಾ ಅವರಿಂದ ವೀಣಾವಾದನ, ವಿದ್ವಾನ್ ಜಿ.ಎಸ್. ರಾಮಾನುಜನ್–ಮೃದಂಗ, ವಿದ್ವಾನ್ ವಿ.ಎಸ್. ರಮೇಶ್–ಘಟಂ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6.30ಕ್ಕೆ

■ **ಶ್ರುತಿಮಂಜರಿ ಪ್ರತಿಷ್ಠಾನ, ರೋಟರಿ ಮೈಸೂರು ಪಶ್ಚಿಮ :** 24ನೇ ಶ್ರಾವಣ ಯುವ ಸಂಗೀತೋತ್ಸವ, ಸಂಜೆ 5.45ಕ್ಕೆ ಉದ್ಘಾಟನೆ : ರೋಟರಿ ಪಶ್ಚಿಮ ಸಂಸ್ಥೆ ಅಧ್ಯಕ್ಷ ರೋ. ಬಿ.ಕೆ. ಸುಧೀಂದ್ರ, ಸಂಜೆ 6ಕ್ಕೆ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದುಷಿ ಮಾಧುರಿ ಕೌಶಿಕ್ ಅವರಿಂದ ಗಾಯನ, ವಿದುಷಿ ಸಿ.ವಿ. ಶೃತಿ–ಪಿಟೀಲು, ವಿದ್ವಾನ್ ಸಾಯಿ ಶಿವು ಲಕ್ಷ್ಮಿಕೇಶವ್–ಮೃದಂಗ, ವಿದ್ವಾನ್ ಎಸ್. ಮಂಜುನಾಥ್–ಘಟಂ, ಸ್ಥಳ:ರೋಟರಿ ವೆಸ್ಟ್ ಸಭಾಂಗಣ, ಕಾಮಾಕ್ಷಿ ಆಸ್ಪತ್ರೆ ಎದುರು, ಸರಸ್ವತಿಪುರಂ.

ಸುತ್ತೂರು ಶ್ರೀ ಕ್ಷೇತ್ರ, ನಂಜನಗೂಡು ತಾ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ:** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು ಅವರಿಂದ ಲಕ್ಕಣ್ಣ ದಂಡೇಶ ವಿರಚಿತ ಶಿವತತ್ವ ಚಿಂತಾಮಣಿ ಕುರಿತು ಪ್ರವಚನ, ವಿದಾನ್ ಕೃ.ರಾಮಚಂದ್ರ ಅವರಿಂದ ವಾಚನ, ಸ್ಥಳ: ಸುತ್ತೂರು.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಬಣ್ಣದ ಬಾನಾಡಿಗಳು, ರಚನೆ–ಡಾ.ಎಸ್.ವಿ.ನರಸಿಂಹನ್, ಪ್ರಸ್ತುತಿ–ಜಿ.ಶಾಂತಕುಮಾರ್, 6.40 ಪದ ಸಂಸ್ಕೃತಿ–ಪರಮೇಶ್ವರ ವಿ.ಭಟ್, 7.15 ಭಾವಗೀತೆಗಳು–ಸುಪ್ರಿಯಾ ಆಚಾರ್ಯ, 9.05 ವಸುದೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಪಿ.ರಾಜಗೋಪಾಲ್ ಮತ್ತು ಎಂ.ಎನ್.ಗಣೇಶ್–ಯುಗಳ ನಾಗಸ್ವರ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಪಿ.ಎಸ್.ರಂಜನಿ, 12.45ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್ ಎಸ್.ಎಸ್., 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳುನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ಸ್ಟ್ಯಾನ್ಲೀ ಪಾರ್ಕರ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 3.00 ಜಿ.ಉಷಾ–ಹಾಡುಗಾರಿಕೆ, 4.00 ಮಹಿಳಾರಂಗ–ಮನಸ್ವಿನಿ ಮಹಿಳಾ ಸಂಘದ ಸದಸ್ಯೆಯರಿಂದ "ಶ್ರಾವಣ ಮಾಸ" ಕುರಿತ ಕಾರ್ಯಕ್ರಮ, 4.30 ವೃತ್ತಿ ಮಾರ್ಗದರ್ಶನ ಮಂಜುನಾಥ್, 6.50 ಕೃಷಿರಂಗ–ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಕೆ.ಜೆ. ಪುಟ್ಟಸ್ವಾಮಿಗೌಡ ಮತ್ತು ದೇವೀರಮ್ಮ ಅವರೊಂದಿಗೆ ಸಂವಾದ. ಭಾಗವಹಿಸುವವರು ಎನ್.ಕೇಶವಮೂರ್ತಿ, 8.00 ರಸಮಂಜರಿ–ಸುಖ ಆನಂದಗಳ ಶಾಸ್ತ್ರೀಯ ನಿರೂಪಣೆ, ಮಾತನಾಡುತ್ತಾರೆ ಡಾ. ಎನ್.ರುಕ್ಮಾಂಗದ, ಕೆ.ಲಲಿತಾ ಅವರಿಂದ ಸಂಸ್ಕೃತದಲ್ಲಿ ಸಣ್ಣಕಥೆ, 9.30 ವಾದ್ಯವೃಂದ–ಕರ್ನಾಟಕ ಪೊಲೀಸ್ ಬ್ಯಾಂಡ್, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇ ಸರ್ವಿಸ್ ರಸ್ತೆ ಅವೈಜ್ಞಾನಿಕ ರೋಡ್ ಹಂಪ್ಸ್ ತೆರವುಗೊಳಿಸಿ

ಎಡಿಜಿಪಿಗೆ ನಿವೃತ್ತ ಪೊಲೀಸ್ ಅಧಿಕಾರಿ ಶಂಕರೇಗೌಡರ ಪತ್ರ





ಶಂಕರೇಗೌಡ

ಮೈಸೂರು, ಆ.17(ಆರ್‌ಕೆ)-ವಾಹನ ಸವಾರರಿಗೆ ಮಾರಕವಾಗಿರುವ ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್‌ವೇ ಸರ್ವಿಸ್ ರಸ್ತೆಯಲ್ಲಿ ಅಳವಡಿಸಿರುವ ರೋಡ್ ಹಂಪ್‌ಗಳನ್ನು ತೆರವುಗೊಳಿಸುವಂತೆ ಮೈಸೂರಿನ ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ಶಂಕರೇಗೌಡ ಒತ್ತಾಯಿಸಿದ್ದಾರೆ.

ಎಡಿಜಿಪಿ ಮತ್ತು ರಸ್ತೆ ಸುರಕ್ಷತಾ ಸಮಿತಿ ಮುಖ್ಯಸ್ಥರಿಗೆ ಆಗಸ್ಟ್ 7ರಂದು ಆ ಸಂಬಂಧ ಪತ್ರ ಬರೆದಿರುವ ಅವರು, ಟ್ರ್ಯಾಕ್ಟರ್, ದ್ವಿಚಕ್ರ ವಾಹನ, ಆಟೋ, ಸೈಕಲ್, ಎತ್ತಿನಗಾಡಿಗಳಂತಹ ವಾಹನ ಸಂಚಾರವನ್ನು ಸರ್ವಿಸ್ ರಸ್ತೆಗೆ ಸೀಮಿತಗೊಳಿಸಿರುವುದು ಸ್ವಾಗತಾರ್ಹ. ಆದರೆ, ಸರ್ವಿಸ್ ರಸ್ತೆಯಲ್ಲಿ ಅಳವಡಿಸಿರುವ ಅವೈಜ್ಞಾನಿಕ ರಸ್ತೆ ಡುಬ್ಬಗಳಿಂದ ಈ ರಸ್ತೆಯ ಬಳಕೆದಾರರು ಯಮ ಯಾತನೆ ಅನುಭವಿಸುವಂತಾಗಿದೆ ಎಂದು ಅವರು ತಿಳಿಸಿದ್ದಾರೆ.

ಅಪಘಾತ ತಪ್ಪಿಸಲೆಂದು ಹಾಕಿರುವ ರೋಡ್ ಹಂಪ್ಸ್‌ಗಳೇ ಅಪಘಾತಗಳಿಗೆ ಕಾರಣವಾಗುತ್ತಿರುವುದು ವಿಪರ್ಯಾಸ. ರಾತ್ರಿ ವೇಳೆ ಸಂಚರಿಸುವ ವಾಹನ ಚಾಲಕರಿಗೆ ರೋಡ್ ಹಂಪ್ಸ್‌ಗಳೇ ಕಾಣುತ್ತಿಲ್ಲ. ಕಂಡರೂ ಅವುಗಳನ್ನು ದಾಟಲು ಹರಸಾಹಸಪಡಬೇಕು. ಅದರಲ್ಲೂ ದ್ವಿಚಕ್ರ, ತ್ರಿಚಕ್ರ ವಾಹನ, ಸಣ್ಣ ಕಾರುಗಳಿಗೆ ತೊಂದರೆಯಾಗುತ್ತಿದೆ ಎಂದು ಅವರು ತಮ್ಮ ಪತ್ರದಲ್ಲಿ ವಿವರಿಸಿದ್ದಾರೆ.

ಮೈಸೂರು-ಮಂಡ್ಯ ನಡುವೆಯೇ ಇಂತಹ 22 ಅವೈಜ್ಞಾನಿಕ ರೋಡ್ ಹಂಪ್‌ಗಳಿವೆ. ಟೋಲ್ ಫ್ರೀ ಸಂಗ್ರಹ ದೃಷ್ಟಿಯಿಂದ ಎಲ್ಲಾ ವಾಹನಗಳೂ ಮೇನ್ ಕ್ಯಾರಿಯೇಜ್ ಬಳಸಲಿ ಎಂಬುದು ಹಿಡನ್ ಅಜೆಂಡಾ ಆಗಿದೆಯಾದರೂ, ಸರ್ವಿಸ್ ರಸ್ತೆ ಬಳಸುವವರ ಸುರಕ್ಷತೆಗೂ ಗಮನ ಹರಿಸುವುದು ನ್ಯಾಯಸಮ್ಮತ ಎಂದಿರುವ ಶಂಕರೇಗೌಡರು, ಈ ಅವೈಜ್ಞಾನಿಕ ರಸ್ತೆ ಡುಬ್ಬಗಳು ಸಾವಿನ ಕೂಪವಾಗಿ ಪರಿಣಮಿಸುತ್ತಿವೆ ಎಂದು ತಿಳಿಸಿದ್ದಾರೆ.

ರಸ್ತೆ ಬಳಕೆದಾರರ ಸುರಕ್ಷತೆ ದೃಷ್ಟಿಯಿಂದ ಸರ್ವಿಸ್ ರಸ್ತೆಯಲ್ಲಿ ತಾವು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಸಂಚರಿಸಿ ತೊಂದರೆ ಮನವರಿಕೆಯಾದಲ್ಲಿ ಅವೈಜ್ಞಾನಿಕ ರೋಡ್ ಹಂಪ್‌ಗಳನ್ನು ತೆರವುಗೊಳಿಸಬೇಕೆಂದು ಅವರು ಮನವಿ ಮಾಡಿದ್ದಾರೆ.

ರಾಜ್ಯಾದ್ಯಂತ 48 ಕಡೆ ಅಧಿಕಾರಿಗಳ ಮನೆ, ಕಚೇರಿ ಮೇಲೆ ಲೋಕಾಯುಕ್ತ ದಾಳಿ

ಹಾರಂಗಿ ಯೋಜನೆ ಎಸ್‌ಇ ರಘುಪತಿ, ಕೊಡಗು ಎಡಿಸಿ ನಂಜುಂಡೇಗೌಡರ ಬಳಿ ಕೋಟ್ಯಾಂತರ ಮೌಲ್ಯದ ಆಸ್ತಿ ಪತ್ತೆ



ಮಡಿಕೇರಿಯ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಸರ್ಕಲ್ ಬಳಿಯ ನಂಜುಂಡೇಗೌಡರ ನಿವಾಸಕ್ಕೆ ಡಿವೈಎಸ್ಪಿ ಪವನ್‌ಕುಮಾರ್ ನೇತೃತ್ವದ ಲೋಕಾಯುಕ್ತ ಅಧಿಕಾರಿಗಳು ಮುಂಜಾನೆ ದಾಳಿ ನಡೆಸಿ, ಚಿನ್ನ, ಬೆಳ್ಳಿ ಹಾಗೂ ನಗದನ್ನು ವಶಪಡಿಸಿಕೊಂಡರು.



ಕುಶಾಲನಗರದ ಹಾರಂಗಿ ಯೋಜನೆಯಲ್ಲಿ ಸೂಪರಿಂಟೆಂಡಿಂಗ್ ಇಂಜಿನಿಯರ್ ಆಗಿರುವ ಕೆ.ಕೆ.ರಘುಪತಿ ಅವರ ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ನಿವಾಸಕ್ಕೆ ಲೋಕಾಯುಕ್ತ ಅಧಿಕಾರಿಗಳು ಗುರುವಾರ ದಾಳಿ ನಡೆಸಿದರು.

ಮೈಸೂರು, ಆ.17-(ಆರ್‌ಕೆ)-ರಾಜ್ಯಾದ್ಯಂತ ಗುರುವಾರ ಬೆಳಗ್ಗೆ 48 ಕಡೆ ಅಧಿಕಾರಿಗಳ ಮನೆ, ಕಚೇರಿಗಳ ಮೇಲೆ ಏಕಕಾಲದಲ್ಲಿ ದಾಳಿ ನಡೆಸಿರುವ ಲೋಕಾಯುಕ್ತ ಪೊಲೀಸರು, ಕೋಟ್ಯಾಂತರ ರೂ. ಮೌಲ್ಯದ ನಗದು, ಸ್ಥಿರ, ಚರಾಸ್ತಿ, ಚಿನ್ನಾಭರಣ ಹಾಗೂ ಆಸ್ತಿಯ ದಾಖಲೆ ಪತ್ರಗಳನ್ನು ವಶಕ್ಕೆ ಪಡೆದಿದ್ದಾರೆ.

ಕರ್ನಾಟಕ ಲೋಕಾಯುಕ್ತ ಮೈಸೂರು ಎಸ್ಪಿ ಎಸ್.ಸುರೇಶ್‌ಬಾಬು ನೇತೃತ್ವದಲ್ಲಿ ಮೈಸೂರು ಮತ್ತು ಕೊಡಗು ಜಿಲ್ಲೆಯಲ್ಲಿ ನಡೆದ ದಾಳಿಯಲ್ಲಿ ಕೊಡಗು ಜಿಲ್ಲೆ ಅಪರ ಜಿಲ್ಲಾಧಿಕಾರಿ ನಂಜುಂಡೇಗೌಡರ ಬಳಿ 3,53,43,518 ರೂ. ಬೆಲೆ ಬಾಳುವ ಆಸ್ತಿ ಮತ್ತು ಹಾರಂಗಿ ಯೋಜನೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆ.ಕೆ.ರಘುಪತಿ ಬಳಿ 3,42,20,743 ರೂ. ಮೌಲ್ಯದ ಸ್ಥಿರ ಹಾಗೂ ಚರಾಸ್ತಿ ಪತ್ತೆಯಾಗಿದೆ.

ಮಡಿಕೇರಿಯ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಸರ್ಕಲ್ ಬಳಿಯ ನಂಜುಂಡೇಗೌಡರ ಅಧಿಕೃತ ನಿವಾಸಕ್ಕೆ ಡಿವೈಎಸ್ಪಿ ಪವನ್‌ಕುಮಾರ್ ನೇತೃತ್ವದ ಲೋಕಾಯುಕ್ತ ಅಧಿಕಾರಿಗಳು ಮುಂಜಾನೆ 4.30 ಗಂಟೆಗೆ ದಾಳಿ ನಡೆಸಿ, ಗಾಢನಿದ್ರೆಯಲ್ಲಿದ್ದ ನಂಜುಂಡೇಗೌಡರಿಗೆ ಶಾಕ್ ನೀಡಿದರು.

ವಾರಂಟ್ ತೋರಿಸಿ ಮನೆಯನ್ನು ಶೋಧಿಸಿದಾಗ 23 ಲಕ್ಷ ರೂ. ನಗದು, 21,34,110 ರೂ. ಬೆಲೆ ಬಾಳುವ 388 ಗ್ರಾಂ ಚಿನ್ನಾಭರಣ, 9,408 ರೂ. ಬೆಲೆಯ 235 ಗ್ರಾಂ ಬೆಳ್ಳಿ ಪದಾರ್ಥ, ಮಹೀಂದ್ರ ವೆರಿಟೋ ಕಾರು (5 ಲಕ್ಷ ರೂ.), 35 ಲಕ್ಷ ರೂ. ನಿಶ್ಚಿತ ಠೇವಣಿ, 4 ಲಕ್ಷ ರೂ. ಬ್ಯಾಂಕ್ ಬ್ಯಾಲೆನ್ಸ್, 10 ಲಕ್ಷ ರೂ. ಮೌಲ್ಯದ ಗೃಹೋಪಯೋಗಿ ವಸ್ತುಗಳು ಪತ್ತೆಯಾಗಿವೆ.

ನಂಜುಂಡೇಗೌಡರು ಕೊಳ್ಳೇಗಾಲದಲ್ಲಿ 83 ಲಕ್ಷ ರೂ. ಮೌಲ್ಯದ 1.23 ಎಕರೆ ಫಾರಂ ಲ್ಯಾಂಡ್, ಸುಂಟಿಕೊಪ್ಪದಲ್ಲಿ 10 ಲಕ್ಷ ರೂ. ಮೌಲ್ಯದ 60X40 ನಿವೇಶನ, ಪಿರಿಯಾಪಟ್ಟಣದಲ್ಲಿ 35.5 ಲಕ್ಷ ರೂ.ಗಳ 8 ಎಕರೆ ಫಾರಂ ಲ್ಯಾಂಡ್, 16 ಲಕ್ಷ ರೂ. ಮೌಲ್ಯದ ಮತ್ತೊಂದು 11 ಎಕರೆ ಭೂಮಿ, 20 ಲಕ್ಷ ರೂ. ಬೆಲೆಯ ಹೊಸ ಫಾರಂ ಹೌಸ್, ಮೈಸೂರಲ್ಲಿ 18.5 ಲಕ್ಷ ರೂ. ಮೌಲ್ಯದ 60X40 ಅಳತೆ 3,744 ಚದರಡಿಯ ನಿವೇಶನ (17 ಲಕ್ಷ ರೂ.) ಮೈಸೂರು ತಾಲೂಕಲ್ಲಿ 14,70,000 ರೂ. ಮೌಲ್ಯದ 1.09 ಎಕರೆ ತೋಟ, ಮಡಿಕೇರಿ ತಾಲೂಕು, ಭಾಗಮಂಡಲದಲ್ಲಿ 40.3 ಲಕ್ಷ ರೂ. ಬೆಲೆಯ 6.8 ಎಕರೆ ತೋಟ ಹೊಂದಿದ್ದಾರೆಂಬುದು ತಿಳಿಯಿತು.

ಕೊಡಗು ಜಿಲ್ಲೆ, ಕುಶಾಲನಗರದ ಹಾರಂಗಿ ಯೋಜನೆಯಲ್ಲಿ ಸೂಪರಿಂಟೆಂಡಿಂಗ್ ಇಂಜಿನಿಯರ್ ಆಗಿರುವ ಕೆ.ಕೆ. ರಘುಪತಿ ಅವರ ಮನೆಯಲ್ಲಿ 2,09,27,280 ರೂ. ಮೌಲ್ಯದ ಸ್ಥಿರಾಸ್ತಿ ಹಾಗೂ 1,32,93,463 ರೂ. ಬೆಲೆಬಾಳುವ ಚರಾಸ್ತಿ ಪತ್ತೆಯಾಗಿದೆ ಎಂದು ದಾಳಿ ಮಾಡಿ ಶೋಧ ಕಾರ್ಯಾಚರಣೆ ನಡೆಸಿದ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ರಘುಪತಿ ಅವರ ವಾಸದ ಮನೆ, ಕುಶಾಲನಗರದ ಕಚೇರಿಗಳಲ್ಲಿ ಏಕಕಾಲದಲ್ಲಿ ದಾಳಿ ನಡೆಸಿದ ಪೊಲೀಸರು, ನಗದು, ಚಿನ್ನಾಭರಣ, ಬ್ಯಾಂಕ್ ಖಾತೆ ದಾಖಲೆ, ಆಸ್ತಿಗಳ ಸಂಬಂಧ ದಾಖಲೆ ಪತ್ರಗಳನ್ನು ವಶಪಡಿಸಿಕೊಂಡರು. ಬೆಂಗಳೂರು, ಬೆಳಗಾವಿ, ಬೀದರ್, ಧಾರವಾಡ, ತುಮಕೂರು, ರಾಯಚೂರು, ದಾವಣಗೆರೆ, ಚಿತ್ರದುರ್ಗ ಸೇರಿದಂತೆ ರಾಜ್ಯದ ವಿವಿಧೆಡೆ ಸರ್ಕಾರಿ ಅಧಿಕಾರಿಗಳ ಮನೆ, ಕಚೇರಿಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ಆದಾಯ ಮೀರಿ ಆಸ್ತಿ ಹೊಂದಿದ್ದವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮೈಸೂರು ಪಾಲಿಕೆಗೆ ಐವರು ಸದಸ್ಯರ ನಾಮನಿರ್ದೇಶನ



ಶ್ರೀನಿವಾಸಮೂರ್ತಿ



ಕಲ್ಪನಾ



ಕುಮಾರ್



ಬಾಲರಾಜು



ನೀರಲ್ ಸಿ. ಷಾ

ಬೆಂಗಳೂರು, ಆ.17- ಮೈಸೂರು ಮಹಾನಗರಪಾಲಿಕೆಗೆ ಅಧಿಕಾರೇತರ ಸದಸ್ಯರನ್ನಾಗಿ ಸರ್ಕಾರ ಐವರನ್ನು ನಾಮನಿರ್ದೇಶನ ಮಾಡಿ ಆದೇಶಿಸಿದೆ.

ಮೈಸೂರು ರಾಜೇಂದ್ರನಗರ ಆರ್. ಶ್ರೀನಿವಾಸಮೂರ್ತಿ, ಗಾಯತ್ರಿಪುರಂನ ಕಲ್ಪನಾ, ಇಟ್ಟಿಗೆಗೂಡು (ಇಂದಿರಾನಗರ) ಆರ್.ಹೆಚ್.ಕುಮಾರ್, ಮಂಡಿಮೊಹಲ್ಲಾದ ಎಂ.ಯು. ಬಾಲರಾಜು ಹಾಗೂ ಜಯಲಕ್ಷ್ಮಿಪುರಂನ ನಿರಾಲ್ ಸಿ.ಷಾ ಅವರನ್ನು ನಾಮ ನಿರ್ದೇಶನ ಮಾಡಿ ನಗರಾಭಿವೃದ್ಧಿ ಇಲಾಖೆ (ಮಹಾನಗರ ಪಾಲಿಕೆ-2) ಅಧೀನ ಕಾರ್ಯದರ್ಶಿ ಪಿ.ರಾಜು ಆದೇಶ ಹೊರಡಿಸಿದ್ದಾರೆ.

ಸಾರ್ವಜನಿಕ ಸ್ಥಳಗಳಲ್ಲಿ ಬಿಡಾಡಿ ದನ, ಹಂದಿ ಬಿಡದಂತೆ ಎಚ್ಚರಿಕೆ



ಮೈಸೂರು,ಆ.17-ಮೈಸೂರು ಮಹಾನಗರಪಾಲಿಕೆ ವ್ಯಾಪ್ತಿ ಹಾಗೂ ನಗರದ ಹೊರವಲಯದಲ್ಲಿ ಬಿಡಾಡಿ ದನ ಹಾಗೂ ಹಂದಿಗಳನ್ನು ಸಾಕುತ್ತಿರುವವರು ನಗರದ ರಸ್ತೆಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಇವುಗಳನ್ನು ಬಿಡುವುದರಿಂದ ಸಾರ್ವಜನಿಕರ ವಾಹನ ಸಂಚಾರಕ್ಕೆ ತುಂಬಾ ಅಡಚಣೆಯಾಗುತ್ತಿದ್ದು, ಮಾರಣಾಂತಿಕ ಅಪಘಾತಕ್ಕೀಡಾಗಿರುವುದು ಕಂಡುಬಂದಿರುತ್ತದೆ.

ಬಿಡಾದಿ ದನ, ಹಂದಿಗಳು ಕಸದ ತೊಟ್ಟಿಗಳಲ್ಲಿ ಆಹಾರ ಸೇವಿಸುವುದಕ್ಕಾಗಿ ತೊಟ್ಟಿಯಲ್ಲಿರುವ ಕಸವನ್ನೆಲ್ಲ ಚೆಲ್ಲಾಡುವುದರಿಂದ ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿದೆ. ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವುದರ ಜೊತೆಗೆ ನಗರದ ನೈರ್ಮಲ್ಯವು ಹಾಳಾಗುತ್ತಿದೆ. ಇದರ ಬಗ್ಗೆ ಸುದೀರ್ಘ ಚರ್ಚೆ ನಡೆಸಿ ಹಂದಿಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಬಿಡದಂತೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದರೂ ಹಂದಿಗಳು ಸಾರ್ವಜನಿಕ ಸ್ಥಳಗಳಲ್ಲಿ ಕಾಣಿಸಿಕೊಳ್ಳುತ್ತಿವೆ. ಮೈಸೂರು ನಗರ ವ್ಯಾಪ್ತಿಯಲ್ಲಿ ಬಿಡಾಡಿ ಹಂದಿಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ನಿಯಂತ್ರಿಸುವುದು ಅತ್ಯವಶ್ಯಕವಾಗಿರುತ್ತದೆ. ಆದ್ದರಿಂದ ಹಂದಿ ಮಾಲೀಕರಿಗೆ ಕಡೆಯದಾಗಿ ಎಚ್ಚರಿಕೆ ನೀಡುತ್ತಿದ್ದು, ಮಾಲೀಕರು ಈ ಪ್ರಕಟಣೆ ಹೊರಡಿಸಿದ ದಿನದಿಂದ ಒಂದು ವಾರದೊಳಗೆ ತಮ್ಮ ಬಿಡಾಡಿ ದನ ಹಾಗೂ ಹಂದಿಗಳನ್ನು ತಮ್ಮ ಸ್ವಂತ ಸ್ಥಳದಲ್ಲಿ ಕೂಡಿ ಹಾಕಿಕೊಂಡು ಸಾಕಬೇಕು. ಒಂದು ವೇಳೆ ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ರಸ್ತೆಗಳಲ್ಲಿ ಕಂಡು ಬಂದಲ್ಲಿ ಮಾಲೀಕರಿಗೆ ಯಾವುದೇ ಸೂಚನೆ ನೀಡದೆ ಅವುಗಳ ನಿಯಂತ್ರಣಕ್ಕೆ ಕ್ರಮ ವಹಿಸಲಾಗುವುದು ಎಂದು ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ದೇಶದ ಮೊದಲ 3ಡಿ-ಮುದ್ರಿತ ಅಂಚೆ ಕಚೇರಿ ಇಂದು ಉದ್ಘಾಟನೆ



ಬೆಂಗಳೂರು,ಆ.17-ದೇಶದ ಮೊದಲ 3ಡಿ-ಮುದ್ರಿತ ಅಂಚೆ ಕಚೇರಿಯನ್ನು ರೈಲ್ವೆ ಹಾಗೂ ಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ಅವರು ನಾಳೆ ಬೆಳಗ್ಗೆ ಜಿಪಿಒ ಬೆಂಗಳೂರಿನಿಂದ ರಿಮೋಟ್ ಮೂಲಕ ಉದ್ಘಾಟಿಸಲಿದ್ದಾರೆ. ಮಾರ್ಚ್ 21ರಿಂದ ನಿರ್ಮಾಣ ಕಾರ್ಯ ಆರಂಭವಾಗಿದ್ದು 44 ದಿನಗಳ ಅವಧಿಯಲ್ಲಿ ಇದನ್ನು ಸಿದ್ಧಪಡಿಸಲಾಗಿದೆ. ಇದನ್ನು **'ಕೇಂಬ್ರಿಡ್ಜ್ ಲೇಔಟ್ ಪಿಒ'** ಎಂದು ಹೆಸರಿಸಲಾಗಿದೆ.

ಕಟ್ಟಡದ ರಚನೆಯು ಮೇ 3ರೊಳಗೆ ಪೂರ್ಣಗೊಂಡಿದ್ದರೂ, ಒಳಚರಂಡಿ ಮತ್ತು ನೀರಿನ ಜಾಲವನ್ನು ರಚಿಸುವುದು ಎರಡು ತಿಂಗಳುಗಳನ್ನು ತೆಗೆದುಕೊಂಡಿತ್ತು. ನಂತರ ಸಚಿವರ ಸಮಯಾವಕಾಶಕ್ಕಾಗಿ ಇನ್ನೂ ಒಂದು ತಿಂಗಳು ಹಿಡಿಯಿತು. ಇನ್ನು ಔಪಚಾರಿಕವಾಗಿ 3ಡಿ ಮುದ್ರಿತ ಕಚೇರಿ ಆರಂಭದ ನಂತರ ಹಲಸೂರು ಬಜಾರ್‌ನಲ್ಲಿರುವ ಪ್ರಸ್ತುತ ಅಂಚೆ ಕಚೇರಿಯನ್ನು ಮುಚ್ಚಲಾಗುವುದು ಮತ್ತು ಸಿಬ್ಬಂದಿ ಮತ್ತು ಸಾಮಗ್ರಿಗಳನ್ನು ಇಲ್ಲಿಗೆ ಸ್ಥಳಾಂತರಿಸಲಾಗುವುದು ಎಂದು ಮೂಲಗಳು ತಿಳಿಸಿವೆ. L&T ನಿರ್ಮಿಸುತ್ತಿರುವ ಕಟ್ಟಡವು ಸುಮಾರು 1,100 ಚದರ ಅಡಿ ವಿಸ್ತೀರ್ಣದಲ್ಲಿ ನಿರ್ಮಿಸಲಾಗಿದೆ. 3ಡಿ ಕಾಂಕ್ರೀಟ್ ಮುದ್ರಣದ ವೆಚ್ಚವು ತೆರಿಗೆಯೊಂದಿಗೆ ಸುಮಾರು 26 ಲಕ್ಷ ರೂಪಾಯಿ ಆಗಿದ್ದು ಪೇವರ್, ಡ್ರೈನೇಜ್ ಸಂಪರ್ಕ ಮತ್ತು ನೀರಿನ ಸಂಪರ್ಕದಂತಹ ಇತರ ವೆಚ್ಚಗಳನ್ನು ಅಂಚೆ ಇಲಾಖೆಯ ಸಿವಿಲ್ ವಿಂಗ್ ಸುಮಾರು 40 ಲಕ್ಷ ರೂಪಾಯಿ ವೆಚ್ಚದಲ್ಲಿ ಮಾಡಿದೆ ಎಂದು ಮೂಲಗಳು ತಿಳಿಸಿವೆ.

ಇತರ 3ಡಿ-ಮುದ್ರಿತ ಕಟ್ಟಡವು ಉತ್ಪಾದನಾ ಸೌಲಭ್ಯದಲ್ಲಿ ಆಫ್-ಸೈಟ್ ಮುದ್ರಿತ ಅಂಶಗಳನ್ನು ನಿರ್ಮಿಸುವುದನ್ನು ಒಳಗೊಂಡಿರುತ್ತದೆ. ನಂತರ ಸೈಟ್‌ನಲ್ಲಿ ಜೋಡಿಸಲಾಗುತ್ತದೆ.

ಶೂಟಿಂಗ್ ಚಾಂಪಿಯನ್‌ಶಿಪ್‌ಗೆ ಮೈಸೂರು ಶೂಟರ್‌ಗಳು ಆಯ್ಕೆ



ಮೈಸೂರು,ಆ.17-ಕೇರಳದಲ್ಲಿ ಆ.18ರಿಂದ 12ರವರೆಗೂ ನಡೆಯುವ ದಕ್ಷಿಣ ವಲಯ ಮತ್ತು ಸೆಪ್ಟೆಂಬರ್‌ನಲ್ಲಿ ಮಧ್ಯ ಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ನಡೆಯಲಿರುವ ಅಖಿಲ ಭಾರತ ಜಿವಿ ಮಾವಳಂಕರ್ ಶೂಟಿಂಗ್ ಚಾಂಪಿಯನ್‌ಶಿಪ್‌ಗೆ ಮೈಸೂರಿನ ಜೈ ಚಾಮುಂಡಿ ಶೂಟಿಂಗ್ ಸ್ಪೋರ್ಟ್ ಅಕಾಡೆಮಿಯ ಶೂಟರ್‌ಗಳು ಅರ್ಹತೆ ಪಡೆದಿದ್ದಾರೆ.

ಅಕಾಡೆಮಿಯ ತರಬೇತುದಾರರಾದ ಜಯಂತ್.ಪಿ ಮತ್ತು ನಾಗರಾಜ್.ಪಿ.ಎಸ್ ಅವರು ಇತ್ತೀಚೆಗೆ ನಡೆದ ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಅರ್ಹತಾ ಅಂಕಗಳನ್ನು ಗಳಿಸಿದ ಕ್ರೀಡಾಪಟುಗಳಾದ ಅದರಂತೆ ತ್ರಿಶಾ.ಆರ್, ಕುಸುಮಾ ರಂಗಪ್ರಭು, ನಾರಾಯಣ ರಂಗಪ್ರಭು, ಮನು ವಾಸುದೇವ್, ಮಹೇಶ್.ಎಂ.ಎನ್., ಪ್ರೀತಂ ಜೇವೂರ್, ಪ್ರೇಮ್ ಎಚ್, ರೋಹಿತ್ ಜೇವೂರ್, ದಿಯಾ ಕಾರುಣ್ಯ, ಅಕ್ಷರ ಅರ್ಜುನ್ ಮತ್ತು ಪೃಥ್ವಿಕ್ ಗೌಡ ಅವರುಗಳನ್ನು ಈ ಚಾಂಪಿಯನ್‌ಶಿಪ್‌ಗೆ ಆಯ್ಕೆ ಮಾಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರಲ್ಲಿ ಹಲಗಲಿ ಬೇಡರ ಸ್ಮರಣೋತ್ಸವ



ಮೈಸೂರು,ಆ.17-ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಪಡುವಾರಹಳ್ಳಿಯ ಸ್ನೇಹ ಬಳಗದ ವತಿಯಿಂದ ವಾಲ್ಮೀಕಿ ರಸ್ತೆಯ ನಾಮಫಲಕದ ಬಳಿ ಹಲಗಲಿ ಬೇಡರ ಸ್ಮರಣೋತ್ಸವ ಹಮ್ಮಿಕೊಳ್ಳಲಾಗಿತ್ತು.

ವಿದ್ಯಾವಿಕಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಕೆ.ಕವೀಶ್‌ಗೌಡ, ಪುಷ್ಪನಮನ ಸಲ್ಲಿಸಿ ಮಾತನಾಡಿ, ಹಲಗಲಿ ಬೇಡರ ಇತಿಹಾಸದ ಬಗ್ಗೆ 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಅಥವಾ ಸಿಪಾಯಿ ದಂಗೆಯ ಬಳಿಕ ಭಾರತದಲ್ಲಿ ಬ್ರಿಟಿಷರು ನಿಶಸ್ತ್ರೀಕರಣ ಕಾಯ್ದೆ ಜಾರಿಗೆ ತಂದಿದ್ದರು. ಆದರೆ ಈ ಕಾಯ್ದೆಯನ್ನು ವಿರೋಧಿಸಿದ್ದ ಆ ಒಂದು ಪುಟ್ಟ ಗ್ರಾಮವಾದ ಹಲಗಲಿ ಬೇಡರು ಬ್ರಿಟಿಷ್ ಕಂಪನಿ ಸರ್ಕಾರದ ನಿದ್ದೆಗೆಡಿಸಿದ್ದರು ಸ್ವಾತಂತ್ರ್ಯ ಸ್ವಾಭಿಮಾನಕ್ಕಾಗಿ ಕಂಪನಿ ಸರ್ಕಾರದ ವಿರುದ್ಧ ಹಲಗಲಿಯ ವೀರ ಕಲಿಗಳು ಸೆಡ್ಡು ಹೊಡೆದು ನಿಂತಿದ್ದರು ಎಂದರು. ಬಿಜೆಪಿ ಮುಖಂಡ ಎಲ್.ಚೌಡಪ್ಪ, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಹರೀಶ್‌ಕುಮಾರ್, ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಎಸ್.ಬಿ.ಶಿವು, ವಿ.ಮಧು, ಪಾಲಿಕೆ ಮಾಜಿ ಸದಸ್ಯ ಎಂ.ಚಿಕ್ಕವೆಂಕಟು, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷ ಸಿ.ಸಂತೋಷ್, ನಿರ್ದೇಶಕ ಸಿ.ಡಿ.ಕುಮಾರ್, ಕೇಬಲ್ ಕಿಟ್ಟಿ, ಅರುಣ, ಈ.ಬಸವರಾಜು, ಫಾಲ್ಕನ್ ಪ್ರಸನ್ನ, ಯತಿ, ಚಿರು, ಶಾಂತಿ ಮತ್ತಿತರರಿದ್ದರು.



ಮೈಸೂರಿನ ಲಯನ್ಸ್ ಕ್ಲಬ್ ಆಫ್ ಮೈಸೂರು ಅಂಬಾಸಿಡರ್ ಸಂಸ್ಥೆಯ ವತಿಯಿಂದ ಜೆಪಿ ನಗರದ ಆರೋಗ್ಯ ಕೇಂದ್ರದ ಡಾ.ಸಿ.ಎಸ್.ಸೌಮ್ಯ ಅವರಿಗೆ ರಾಯಭಾರಿ ವೈದ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಕಾರ್ಯದರ್ಶಿ ಲಯನ್ ಟಿ.ಎಚ್.ವೆಂಕಟೇಶ್, ಲಯನ್ ಎಚ್.ಕೆ.ಪ್ರಸನ್ನ, ಲಯನ್ ಹೆಚ್.ಸಿ. ಕಾಂತರಾಜು, ಕಾರ್ಯದರ್ಶಿ ಲಯನ್ ಸಿ.ಆರ್.ದಿನೇಶ್ ಮತ್ತಿತರರಿದ್ದರು.

ಪಾಲಿಕೆಯಿಂದ ಹಲವೆಡೆ ಅವೈಜ್ಞಾನಿಕ ರಬ್ಬರ್ ರೋಡ್ ಹಂಪ್ಸ್ ಅಳವಡಿಕೆ

- ವಾಹನ ಸವಾರರಿಗೆ ಮಾರಣಾಂತಿಕವಾಗಿರುವ ಹಂಪ್‌ಗಳು
- ಅಪಘಾತದಿಂದ ಗಾಯಗೊಂಡು ಆಸ್ಪತ್ರೆ ಸೇರಿದ ವಾಹನ ಸವಾರರು

ಮೈಸೂರು, ಆ.17 (ಆರ್‌ಕೆ)- ಮೈಸೂರಿನ ಹಲವು ರಸ್ತೆಯಲ್ಲಿ ಇದ್ದಕ್ಕಿದ್ದಂತೆ ಅವೈಜ್ಞಾನಿಕವಾಗಿ ಅಳವಡಿಸಿರುವ ರಸ್ತೆ ಡುಬ್ಬ (ಹಂಪ್)ಗಳು ವಾಹನ ಸವಾರರಿಗೆ ಸಂಚಕಾರ ತಂದೊಡ್ಡಿವೆ.

ಸಂಚಾರ ಪೊಲೀಸರ ಕೋರಿಕೆ ಮೇರೆಗೆ ಮೈಸೂರು ಮಹಾನಗರಪಾಲಿಕೆ ವತಿಯಿಂದ ನಜರ್‌ಬಾದ್-ಸಿದ್ಧಾರ್ಥನಗರ ಸಂಪರ್ಕಿಸುವ ಮಲೆಮಹದೇಶ್ವರ ರಸ್ತೆಯ ದೇವಸ್ಥಾನದ ಬಳಿ, ಸಿದ್ಧಾರ್ಥನಗರ ವಿನಯ ಮಾರ್ಗದ ಜಿಎಸ್‌ಟಿ ಭವನ, ಸಂಗೀತ ಕಾರ್ನರ್ ಬಳಿ ಸೇರಿದಂತೆ ಐದಾರು ಕಡೆ ರಾತ್ರೋರಾತ್ರಿ ರಬ್ಬರ್ ಹಂಪ್‌ಗಳನ್ನು ಅಳವಡಿಸಲಾಗಿದೆ.

ಆದರೆ ಹಂಪ್‌ಗಳಲ್ಲಿ ಯಾವುದೇ ರೀತಿಯ ಬ್ಲಿಂಕರ್ಸ್, ರಿಫ್ಲೆಕ್ಸ್ ಪಟ್ಟಿ ಅಥವಾ ಸೂಚನಾ ಫಲಕವನ್ನೂ ಹಾಕಿಲ್ಲ. ಕಪ್ಪು ಹಾಗೂ ಹಳದಿ ಬಣ್ಣದ ಎತ್ತರದ ರಬ್ಬರ್ ಹಂಪ್, ಬಹುತೇಕ ರಸ್ತೆ ಬಣ್ಣವನ್ನೇ ಹೋಲುವುದರಿಂದ ತಕ್ಷಣಕ್ಕೆ ಗುರುತಿಸಲು ಸಾಧ್ಯವಾಗದೆ ಅನೇಕ ದ್ವಿಚಕ್ರ ವಾಹನ ಸವಾರರು ಆಯತಪ್ಪಿ ಬಿದ್ದು, ಗಾಯಗೊಂಡಿದ್ದಾರೆ. ರಾತ್ರೋರಾತ್ರಿ ಅಳವಡಿಸಿರುವುದರಿಂದ ನಿತ್ಯ ಓಡಾಡುವವರೂ ಅಪಘಾತಕ್ಕೀಡಾಗಿದ್ದಾರೆ.

ದ್ವಿಚಕ್ರ ವಾಹನ ಮಾತ್ರವಲ್ಲ ಆಟೋ, ಕಾರುಗಳಿಗೂ ಈ ಅವೈಜ್ಞಾನಿಕ ಹಂಪ್ ಕಂಟಕವಾಗಿದೆ. ಆಟೋ ವೇಗವಾಗಿ ಬಂದು ಹಂಪ್ ಹತ್ತಿದರೆ ಹ್ಯಾಂಡಲ್ ತಿರುಗಿ ನಿಯಂತ್ರಣ ತಪ್ಪಿ ಪಲ್ಟಿಯಾಗಬಹುದು. ಹತ್ತಿರಕ್ಕೆ ಬಂದು ಬ್ರೇಕ್ ಹಾಕಿದರೂ ಅವಘಡ ಸಂಭವಿಸುವ ಸಾಧ್ಯತೆ ಇದೆ. ಸಣ್ಣ ಕಾರುಗಳ ಪರಿಸ್ಥಿತಿಯೂ ಇದಕ್ಕೆ ಹೊರತಲ್ಲ. ವೇಗವಾಗಿ ಹಂಪ್ ಹತ್ತಿಸಿದರೆ ನಿಯಂತ್ರಣ ಕಳೆದುಕೊಂಡು ಎದುರಿಗೆ ಬರುವ ವಾಹನಗಳಿಗೆ ಡಿಕ್ಕಿಯಾಗಬಹುದು.





ಮೈಸೂರಿನ ನಜರ್‌ಬಾದ್-ಸಿದ್ಧಾರ್ಥನಗರ ಸಂಪರ್ಕಿಸುವ ಮಲೆ ಮಹದೇಶ್ವರ ರಸ್ತೆಯಲ್ಲಿ ಅವೈಜ್ಞಾನಿಕ ರಬ್ಬರ್ ರೋಡ್ ಹಂಪ್ ಹಾಕಿರುವುದನ್ನು ಚಿತ್ರದಲ್ಲಿ ಕಾಣಬಹುದು.

> ಅಂದು ಮಧ್ಯಾಹ್ನ ಅದೇ ರಸ್ತೆಯಲ್ಲಿ ಬಂದೆ. ಆಗ ಯಾವುದೇ ಹಂಪ್ ಇರಲಿಲ್ಲ. ಸಂಜೆಯೂ ಹಂಪ್ ಹಾಕಿರಲಿಲ್ಲ. ಆದರೆ ರಾತ್ರೋರಾತ್ರಿ ರಬ್ಬರ್ ಹಂಪ್ ಹಾಕಿದ್ದಾರೆ. ಅದು ರಸ್ತೆ ಬಣ್ಣವೇ ಇದೆ. ಯಾವುದೇ ಪ್ರತಿಫಲಕಗಳನ್ನು ಹಾಕಿಲ್ಲ. ಸಮೀಪದಲ್ಲೇ ಎರಡು ಹಂಪ್‌ಗಳಿದ್ದರೂ ರಬ್ಬರ್ ಹಂಪ್ ಅಳವಡಿಸಿದ್ದಾರೆ. ಇಲ್ಲಿ ಬೀದಿದೀಪದ ವ್ಯವಸ್ಥೆಯೂ ಸರಿಯಾಗಿಲ್ಲ.
>
> -ಮೋಹನ್ ಕಾಯಕ

ಆಸ್ಪತ್ರೆ ಸೇರಿದ್ದಾರೆ: ಅವೈಜ್ಞಾನಿಕ ರಬ್ಬರ್ ಹಂಪ್‌ಗಳಿಂದ ಅನೇಕ ದ್ವಿಚಕ್ರ ವಾಹನ ಸವಾರರು ಅಪಘಾತಕ್ಕೀಡಾಗಿ ಆಸ್ಪತ್ರೆ ಸೇರಿದ್ದಾರೆ. ಆಗಸ್ಟ್ 14ರಂದು ತಡ ರಾತ್ರಿ ಕೆಲಸ ಮುಗಿಸಿ ಕಚೇರಿಯಿಂದ ಆಲನಹಳ್ಳಿಯಲ್ಲಿರುವ ತಮ್ಮ ಮನೆಗೆ ಸ್ಕೂಟರ್‌ನಲ್ಲಿ ತೆರಳುತ್ತಿದ್ದ 'ಮೈಸೂರು ಮಿತ್ರ' ವರದಿಗಾರ ಬಿ.ಜೆ. ಮೋಹನ್ (ಮೋಹನ್ ಕಾಯಕ) ಅವರು ಮಲೆ ಮಹದೇಶ್ವರ ರಸ್ತೆಯಲ್ಲಿ ಅಳವಡಿಸಿರುವ ರಬ್ಬರ್ ಹಂಪ್‌ನಿಂದ ನಿಯಂತ್ರಣ ತಪ್ಪಿ ನೆಲಕ್ಕುರುಳಿಬಿದ್ದ ಪರಿಣಾಮ ಅವರ ಬಲ ಭುಜದ ಮೂಳೆ ಮುರಿದಿದೆ. ಕಾಲಿಗೂ ಪೆಟ್ಟು ಬಿದ್ದಿದ್ದು, ಹೆಲ್ಮೆಟ್ ಧರಿಸಿದ್ದರಿಂದ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಸಮೀಪದ ಶಾಂತವೇರಿ ಗೋಪಾಲಗೌಡ ಆಸ್ಪತ್ರೆಗೆ ದಾಖಲಾಗಿದ್ದ ಮೋಹನ್‌ಗೆ ಶಸ್ತ್ರ ಚಿಕಿತ್ಸೆ ನಡೆಸಲಾಗಿದೆ. ಸದ್ಯ ಚೇತರಿಸಿಕೊಂಡಿರುವ ಅವರು ಬುಧವಾರ ರಾತ್ರಿ ಮನೆಗೆ ಮರಳಿದ್ದಾರೆ. ಅದೇ ಹಂಪ್‌ನಿಂದ ಇನ್ನೂ ಮೂವರು ಸ್ಕೂಟರ್ ಸವಾರರು ಬಿದ್ದು, ಗಾಯಗೊಂಡಿದ್ದಾರೆ. ಇದೇ ರೀತಿಯಲ್ಲಿ ಐದಾರು ಕಡೆ ರಾತ್ರೋರಾತ್ರಿ ಅಳವಡಿಸಲಾಗಿರುವ ಹಂಪ್‌ಗಳಿಂದ ಹಲವರು ಬಿದ್ದು, ಪೆಟ್ಟು ತಿಂದಿದ್ದಾರೆ ಎಂದು ತಿಳಿದುಬಂದಿದೆ. ಮುಂದಾಲೋಚನೆ, ಮುಂಜಾಗ್ರತೆ ಇಲ್ಲದೆ ಬೇಕಾಬಿಟ್ಟಿ ಹಂಪ್ ಹಾಕಿರುವ ದುಷ್ಪರಿಣಾಮವನ್ನು ಸಾರ್ವಜನಿಕರು ಅನುಭವಿಸುತ್ತಿರುವುದು ದುರ್ದೈವ.

ಅಪಘಾತ ತಪ್ಪಿಸುವ ಉದ್ದೇಶದಿಂದ ವಾಹನಗಳ ವೇಗ ನಿಯಂತ್ರಿಸಲು ಹಂಪ್ ನಿರ್ಮಿಸಲಾಗುತ್ತದೆ. ಎಲ್ಲಿ ಹಂಪ್ ಅಳವಡಿಸುವುದು ಸೂಕ್ತ, ಅದರ ಎತ್ತರ, ಮಾದರಿ ಹೇಗಿರಬೇಕು ಇನ್ನಿತರ ಅಂಶಗಳ ಬಗ್ಗೆ ಅವಲೋಕಿಸಿ, ಕ್ರಮ ವಹಿಸಬೇಕಾಗುತ್ತದೆ. ವಾಹನ ಸವಾರರಿಗೆ ದೂರದಿಂದಲೇ ಗೋಚರಿಸಬೇಕೆಂದು ಅಲ್ಲಿ ಪ್ರತಿಫಲಕ ಹಾಗೂ ಸೂಚನಾ ಫಲಕ ಅಳವಡಿಸುವುದರ ಜೊತೆಗೆ ಹಂಪ್‌ಗೆ ಬಿಳಿಯ ಪಟ್ಟಿ ಬಳಿಯಲಾಗುತ್ತದೆ. ಆದರೆ ಇದ್ಯಾವುದೂ ಇಲ್ಲದೆ ದಿಢೀರ್ ರಬ್ಬರ್ ಹಂಪ್ ಅಳವಡಿಸಿದ್ದು ಸೂಕ್ತವಲ್ಲ. ಸಂಚಾರ ಠಾಣೆ ಅಧಿಕಾರಿಗಳ ಸಮ್ಮುಖದಲ್ಲಿ ಅವರ ಸಲಹೆ, ಮಾರ್ಗದರ್ಶನದಂತೆ ಹಂಪ್ ಅಳವಡಿಸಬೇಕು. ಆದರೆ ಈ ಅವೈಜ್ಞಾನಿಕ ಹಂಪ್‌ಗಳ ಬಗ್ಗೆ ಪೊಲೀಸರಿಗೂ ಸ್ಪಷ್ಟ ಮಾಹಿತಿ ಇಲ್ಲ. ಪಾಲಿಕೆ ಅಧಿಕಾರಿಗಳಿಗೂ ನಮಗೆ ಗೊತ್ತಿಲ್ಲ ಎನ್ನುತ್ತಾರೆ. ಹಾಗಾದರೆ ಇದ್ದಕ್ಕಿದ್ದಂತೆ ರಬ್ಬರ್ ಹಂಪ್ ಅಳವಡಿಸಿದ್ಯಾರು.

ಖಾಸಗಿ ವ್ಯಕ್ತಿಗಳಿಂದ ಈ ಕೆಲಸ ಸಾಧ್ಯವೇ? ಒಂದು ವೇಳೆ ಹಾಗಾಗಿದ್ದರೆ ಮೈಸೂರು ನಗರಪಾಲಿಕೆ ಹಾಗೂ ಪೊಲೀಸರು ಯಾವ ಕ್ರಮ ಕೈಗೊಳ್ಳುವರು?. ಹಂಪ್‌ಗಳಿಂದ ಗಾಯಗೊಂಡವರ ಚಿಕಿತ್ಸೆಗೆ ನೆರವು ನೀಡುವವರ್ಯಾರು? ಎಂದು ಸಾರ್ವಜನಿಕರು ಪ್ರಶ್ನಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಮನು : "ನಮ್ಮ ಮನೆಯಲ್ಲಿ ನನ್ನದೇ ಮಾತು ನಡೆಯೋದಪ್ಪ, ನಾನು ಹೇಳಿದ ಮೇಲೆ ಮತ್ತೊಂದು ಮಾತಿಲ್ಲ!..."

ಗುಂಡ : "ನಮ್ಮ ಮನೆಯಲ್ಲಿ ನನ್ನದೇ ಕೊನೆ ಮಾತು. ನನ್ನ ಹೆಂಡತಿ ಹೇಳಿದ್ದಕ್ಕೆಲ್ಲಾ ನಾನೇ ಕೊನೇಲಿ ಎಸ್ ಅಂತ ಒಪ್ಪಿಕೊಳ್ಳೋದು...!"

ಮೈಸೂರು ಮಿತ್ರ

ಶುಕ್ರವಾರ, 18 ಆಗಸ್ಟ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನಾಳೆಗಾಗಿ ನಾನು ಹೆದರಲಾರೆ, ಏಕೆಂದರೆ ನಿನ್ನೆಯನ್ನು ನಾನು ಕಂಡಿದ್ದೇನೆ. ಅಲ್ಲದೆ ಇಂದಿನದನ್ನು ಪ್ರೀತಿಸುತ್ತಿದ್ದೇನೆ – ವಿಲಿಯಂ ಅವೆನಾ ವ್ಯಾಟ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸಮಯಕ್ಕಾದವನೇ ನೆಂಟ, ಕೆಲಸಕ್ಕಾದವನೇ ಭಂಟ

ನಿಮ್ಮ ಪತ್ರಗಳು

ನಂದಿನಿ ಮತ್ತು ಗಣಿತ!

ಮಾನ್ಯರೆ,

ಮೂರನೇ ತರಗತಿಯ ಮಕ್ಕಳಿಗೆ ಗಣಿತದ ಪಾಠ ನಡೆಯುತ್ತಿತ್ತು. ಶಿಕ್ಷಕರು "ಒಂದು ಕೆ.ಜಿ ಮೊಸರಿಗೆ 50 ರೂಪಾಯಿ ಆದರೆ ಅರ್ಧ ಕೆ.ಜಿ ಮೊಸರಿಗೆ ಎಷ್ಟು ರೂಪಾಯಿ ಆಗುತ್ತದೆ?" ಎಂದು ಕೇಳಿದರು.

ಇಡೀ ತರಗತಿ ಒಕ್ಕೊರಲಿನಿಂದ "25 ರೂಪಾಯಿ ಸಾರ್" ಎಂದಿತು.

ಆದರೆ ಒಬ್ಬ ಮಾತ್ರ "26 ರೂಪಾಯಿ ಸಾರ್" ಎಂದ!

ಅವನನ್ನು ಗಮನಿಸಿದ ಶಿಕ್ಷಕರು "ಯಾಕೋ? 50 ರಲ್ಲಿ ಅರ್ಧ ಎಂದರೆ 25 ಅಲ್ವೇನೋ? 26 ಎನ್ನುತ್ತೀಯಲ್ಲಾ?" ಎಂದರು.

ಆ ಹುಡುಗ "ನಾವು ನಂದಿನಿ ಹಾಲು–ಮೊಸರು ಮಾರಾಟ ಕೇಂದ್ರ ನಡೆಸುತ್ತೀವಿ ಸಾರ್. ನಮಗೆ ಮಾರಾಟಕ್ಕೆ ಬರುವ ಅರ್ಧ ಕೆ.ಜಿ ಮೊಸರಿನ ಕವರ್ ಮೇಲೆ 26 ರೂಪಾಯಿ ಎಂದೇ ಪ್ರಿಂಟ್ ಮಾಡಿದ್ದಾರೆ ಸಾರ್. ಬೆಳಗ್ಗೆ ಒಬ್ಬರು ಗಿರಾಕಿಗೆ ಅರ್ಧ ಕೆ.ಜಿ ಮೊಸರಿಗೆ 26 ರೂಪಾಯಿ ಕೇಳಿದ್ದಕ್ಕೆ ಆ ಗಿರಾಕಿ ಜಗಳಕ್ಕೇ ಬಂದ್ರು ಸಾರ್. ನಮ್ಮಪ್ಪ ಅವರಿಗೆ ಕವರ್ ಮೇಲೆ ಪ್ರಿಂಟ್ ಆಗಿರುವುದನ್ನು ತೋರಿಸಿ, ನೀವು ನಂದಿನಿ ಡೈರಿಗೆ ದೂರು ಕೊಡಿ ಅಂದ್ರು ಸಾರ್. ಆ ಗಿರಾಕಿ ಏನೋ ಇದೆಲ್ಲಾ ನನಗೆ ಅರ್ಥವಾಗೊಲ್ಲ ಎಂದು ಗೊಣಗುತ್ತಾ ಹೋದರು ಸಾರ್" ಎಂದು ಹೇಳಿದ.

ಇದು ಸುಳ್ಳು ಕತೆಯಲ್ಲ. ಹಗಲು ದರೋಡೆಯ ವ್ಯಥೆ. ನಂದಿನಿ ಡೈರಿ ಇತ್ತೀಚೆಗೆ ಒಂದು ಕೆ.ಜಿ ಮೊಸರಿನ ಬೆಲೆಯನ್ನು 47 ರಿಂದ 50 ರೂಪಾಯಿಗೆ ಏರಿಸಿತು. ಅರ್ಧ ಕೆ.ಜಿ ಮೊಸರಿನ ಪ್ಯಾಕೆಟಿನಲ್ಲಿ ಕೊಡುವ ಮೊಸರಿಗೂ ಒಂದು ಕೆ.ಜಿ ಮೊಸರಿನ ಗುಣಮಟ್ಟದಲ್ಲಿ ಏನೂ ವ್ಯತ್ಯಾಸವಿಲ್ಲ. ಕೊಳ್ಳುವವರೂ ಅರ್ಧ ಕೆಜಿ ಮೊಸರಿಗೆ 25 ರೂಪಾಯಿಗಳನ್ನು (ಚಿಲ್ಲರೆಗಾಗಿ ಹುಡುಕಾಡದೇ) ಕೊಡಬಲ್ಲರು.

ಜನ ಸಾಮಾನ್ಯರ ಅಗತ್ಯವೂ ಸಾಮಾನ್ಯವಾಗಿ ಅರ್ಧ ಕೆ.ಜಿ ಮೊಸರೇ ಆಗಿರುವುದರಿಂದ ಅರ್ಧ ಕೆ.ಜಿ ಮೊಸರಿನ ಪೊಟ್ಟಣಗಳೇ ಹೆಚ್ಚಾಗಿ ಖರ್ಚಾಗುತ್ತವೆ ಎಂದು ಕೇಳಿ ತಿಳಿದಿದ್ದೇನೆ. ಹಾಗಾದರೆ ಏತಕ್ಕಾಗಿ ಅರ್ಧ ಲೀಟರ್ ಮೊಸರು ಕೊಳ್ಳುವ ಪ್ರತಿಯೊಬ್ಬ ಗ್ರಾಹಕನಿಂದ ನಂದಿನಿ ಡೈರಿಯು ಪ್ರತಿ ಕೆ.ಜಿ ಮೊಸರಿಗೆ ಮೂರು ರೂಪಾಯಿ ಹೆಚ್ಚು ಮಾಡಿದುದರ ಜೊತೆಗೆ ಅರ್ಧ ಕೆ.ಜಿ ಮೊಸರಿಗೆ ಒಂದು ರೂಪಾಯಿ ಹೆಚ್ಚು ಸುಲಿಗೆ ಮಾಡುತ್ತಿದೆ?

ಇದು ಗೊತ್ತಿಲ್ಲದೇ ನಡೆಯುತ್ತಿದ್ದರೆ ನಂದಿನಿಯು ಕೂಡಲೇ ತಿದ್ದಿಕೊಳ್ಳಬೇಕು. ಗೊತ್ತಿದ್ದೂ ಮಾಡುತ್ತಿದ್ದರೆ ತಪ್ಪಿತಸ್ಥರ ಮೇಲೂ ಕ್ರಮ ಕೈಗೊಳ್ಳಬೇಕು.

ಶಿಕ್ಷಣ ಇಲಾಖೆ ಗಮನಕ್ಕೆ: ದಯವಿಟ್ಟು ಗಣಿತ ಪ್ರಶ್ನೆ ಪತ್ರಿಕೆಯಲ್ಲಿ ಹಾಲು–ಮೊಸರಿನ ವಿಚಾರವಾಗಿ ಪ್ರಶ್ನೆ ಕೇಳದಿರಿ!

–ಸಿ.ವಿ.ಕೇಶವಮೂರ್ತಿ, ನ್ಯಾಯವಾದಿ, ಮೈಸೂರು

ಪೆಟ್ರೋಲ್ ಚಾಲಿತ ಬೈಕ್, ಸ್ಕೂಟರ್ ಸವಾರರಿಗೆ ಹೆಲ್ಮೆಟ್ ಕಡ್ಡಾಯ ಸ್ವಾಗತ

ಮಾನ್ಯರೆ,

ದ್ವಿಚಕ್ರ ವಾಹನ ಸವಾರರಿಗೆ ಹೆಲ್ಮೆಟ್ ಕಡ್ಡಾಯ. ಸವಾರರ ಜೀವ ಉಳಿಸುವ ವಸ್ತು ಇದು. ಸಾಮಾನ್ಯ ಪೆಟ್ರೋಲ್ ಚಾಲಿತ ದ್ವಿಚಕ್ರ ವಾಹನಗಳ ವರ್ಗಕ್ಕೆ, ಎಲೆಕ್ಟ್ರಿಕ್ ಬೈಕ್ ಸೇರುವುದರಿಂದ ಇವುಗಳ ಸವಾರರು ಹೆಲ್ಮೆಟ್ ಧರಿಸುವುದು ಕಡ್ಡಾಯ ಮಾಡಬೇಕು. ಆದರೆ ಎಷ್ಟೋ ಕಡೆ ಎಲೆಕ್ಟ್ರಿಕ್ ಬೈಕ್ ಸವಾರರು ಹೆಲ್ಮೆಟ್ ಧರಿಸದೆ ದ್ವಿಚಕ್ರ ವಾಹನ ಚಲಾವಣೆ ಮಾಡುತ್ತಾರೆ. ಹೆಲ್ಮೆಟ್ ಜೀವರಕ್ಷಕ ಎಂಬುದು ಸತ್ಯ. ಅಪಘಾತಗಳ ಸಂದರ್ಭದಲ್ಲಿ ಹೆಲ್ಮೆಟ್‌ನಿಂದ ಹಲವರ ಜೀವ ಉಳಿದ ಬೇಕಾದಷ್ಟು ಉದಾಹರಣೆಗಳು ಕಾಣಸಿಗುತ್ತವೆ. ಹೀಗಾಗಿ ಹೆಲ್ಮೆಟ್ ಬಗೆಗೆ ನಿರ್ಲಕ್ಷ್ಯ ಯಾವತ್ತೂ ಸಲ್ಲದು. ಪೊಲೀಸರ ಭಯಕ್ಕೋ, ದಂಡದ ಭಯಕ್ಕೂ ಕಾಟಾಚಾರಕ್ಕೆ ಹೆಲ್ಮೆಟ್ ಧರಿಸುವುದಲ್ಲ ಅಥವಾ ಪೊಲೀಸರನ್ನು ಕಂಡಾಗ ಮಾತ್ರ ಹೆಲ್ಮೆಟ್ ಧರಿಸಿ ಸಾಗುವುದಲ್ಲ. ಯಾಕೆಂದರೆ, ಹೆಲ್ಮೆಟ್‌ಗೆ ಅದರದ್ದೇ ಆದ ಮಹತ್ವವಿದೆ. ಹೆಲ್ಮೆಟ್ ವಿಷಯದಲ್ಲಿ ನಿರ್ಲಕ್ಷ್ಯ ಬೇಡ.

–ಗೋವಿತ್ ಕಿರಣ್, ಮೈಸೂರು

ನಗರಪಾಲಿಕೆ ವಲಯ ಕಚೇರಿ ಅವ್ಯವಸ್ಥೆ

ಮಾನ್ಯರೆ,

ಮೈಸೂರು ನಗರ ವ್ಯಾಪ್ತಿಯ 9 ವಲಯ ಕಚೇರಿಯ ಬಹುತೇಕ ವಲಯಗಳಲ್ಲಿ ಪೂರ್ಣಾವಧಿ ಖಾಯಂ ವಲಯ ಆಯುಕ್ತರೇ ಇಲ್ಲದೆ ಅಭಿವೃದ್ಧಿ ಅಧಿಕಾರಿಗಳೇ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಸಾರ್ವಜನಿಕರ ಅಹವಾಲು ಸ್ವೀಕರಿಸುವ ಕಂದಾಯ ಇಲಾಖೆ ನಿಯೋಜನೆಯ ವಲಯ ಆಯುಕ್ತರುಗಳ ಖಾಲಿ ಪ್ರಕ್ರಿಯೆ ಮುಂದುವರಿದಿದೆ.

ವಲಯ ಆಯುಕ್ತರಾಗಿ ವರ್ಗವಾಗಿ ಬರುವ ಸಹಾಯಕ ಆಯುಕ್ತರು ಬಹುಬೇಗ ತಮ್ಮ ಮಾತೃ ಇಲಾಖೆಗೆ ವಾಪಸ್ಸಾಗುತ್ತಿದ್ದಾರೆ.

ಮಹಾನಗರ ಪಾಲಿಕೆ ಆಯುಕ್ತರು ಮತ್ತು ಮೇಯರ್ ಈ ಬಗ್ಗೆ ಗಮನಹರಿಸಿ ಎಲ್ಲಾ ಪಾಲಿಕೆ ವಲಯ ಕಚೇರಿಗಳಲ್ಲಿ ಪೂರ್ಣಾವಧಿ ವಲಯ ಆಯುಕ್ತರನ್ನು ನೇಮಿಸುವ ಮೂಲಕ ತೆರಿಗೆದಾರರ ಕಷ್ಟಗಳನ್ನು ನಿವಾರಿಸಲಿ.

–ಎಂ.ಎಸ್. ಶಾಂತಾರಾಂ, ಮೈಸೂರು.

ಹಳೆ ಜಿಲ್ಲಾಧಿಕಾರಿ ಕಚೇರಿ ರಸ್ತೆಗೆ ಅಳವಡಿಸಿರುವ ಗೇಟ್ ತೆರವುಗೊಳಿಸಿ

ಮಾನ್ಯರೆ,

ಮೈಸೂರಿನ ಕ್ರಾಫರ್ಡ್ ಹಾಲ್ ಬಳಿ ಇರುವ ಹಳೆಯ ಡಿಸಿ ಕಚೇರಿಯ ಕಟ್ಟಡದ ಬಳಿ ಸಾರ್ವಜನಿಕ ರಸ್ತೆಯನ್ನು ಅತಿಕ್ರಮಿಸಿ, ಅಲ್ಲಿ ಜನ, ವಾಹನಗಳು ಓಡಾಡದಂತೆ ನಿರ್ಮಿಸಿದ ಗೇಟ್ ತೆರವುಗೊಳಿಸಲು ಮನವಿ.



ಈ ಹಿಂದೆ ಅಂದಿನ ಜಿಲ್ಲಾಧಿಕಾರಿಗಳು ಕಚೇರಿ ಪಕ್ಕ ಹಾದು ಹೋಗುವ ವಾಹನಗಳಿಂದ ಕಿರಿಕಿರಿ ಉಂಟಾಗುತ್ತಿದೆ. ಜೊತೆಗೆ ಅಧಿಕಾರಿಗಳ ಏಕಾಗ್ರತೆಗೆ ಭಂಗವಾಗುತ್ತದೆ ಅಂತಲೋ ಏನೋ ಗೊತ್ತಿಲ್ಲ. ಜನರ ವಿರೋಧ ಇದ್ದರೂ ಗೇಟ್ ಅಳವಡಿಸಿ ಸಾರ್ವಜನಿಕ ಸಂಚಾರ ಬಂದ್ ಮಾಡಿಸಿದ್ದರು. ಈಗ ಇಲ್ಲಿಂದ ಜಿಲ್ಲಾಡಳಿತದ ಕಚೇರಿಗಳು ಸಿದ್ಧಾರ್ಥನಗರಕ್ಕೆ ಸ್ಥಳಾಂತರಗೊಂಡಿವೆ. ಈಗಲಾದರೂ ಸಾರ್ವಜನಿಕರ ರಸ್ತೆ ಬಂದ್ ಮಾಡಿರುವ ಗೇಟ್ ತೆಗೆಸಿ, ಶ್ರೀಸಾಮಾನ್ಯರ ಮುಕ್ತ ಓಡಾಟಕ್ಕೆ ಅನುವು ಮಾಡಿಕೊಡಿ.

–ಪಡುವಾರಹಳ್ಳಿ ರಾಮಕೃಷ್ಣ, ವಕೀಲರು, ಮೈಸೂರು.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು,
ರಾಮಕೃಷ್ಣ ವಿದ್ಯಾಶಾಲೆ,
ಮೈಸೂರು. ಮೊ.: 9036389640

ಈ ಜೀವನ...

ಒಣಗುವ ಸಂಬಂಧಗಳಿಗೆ ಉಸಿರು ಮುಡಿಸಬೇಕಿದೆ

ಅವ್ವೋ ನಿಂಗ ಒಂದ್ಕಿತ ಹೇಳಿದ್ರೆ ಅರ್ತ್ವಾಗಲ್ವ, ಯಾವಾಗ್ ನೋಡುದ್ರೂ ಅವರ ಅಟ್ಟಿಗೆ ಓಗೋದು ಅವರು ಮಾತಾಡಕಿಲ್ಲ ಅಂತ ಅದ್ನೆ ದೊಡ್ಡ ಸಂಗ್ತಿ ಮಾಡ್ತಾ ಅಳ್ತ ಇರಾದು! ಇಟೇಯಾ ನಿನ್ನ್ ಕೇಮಿ, ನಡಿ ನಡೀ ಬೇರೆ ಕೇಮಿ–ಗೇಮೆ ಇದ್ರೆ ನೋಡು ನಡಿ. ನಾ ಮೊದ್ಲೆ ಬಡ್ಕಂಡ್ನಿ, ನಮಗೆ ಸಂಬಂಧಿಕ್ರು ಬ್ಯಾಡ, ಸಂಬಂಧವ್ವೂ ಬ್ಯಾಡ, ಸುಮ್ಕೆ ದೂರಸ್ಟಕ್ಕ ದೂರ್ದಲ್ಲೇ ನಮ್ ಪಾಡ್ಗೆ ನಾವು ಇರುವ ಅಂತ! ನೀನೆಲ್ಲಿ ಕೇಳ್ದಿ ತಕೊ.... ಸಂಬಂಧ ಮುಖ್ಯ ಕಣ್ಲಾ, ಸಂಬಂಧಿಕ್ರು ಮುಖ್ಯ ಅಂತ ಎಲ್ಲು ಗೋರ್ಕಂದು ಓಡೋಡಿ ಬಂದೆ! ನೋಡ್ದ ತಿಳೀತಲ್ಲ ಸಂಬಂಧದ ಬೆಲೆ, ಈಗ ಅತ್ರ ಏನ್ ಬಂದದು? ನಡಿ, ನಡಿ ಸುಮ್ಕೆ ಏನಾದರೂ ಮಾಡು ಎಂದು ಒಂದೇ ಉಸ್ರುಗೆ ಹೇಳುತ್ತಿದ್ದ.

ಮಗನ ಮಾತನ್ನು ತದೇಕಚಿತ್ತದಿಂದ ಆಲಿಸುತ್ತಿದ್ದ ಜಾನಕವ್ವ ಅದ್ಯಾಕ್ ಮಗಾ ಅಂಗಂದಯಿ, ಬುಡು ಅತ್ಲಾಗಿ, ಮನುಸ್ಯ ಅಂದ್ ಮ್ಯಾಕ ನಾಲ್ಕು ಮಾತು ಬತ್ತವ–ಒಯ್ತವ! ಅಲ್ಲ ಅವರ್ ಏನ್ ಅಂದ್ರೂ ನಮ್ಮ–ಅವ್ರ ಸಂಬಂಧ ಏನಾದರೂ ಕಡ್ದು ಒಯ್ತಾದ! ಬಿಡು ಬಿಡು ಜೀವನ್ದಾಗ ಸಂಬಂಧ ಮುಖ್ಯ ಕಣ್ ಮಗ, ನಿಂಗ ಇನ್ನೂ ಎಳೆಪ್ರಾಯ ಏನು ತಿಳಿಯಾಕಿಲ, ನೊಂದ್ರ ಬೆಂದ್ರ ಗೊತ್ತಾಂಯ್ತು ಈಗ ಇವೆಲ್ಲಾ ಯಂಗ್ ತಿಳುದ್ದು ಏಳು.. ಬಾ ವಲುಕ್ ಓಗಿ ಏನಾದ್ರು ಕೇನಿಗೀಮೆ ಇದ್ರೆ ಮಾಡ್ಬುಟ್ಟು ಬರವ.......

ಆ ತಾಯಿ ಜಗವ ಕಂಡವಳು ಜಗದ್ಜನನಿ, ಸಂಬಂಧಗಳ ಗಾಢ ಮೌಲ್ಯ ಅರಿತವಳು. ಆದರೆ ಆ ಮಗ ಬಿಸಿ ರಕ್ತದವನು, ಅವನಿಗೆ ಯಾರ ಹತ್ತಿರ ಮಾತು ಕೇಳುವ ಅವಶ್ಯಕತೆಯಾಗಲೀ, ಅನಿವಾರ್ಯತೆಯಾಗಲೀ ಇದ್ದಂತೆ ಕಾಣಲಿಲ್ಲ. ಮತ್ತೊಬ್ಬರ ನೆರಳಿನಲ್ಲಿ ಇರಬಾರದೆನ್ನುವ ಜಾಯಮಾನದವ. ಆದರೆ ಆ ತಾಯಿಗೆ ಜೀವನ ಕಲಿಸಿದ ಪಾಠದ ಅರಿವಿದೆ. ಸಂಬಂಧಗಳ ನೆರಳಿನಲ್ಲಿ ಆಕೆ ನೋವುಂಡರೂ ಬದುಕಿಗೆ ಅದರ ಮಹತ್ವ ಎಷ್ಟು ಮುಖ್ಯವೆಂದು ತಿಳಿದವಳು, ಅದಕ್ಕಾಗಿಯೇ ಅವಳು ಆ ರೀತಿ ಮಾತಾನಾಡಿದ್ದು.

ಪಟ್ಟಣದ ಜಂಜಾಟದಲ್ಲೇ ಮೈ ಮನ ಮರೆತು ಯಾಂತ್ರಿಕ ಬದುಕು ನಡೆಸುತ್ತಿದ್ದ ನನಗೆ ನಿಜಕ್ಕೂ ತಾಯಿ, ಮಗನ ಆ ಸಂಭಾಷಣೆ ಒಂದು ಕ್ಷಣ ಹಳೆಯ ವಿಚಾರಗಳನ್ನು ಮೆಲುಕು ಹಾಕುವಂತೆ ಮಾಡಿತು. ಆ ತಾಯಿ ಹೇಳಿದ ವಿಚಾರಗಳು ಎಷ್ಟು ನಿಜ ಎಂಬ ಪ್ರಶ್ನೆ ಎದ್ದು ಕೂತಿತು?. ನಿಜ ಪ್ರಸ್ತುತ ದಿನಗಳಲ್ಲಿ ನಾವು ಮರೆತಿರುವ ಸಂಬಂಧಗಳ ಮೌಲ್ಯದ ಅರಿವಾಯಿತು. ತೀರಾ ಇತ್ತೀಚೆಗೆ ಸಂಬಂಧಿಕರಲ್ಲೇ ಹುಡುಗನೊಬ್ಬ ಹೇಳಿದ ಮಾತು ಕಣ್ ಮುಂದೆ ಬಂದಿತು.

ಅವನು: ನೀನ್ಯಾವಳೇ ನಂಗೆ ಹೇಳೊಕೆ.......

ದೊಡ್ಡವರು: ಅವಳು ನಿಂಗ ಅಕ್ಕ ಅಲ್ಲವೇನೋ?

ಅವನು: ಅದೆಲ್ಲಾ ಬೇಕಿಲ್ಲ ಅವಳ್ಯಾರು ನಂಗ ಬೈಯೊಕೆ ?!!

ಅವಳು ನಂಗ ಏನು ಆಗಬೇಕಿಲ್ಲ, ನಾನು ನಮ್ಮ ಅಪ್ಪನಿಗೆ ಮಗ ಅಷ್ಟೇ !!!!

ಅಕ್ಕ ದೊಡ್ಡವರ ಮಾತಿನ ಮಧ್ಯೆ ಮಾತನಾಡಿದ ತಮ್ಮನನ್ನ ಗದರಿದಾಗ ತಮ್ಮನು ಆಡಿದ ನುಡಿಗಳಿವು. ಒಂದು ಕ್ಷಣ ಆ ಹುಡುಗನನ್ನು ಪ್ರೀತಿಯಿಂದ ಮಾತನಾಡಿಸಲು ಹೋದರೆ ಕೇಳಲು ಅವನಿಗೆ ತಾಳ್ಮೆ ಇಲ್ಲ. ಏನು ನೀವು ದೊಡ್ಡವರೆಲ್ಲಾ ಹೇಳಿದ್ದಂಗೆ ನಾವು ಕೇಳಬೇಕಾ? ಯಾವಾಗಲೂ ಚಿಕ್ಕವರು ಅಂದರೆ ಬೆಲೆನೇ ಇಲ್ಲ! ಯಾವಾಗಲೂ ದೊಡ್ಡವರಿಂದ ಬರಿ ಬೈಯಿಸಿಕೊಳ್ಳೋದೆ, ಬುದ್ಧಿವಾದ ಹೇಳಿಸಿಕೊಳ್ಳೋದೆ ಆಯಿತು! ನಮ್ಗೆ ಏನು ಸ್ವಾತಂತ್ರ್ಯವೇ ಇಲ್ವ? ಎಂಬ ಎಡಬಿಡದ ಅವನ ನುಡಿಗಳಿಗೆ ಉತ್ತರ ನೀಡಲು ನಾನು ತಯಾರಾಗಿದ್ದರೂ ಕೇಳುವ ಮನಸ್ಥಿತಿಯಲ್ಲಿ ಅವನಿರದ ಕಾರಣ ಏನು ಮಾತನಾಡದೆ ಬಂದೆ. ನನಗೆ ಮೊದಲು ಅನಿಸಿದ್ದು ಇಂದಿನ ಮಕ್ಕಳ ಈ ತರಹದ ನಡವಳಿಕೆಗೆ ಕಾರಣ ಯಾರು? ಇಂದಿನ ಮಕ್ಕಳಿಗೆ ತಾಳ್ಮೆ ಏಕಿಲ್ಲ. ಸಂಬಂಧಗಳ ಮೌಲ್ಯ ತಿಳಿಯದೇ ಈ ರೀತಿ ವರ್ತಿಸಲು ಕಾರಣವೇನು? ಎಂಬಿತ್ಯಾದಿ ಪ್ರಶ್ನೆಗಳು ನನ್ನನ್ನು ಕಾಡತೊಡಗಿದವು. ಆಗ ಹೊಳೆದ ಉತ್ತರ ಎಂದರೆ ನಮ್ಮ ಇಂದಿನ ಬದುಕಿನ ಶೈಲಿ ಇದಕ್ಕೆಲ್ಲಾ ಕಾರಣ ಎಂಬ ಉತ್ತರ ತಕ್ಷಣಕ್ಕ ಬಂದರೂ ಅದೊಂದೇ ಕಾರಣವಲ್ಲ ಎಂದೆನಿಸಿತು.



> ಸಂಬಂಧಗಳ ಮಹತ್ವ ತಿಳಿಯದ ಇಂದಿನ ಯುವ ಜನಾಂಗ ನಾನು, ನನ್ನದು ಅನ್ನುವ ಸ್ವಾರ್ಥದೆಡೆಗೆ ಸಾಗುತ್ತಿದೆ. ನಾವು ಹೋಗಿ ನಾನು ಎಂಬ ಅಹಂಕಾರ ಮೂಡಿದಾಗ ಸಂಬಂಧಗಳ ಬೆಲೆ ಕಳಚಿ ಬೀಳುತ್ತದೆ. ನಮಗೆಲ್ಲ ನಮ್ಮ ಅಜ್ಜ ತಪ್ಪು ಮಾಡಿದಾಗ ತೊಡೆ ಮೇಲೆ ಕೂರಿಸಿಕೊಂಡು ಕಥೆಗಳನ್ನು ಹೇಳಿ ಆ ಮೂಲಕ ಸದ್ಗುಣಗಳನ್ನು ಬೆಳೆಸಿಕೊಳ್ಳುವಂತೆ ಮಾಡುತ್ತಿದ್ದರು. ಆದರೆ ಪ್ರಸ್ತುತ ದಿನಗಳಲ್ಲಿ ಈ ಸೌಭಾಗ್ಯ ದೊರೆಯದಂತಾಗಿ ಮಕ್ಕಳಿಗೆ ಸಂಬಂಧಗಳ ಮೌಲ್ಯ ತಿಳಿಯದಾಗಿದೆ ಎನ್ನಬಹುದು. ಅವಿಭಕ್ತ ಕುಟುಂಬಗಳು ಇದ್ದಾಗ ಜಗಳ, ಮನಸ್ತಾಪ, ಕೋಪ, ತಾಪಗಳು ಇರಲೇ ಇಲ್ಲವೆಂದು ಹೇಳುತ್ತಿಲ್ಲ. ಆದರೆ ಅದನ್ನು ತಿದ್ದಿ ತೀಡುವ ಮನಸ್ಸುಗಳು ಜೊತೆಯಾಗಿರುತ್ತಿದ್ದರಿಂದ ಅವುಗಳೆಲ್ಲಾ ಕ್ಷಣ ಮಾತ್ರದಲ್ಲೇ ಕಣ್ಮರೆಯಾಗುತ್ತಿದ್ದವು.

ಹಾಗಾದರೆ ಇಂದಿನ ಮಕ್ಕಳಲ್ಲಿ ಸಂಬಂಧಗಳ ಮೌಲ್ಯ ಕಡಿದು ಹೋಗಲು ಕಾರಣವಾಗುತ್ತಿರುವ ಅಂಶಗಳಾದರೂ ಯಾವುವು ಎಂದು ಯೋಚಿಸಿದಾಗ ನೆನಪಾದ ಉತ್ತರಗಳಿವು

ಕಾಣೆಯಾಗುತ್ತಿರುವ ಅವಿಭಕ್ತ ಕುಟುಂಬಗಳು

ಮೊದಲೆಲ್ಲಾ ಅವಿಭಕ್ತ ಕುಟುಂಬಗಳಿದ್ದವು. ಅಜ್ಜ, ಅಜ್ಜಿ ಅಮ್ಮ ಅಪ್ಪ ದೊಡ್ಡಪ್ಪ ದೊಡ್ಡಮ್ಮ ಚಿಕ್ಕಪ್ಪ ಚಿಕ್ಕಮ್ಮ ಅತ್ತೆ, ಮಾವ, ಮನೆ ತುಂಬಾ ಮಕ್ಕಳು ಹೀಗೆ ಎಲ್ಲರೂ ಜೊತೆಯಲ್ಲಿರುತ್ತಿದ್ದರು. ಒಟ್ಟಿಗೆ ಸೇರಿ ಹಬ್ಬಗಳನ್ನು ಸಂಭ್ರಮದಿಂದ, ಸಡಗರದಿಂದ ಆಚರಿಸುತ್ತಿದ್ದರು. ಒಂದೇ ಮನೆಯಲ್ಲಿ ಎಲ್ಲರೊಂದಿಗೂ ಕುಳಿತು ಹರಟುತ್ತಿದ್ದರು. ಒಮ್ಮೊಮ್ಮೆ ಆಕಸ್ಮಿಕವಾಗಿ ಚಿಕ್ಕವರು ತಪ್ಪು ಮಾಡಿದರೆ ಅಥವಾ ಅನಗತ್ಯವಾದ ಚಟುವಟಿಕೆಯಲ್ಲಿ ಭಾಗಿಯಾದರೆ ದೊಡ್ಡವರು ಕರೆದು ಬುದ್ಧಿ ಹೇಳಿ, ಅವರಿಗೆ ಸರಿ, ತಪ್ಪುಗಳ ಮಹತ್ವ ತಿಳಿಸಿ ಹೇಳುತ್ತಿದ್ದರು. ಯಾವುದನ್ನು ಮಾಡಬೇಕು, ಮಾಡಬಾರದು ಎಂಬಿತ್ಯಾದಿ ವಿಷಯಗಳನ್ನು ತಿಳಿಸಿ, ಬಿಡಿಸಿ ಹೇಳುತ್ತಿದ್ದರು. ಆದರೆ ಇತ್ತೀಚೆಗೆ ನಮ್ಮಲ್ಲಿ ಅವಿಭಕ್ತ ಕುಟುಂಬಗಳು ಮರೆಯಾಗಿ ವಿಭಕ್ತ ಕುಟುಂಬಗಳೇ ಹೆಚ್ಚಾಗಿ ನಮ್ಮ ನಡುವೆ ಇರಬೇಕಾದ ಸಂಬಂಧಗಳ ಅರಿವೆ ಇಲ್ಲದಂತೆ ಬದುಕು ಸಾಗಿಸುತ್ತಿದ್ದೇವೆ. ಹಾಗಾಗಿ ಸಂಬಂಧಗಳ ಮಹತ್ವ ತಿಳಿಯದ ಇಂದಿನ ಯುವ ಜನಾಂಗ ನಾನು, ನನ್ನದು ಅನ್ನುವ ಸ್ವಾರ್ಥದೆಡೆಗೆ ಸಾಗುತ್ತಿದೆ. ನಾವು ಹೋಗಿ ನಾನು ಎಂಬ ಅಹಂಕಾರ ಮೂಡಿದಾಗ ಸಂಬಂಧಗಳ ಬೆಲೆಯು ಕಳಚಿ ಬೀಳುತ್ತದೆ. ನಮಗೆಲ್ಲ ನಮ್ಮ ಅಜ್ಜ ತಪ್ಪು ಮಾಡಿದಾಗ ತೊಡೆ ಮೇಲೆ ಕೂರಿಸಿಕೊಂಡು ಕಥೆಗಳನ್ನು ಹೇಳಿ ಆ ಮೂಲಕ ಸದ್ಗುಣಗಳನ್ನು ಬೆಳೆಸಿಕೊಳ್ಳುವಂತೆ ಮಾಡುತ್ತಿದ್ದರು. ಆದರೆ ಪ್ರಸ್ತುತ ದಿನಗಳಲ್ಲಿ ಈ ಸೌಭಾಗ್ಯ ದೊರೆಯದಂತಾಗಿ ಮಕ್ಕಳಿಗೆ ಸಂಬಂಧಗಳ ಮೌಲ್ಯ ತಿಳಿಯದಾಗಿದೆ ಎನ್ನಬಹುದು. ಅವಿಭಕ್ತ ಕುಟುಂಬಗಳು ಇದ್ದಾಗ ಜಗಳ, ಮನಸ್ತಾಪ, ಕೋಪ, ತಾಪಗಳು ಇರಲೇ ಇಲ್ಲವೆಂದು ಹೇಳುತ್ತಿಲ್ಲ, ಆದರೆ ಅದನ್ನು ತಿದ್ದಿ ತೀಡುವ ಮನಸ್ಸುಗಳು ಜೊತೆಯಾಗಿರುತ್ತಿದ್ದರಿಂದ ಅವುಗಳೆಲ್ಲಾ ಕ್ಷಣ ಮಾತ್ರದಲ್ಲೇ ಕಣ್ಮರೆಯಾಗುತ್ತಿದ್ದವು.

ಹಣಕ್ಕೆ ನೀಡುತ್ತಿರುವ ಹೆಚ್ಚಿನ ಮಾನ್ಯತೆ

ಹೇಗಾದರೂ ಸರಿ ಒಳ್ಳೆಯ ಉದ್ಯೋಗವನ್ನು ಕಬಳಿಸು, ಹಣವನ್ನು ಗಳಿಸು, ಒಂದು ಒಳ್ಳೆಯ ನಿವೇಶನವನ್ನು ತೆಗೆದುಕೊಂಡು ಮನೆಯನ್ನು ಕಟ್ಟು .... ಇದು ಸ್ಪರ್ಧಾತ್ಮಕ ಯುಗ ಓಡಿ, ಮುನ್ನುಗ್ಗು ಎಂಬಂತಹ ಧೋರಣೆಗಳಿಂದ ಇಂದಿನ ಮಕ್ಕಳಿಗೆ ಸಂಬಂಧಗಳ ಮೌಲ್ಯ ತಿಳಿಯುತ್ತಿಲ್ಲ ಎಂಬುದು ಒಪ್ಪಲೇಬೇಕಾದ ಕಹಿ ಸತ್ಯ.

ಹಿಂದಿನ ಕಾಲದಲ್ಲಿ ಮನುಷ್ಯ ಮುಖ್ಯ, ಮಾನವೀಯತೆ ಮುಖ್ಯ ಅಂತ ಸಂಬಂಧಗಳಿಗೆ ಬೆಲೆ ನೀಡುತ್ತಿದ್ದರು. ಕಾಲ ಬದಲಾದಂತೆ ಹಣ ತನ್ನ ಪ್ರಾಮುಖ್ಯತೆಯನ್ನು ಮೆರೆಯುತ್ತಾ ಬಂದು ಸಂಬಂಧಗಳ ನಡುವೆ ಕಂದಕವನ್ನುಂಟುಮಾಡಿದೆ. ಒಂದೇ ಮನೆಯಲ್ಲಿದ್ದೂ ಒಬ್ಬರ ಮುಖ ಒಬ್ಬರು ನೋಡದಾಗೆ, ಬೇರೆ ಬೇರೆ ಅಡುಗೆ ಮಾಡಿಕೊಳ್ಳುವ ಹಾಗೆ ಅಣ್ಣ–ತಮ್ಮಂದಿರಲ್ಲಿ, ಅಕ್ಕ–ತಂಗಿಯರಲ್ಲಿ, ತಾಯಿ–ಮಕ್ಕಳಲ್ಲಿ ಸಂಬಂಧ ಮುರಿದು ಬೀಳುವಾಗೆ ಮಾಡುವಲ್ಲಿ ಹಣ ನಿರ್ಣಾಯಕ ಪಾತ್ರ ವಹಿಸಿದೆ. ವ್ಯಕ್ತಿಗಿಂತ ಹಣಕ್ಕೆ ಮಾನ್ಯತೆ ನೀಡುತ್ತಾ ಹೋದಂತೆ ಸಂಬಂಧಗಳ ಮೌಲ್ಯ ಕಡಿಮೆಯಾಗುತ್ತಾ ಬಂದಿದೆ.ಇದನ್ನು ಹೇಳುವಾಗ ಇತ್ತೀಚೆಗೆ ಓದಿದ ಸಣ್ಣ ಕಥೆಯೊಂದು ನೆನಪಿಗೆ ಬರುತ್ತದೆ.

ಕಥೆ: ತನ್ನ ಕಿಸೆಯಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಇಟ್ಟುಕೊಂಡು ಹೊರಟ್ಟಿದ್ದ ಧನಿಕನೊಬ್ಬನ ಕಾರು ಅಪಘಾತಕ್ಕೆ ಒಳಗಾಯಿತು. ಅಪಘಾತಕ್ಕೆ ಒಳಗಾದ ಧನಿಕನನ್ನು ನೋಡಿ ಕನಿಕರದಿಂದ ರೈತನೊಬ್ಬ ಬಂದ. ಅವನನ್ನು ಆಸ್ಪತ್ರೆಗೆ ಸಾಗಿಸಿ ರಕ್ಷಿಸುವ ಉದ್ದೇಶದಿಂದ ರೈತ ಧನಿಕನ ಹತ್ತಿರ ಬರುತ್ತಿದ್ದರೆ ಯಾವುದೇ ಕಾರಣಕ್ಕೂ ತನ್ನ ಹತ್ತಿರ ಬರಬಾರದೆಂಬ ಸೂಚನೆಯನ್ನು ಆ ಧನಿಕ ನೀಡಿದ. ರೈತ ಬೇರೆಯವರ ಸಹಾಯವನ್ನಾದರೂ ಪಡೆದು ಆ ಧನಿಕನನ್ನು ಉಳಿಸುವೆ ಎಂದು ಇನ್ನಿತರರ ಸಹಾಯವನ್ನು ಪಡೆಯಲು ಧಾವಿಸಿದ. ಒಂದಿಬ್ಬರನ್ನು ಒಪ್ಪಿಸಿ ಕರೆದುಕೊಂಡು ಬರುವಷ್ಟರಲ್ಲಿ ಧನಿಕ ನಿಧನನಾಗಿದ್ದ. ರೈತ ಆ ಧನಿಕನ ಹತ್ತಿರ ಹೋಗಿ ನೋಡಿದಾಗ ಅವನ ಕಿಸೆಯಲ್ಲಿದ್ದ ಲಕ್ಷ ರೂಪಾಯಿ ಕಾಣಿಸಿತು ಹಾಗೂ ತನ್ನನ್ನು ಅವನು ಹತ್ತಿರ ಬರದಂತೆ ತಡೆದ ಕಾರಣವೂ ತಿಳಿಯಿತು.

ಹಣ ಜೀವನಕ್ಕೆ ಬೇಕು ನಿಜ, ಆದರೆ ಹಣವೇ ಜೀವನವಲ್ಲ – ಈ ಸತ್ಯ ಅರಿತ ದಿನ ಸಂಬಂಧಗಳ ಮೌಲ್ಯ ಅರಿವಾಗಬಹುದು.

ಬದಲಾಗುತ್ತಿರುವ ಪೋಷಕರ ಮನಸ್ಥಿತಿ

ನಾವು ಪಟ್ಟಂತಹ ಕಷ್ಟವನ್ನು ನಮ್ಮ ಮಕ್ಕಳು ಪಡಬಾರದು ಎಂದು ಮಕ್ಕಳು ಕೇಳಿದ್ದನ್ನೆಲ್ಲ ಕೊಡಿಸುವ, ಅವರ ತಾಳಕ್ಕೆ ಕುಣಿಯುವ ಪೋಷಕರು ಇಂದು ಎಲ್ಲೆಡೆ ಹೆಚ್ಚಾಗಿ ಕಂಡುಬರುತ್ತಿದ್ದಾರೆ. ಪೋಷಕರ ಈ ಧೋರಣೆಯಿಂದ ಇಂದಿನ ಮಕ್ಕಳಲ್ಲಿ ಹಠಮಾರಿತನ, ಸ್ವಾರ್ಥತನ ಹೆಚ್ಚುತ್ತಿದೆ. ಕಷ್ಟಗಳಿಲ್ಲದೇ ಬರಿ ಸುಖದಿಂದ ಮಕ್ಕಳನ್ನು ಬೆಳೆಸಿದರೆ ಅವರಿಗೆ ಬದುಕಿನ ಬೆಲೆ ತಿಳಿಯುವುದಾದರೂ ಹೇಗೆ? ಬದುಕಿನ ಬೆಲೆ ಅರ್ಥವಾಗದೇ, ಸಂಬಂಧಗಳ ಬೆಲೆ ತಿಳಿಯುವುದಾದರೂ ಹೇಗೆ? ಮಕ್ಕಳಿಗೆ ತಿಳುವಳಿಕೆಯನ್ನು ಕಲಿಸಿ ಅವರ ಉನ್ನತವಾದ ಬದುಕಿಗೊಂದು ಮುನ್ನುಡಿಯನ್ನು ನೀಡಬೇಕಾದುದು ಪ್ರತಿಯೊಬ್ಬ ಪೋಷಕರ ಆದ್ಯ ಕರ್ತವ್ಯವಾಗಿದೆ. ಹೀಗಾದಾಗ ಮಾತ್ರ ಮಕ್ಕಳಲ್ಲಿ ಜೀವನದ ಬಗೆಗೆ ಪ್ರೀತಿ, ಸಂಬಂಧಗಳ ಬಗ್ಗೆ ಗೌರವ ಮೂಡಿಬರಲು ಸಾಧ್ಯ. ಇದನ್ನು ಹೇಳುವಾಗ ವಾರದ ಹಿಂದಷ್ಟೇ ಹತ್ತಿರದ ಸಂಬಂಧಿಕರೊಬ್ಬರ ತಾಯಿ ನಿಧನ ಹೊಂದಿದ ಘಟನೆ ನೆನಪಿಗೆ ಬರುತ್ತದೆ. ಆ ಮಹಾತಾಯಿ ಆರು ಮಕ್ಕಳನ್ನು (ಐವರು ಗಂಡುಮಕ್ಕಳು, ಒಬ್ಬರು ಹೆಣ್ಣುಮಗಳು) ಹಡೆದು ಅವರಿಗೆಲ್ಲಾ ಉತ್ತಮ ನೆಲೆ ಕಲ್ಪಿಸಿ ಕೊಟ್ಟಿದ್ದರೂ ಕೂಡ ಆಕೆಯ ಕೊನೆಗಾಲದಲ್ಲಿ ಅವರನ್ನು ಅವರ ಮಕ್ಕಳೇ ವೃದ್ಧಾಶ್ರಮದಲ್ಲಿರಿಸಿದ್ದರು (ಮಕ್ಕಳೇನು ಕೆಟ್ಟವರಲ್ಲ ವೃದ್ಧಾಶ್ರಮದವರಿಗೆ ತಿಂಗಳಿಗೆ ಹತ್ತು ಸಾವಿರ ಕೊಡುತ್ತಿದ್ದರು. ಪಾಪ ಅವರಿಗೆಲ್ಲಾ ಕೆಲಸದ ಒತ್ತಡ ಆ ತಾಯಿಯನ್ನು ನೋಡಿಕೊಳ್ಳಲು ತಾಳ್ಮೆ, ಸಮಯ ಇರಲಿಲ್ಲ ...! ಅಷ್ಟೇ) ಮಕ್ಕಳು, ಮೊಮ್ಮಕ್ಕಳು ಕೊಟ್ಟ ಕಾರಣ ಏನೇ ಇದ್ದರೂ ಆ ಹಿರಿಯ ಜೀವ ಕಡೇಗಾಲದಲ್ಲಿ ಎಷ್ಟು ನೋವು ಅನುಭವಿಸಿರಬೇಕು ಎಂಬುದನ್ನು ನೆನಪಿಸಿಕೊಂಡಾಗ ಉಂಟಾದ ತಳಮಳವನ್ನು ವಿವರಿಸಲಾಗದು. ಹಾಗಾಗಿ ಪೋಷಕರು ಮಕ್ಕಳಿಗೆ ಮೊದಲು ಉತ್ತಮವಾದ ಸಂಸ್ಕಾರವನ್ನು, ಸಂಬಂಧಗಳ ಮೌಲ್ಯವನ್ನು ತಿಳಿಸಿ ಕೊಡುವುದು ಅವರ ಮುಖ್ಯವಾದ ಜವಾಬ್ದಾರಿ ಎನ್ನುವುದು ನನ್ನ ಅಭಿಪ್ರಾಯ.

ಆಧುನಿಕತೆಯ ಬದಲಾವಣೆ

ನಮ್ಮನ್ನು ನಾವು ಕಾಲಕ್ಕೆ ತಕ್ಕಂತೆ ಬದಲಿಸಿಕೊಳ್ಳಬೇಕೆಂಬ (ಅಪ್ಡೇಟ್) ಅತಿಯಾದ ಆಧುನಿಕತೆಯು ಕೂಡ ಸಂಬಂಧಗಳ ಮೌಲ್ಯ ಕಡಿಮೆಯಾಗಲು ಕಾರಣವೆನ್ನಬಹುದು. ಮೊದಲೆಲ್ಲಾ ಮನೆಗೆ ಯಾರಾದರೂ ಅತಿಥಿಗಳು ಬಂದರೆ ಅವರ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದರು, ಕಷ್ಟ–ಸುಖಗಳನ್ನು ವಿಚಾರಿಸಿ ಸಲಹೆ ಸೂಚನೆಗಳನ್ನು ನೀಡುತ್ತಿದ್ದರು (ಈಗಲೂ ನೀಡುತ್ತಾರೆ ಆದರೆ ಅದು ಮಾತುಗಳಲ್ಲಿ ಅಲ್ಲ– ಸ್ಟೇಟಸ್‌ಗಳಲ್ಲಿ ಮಾತ್ರ ಕೆಲವೊಮ್ಮೆ ನಮ್ಮ ಭಾವನೆಗಳನ್ನು ಹಂಚಿಕೊಳ್ಳುವ ಮನಸ್ಸಿಲ್ಲ ಎಂದು ಸ್ಟೇಟಸ್ ಹಾಕಿದರೆ ಬೇಗನೆ ಪ್ರತಿಕ್ರಿಯಿಸುತ್ತಾರೆ. ನೀನು ಹಾಕಿರುವ ಸ್ಟೇಟಸ್ ಚೆನ್ನಾಗಿದೆ ನನಗೂ ಕಳಿಸು ಅಂತ!!) ಬಸ್‌ಗಳಲ್ಲಿ ಪ್ರಯಾಣ ಮಾಡಬೇಕಾದರೆ ಪಕ್ಕ ಕುಳಿತವರ ಪೂರ್ವಾಪರಗಳನ್ನು ಕೇಳಿ ಪರಸ್ಪರ ಪರಿಚಿತರಾಗುತ್ತಿದ್ದರು. ಸಮಸ್ಯೆಗಳಲ್ಲಿ ಸಿಲುಕಿಗೊಂಡವರಿಗೆ ತಮ್ಮ ಅನುಭವದ ಹಿತನುಡಿಗಳನ್ನು ಹೇಳಿ ಅವರಲ್ಲಿ ಪ್ರೋತ್ಸಾಹ, ಧೈರ್ಯ ತುಂಬುತ್ತಿದ್ದರು. ಆದರೆ ಆಧುನಿಕತೆಯ ಬದಲಾವಣೆಯ ಗಾಳಿ ಬೀಸ ತೊಡಗಿ ಪರಸ್ಪರ ಮಾತುಕತೆ ಕಡಿಮೆಯಾಯಿತು. ಜಂಗಮವಾಣಿಯ ಪ್ರಭಾವದಿಂದ ಬೇಕಾದದ್ದನ್ನು, ಬೇಡವಾದದ್ದನ್ನು ತಿಳಿಯುವ ಕೆಟ್ಟ ಕುತೂಹಲ ಆರಂಭವಾಯಿತು (ಜಂಗಮವಾಣಿ, ಅಂತರ್ಜಾಲಗಳಿಂದ ಬರಿ ಕೆಟ್ಟದ್ದೆ ಆಗಿಲ್ಲ, ಒಳ್ಳೆಯದ್ದು ಆಗಿದೆ) ಮಕ್ಕಳು ಊಟ ಮಾಡಲು ಹಠ ಮಾಡುತ್ತಿದ್ದರೆ ತಾಯಿ ಮಗುವಿಗೆ ಚಂದಮಾಮನನ್ನು ತೋರಿಸಿ ಊಟ ಮಾಡಿಸುತ್ತಿದ್ದ ದಿನಗಳು (ಪ್ರಸ್ತುತ ಆಧುನಿಕ ತಾಯಂದಿರು ಜಂಗಮವಾಣಿ ನೀಡಿ ಊಟ ಮಾಡಿಸುವರು ಅಷ್ಟೇ!) ಅಜ್ಜಿಯ ಜೊತೆ ಕುಳಿತು ಕಥೆ ಕೇಳುತ್ತಿದ್ದ ದಿನಗಳು, ಹುಣ್ಣಿಮೆಯ ಬೆಳದಿಂಗಳಿನಲ್ಲಿ ಅಜ್ಜಿಯ ಸುತ್ತಾ ಮೊಮ್ಮಕ್ಕಳೆಲ್ಲಾ ಆನಂದದಿಂದ ಕುಳಿತು ಕೈ ತುತ್ತು ತಿನ್ನುತ್ತಿದ್ದ ಕಾಲಗಳೆಲ್ಲಾ ಆಧುನಿಕತೆಯ ಬದಲಾವಣೆಯಿಂದಾಗಿ ಕಣ್ಮರೆಯಾಗಿರುವುದಲ್ಲದೇ ಸಂಬಂಧಗಳ ಮೌಲ್ಯವು ಕಳಚಿ ಬೀಳುತ್ತಿರುವುದು ಆಧುನಿಕತೆಯ ಹೆಸರಲ್ಲಿ ನಡೆಯುತ್ತಿರುವ ದುರಂತವೆಂದೇ ಹೇಳಬಹುದು.

ಸಂಬಂಧಗಳ ಮೌಲ್ಯ ಕಡಿಮೆಯಾಗಲು ಇವಿಷ್ಟೇ ಕಾರಣವಲ್ಲ, ಬೇರೆ ಬೇರೆಯ ಕಾರಣಗಳು ಇರುತ್ತವೆ. ಕಾರಣಗಳು ಏನೇ ಇದ್ದರೂ ಅವುಗಳನ್ನು ಸಾಧ್ಯವಾದಷ್ಟು ಕಡಿಮೆ ಮಾಡಿಕೊಂಡು ಬೆಲೆ ಕಳೆದುಕೊಂಡಿರುವ, ಒಣಗಿ ನಿಂತಿರುವ ಸಂಬಂಧಗಳಿಗೆ ಮರು ಉಸಿರನ್ನು ನೀಡಬೇಕಾಗಿರುವುದು ಪ್ರತಿಂಯೊಬ್ಬರ ಜವಾಬ್ದಾರಿಯೂ ಆಗಬೇಕು. ಏಕೆಂದರೆ ಬಂಧಗಳಿಗೆ ಒಳಗಾದರೂ ಸಂಬಂಧಗಳನ್ನು ಕೈಬಿಡಬಾರದು.

ಸಿಂಹದಮರಿ ಸೇವಾ ಟ್ರಸ್ಟ್‌ನಿಂದ ಸ್ವಾತಂತ್ರ್ಯ ದಿನಾಚರಣೆ; ಪೌರಕಾರ್ಮಿಕರಿಂದ ಧ್ವಜಾರೋಹಣ



ಮೈಸೂರು,ಆ.17(ಪಿಎಂ)–ಮೈಸೂರಿನ ದೇವರಾಜ ರಸ್ತೆಯಲ್ಲಿ ಸಿಂಹದ ಮರಿ ಸೇವಾ ಟ್ರಸ್ಟ್‌ನಿಂದ ಹಮ್ಮಿಕೊಂಡಿದ್ದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಪೌರಕಾರ್ಮಿಕರು ಧ್ವಜಾರೋಹಣ ನೆರವೇರಿಸಿದರು.

ಬಳಿಕ ಟ್ರಸ್ಟ್ ಕಾರ್ಯಾಧ್ಯಕ್ಷ ದರ್ಶನ್ ಯದುರಾಜ್ ಮಾತನಾಡಿ, ಈ ದೇಶದ ಸ್ವತಂತ್ರಕ್ಕಾಗಿ ಸಾವಿರಾರು ಸ್ವತಂತ್ರ ಯೋಧರು ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಹೋರಾಡಿದ್ದಾರೆ. ಭಾರತೀಯ ನಾಗರಿಕರಾಗಿ ನಾವು ಅಂತಹ ವೀರರನ್ನು ನೆನೆಸಿಕೊಳ್ಳಲೇಬೇಕು. ಈ ದೇಶಕ್ಕಾಗಿ ದುಡಿಯುತ್ತಿರುವ ಪ್ರತಿಯೊಬ್ಬ ವ್ಯಕ್ತಿಯೂ ಯೋಧರೇ ಆಗಿದ್ದು, ಅಂತೆಯೇ ನಮ್ಮ ಪೌರಕಾರ್ಮಿಕರು ಕೂಡ ಸ್ವಚ್ಛತೆ ಯೋಧರೇ ಎಂದರು.

ಪೌರಕಾರ್ಮಿಕ ಅಂಬಯ್ಯ ಮಾತನಾಡಿ, ನಮ್ಮನ್ನು ಆಹ್ವಾನಿಸಿ ಧ್ವಜಾರೋಹಣಕ್ಕೆ ಅವಕಾಶ ಕಲ್ಪಿಸಿರುವ ಟ್ರಸ್ಟ್‌ಗೆ ಧನ್ಯವಾದ ಅರ್ಪಿಸುತ್ತೇವೆ. ಈ ರೀತಿ ಪ್ರೋತ್ಸಾಹ ನಮಗೆ ಇನ್ನಷ್ಟು ಹುಮ್ಮಸ್ಸಿನಿಂದ ಕೆಲಸ ಮಾಡಲು ಶಕ್ತಿ ಕೊಡಲಿದೆ. ಈ ದೇಶದ ಸ್ವಾತಂತ್ರ್ಯಕ್ಕಾಗಿ ದುಡಿದ ಎಲ್ಲರಿಗೂ ನನ್ನ ಗೌರವ ನಮನ ಸಲ್ಲಿಸುತ್ತೇನೆ ಎಂದರು. ಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ಟ್ರಸ್ಟಿನ ಗೌರವಾಧ್ಯಕ್ಷ ಕೆ.ದಿನೇಶ್, ಅಧ್ಯಕ್ಷ ನಂಜುಂಡಸ್ವಾಮಿ, ಪ್ರಧಾನ ಕಾರ್ಯದರ್ಶಿಗಳಾದ ರೂಪೇಶ್, ನವೀನ್, ಹಿರಿಯ ಪತ್ರಕರ್ತ ಎಂ.ಟಿ.ಜಯರಾವ್, ಮುಖಂಡರಾದ ಶಿವಣ್ಣ, ಮಂಜಣ್ಣ ರಾಷ್ಟ್ರೀಯ ಹಿಂದೂ ಸಮಿತಿಯ ತೇಜಸ್ ಕೌಶಿಕ್, ಮಧು, ವಿನೋದ್ ಕುಮಾರ್, ಪುನೀತ್, ಪ್ರಾಣೇಶ್, ರಾಜಣ್ಣ, ಮುರಳೀಧರ್, ಬಸವಣ್ಣ, ಸಂತೋಷ, ರೋಹಿತ್, ರವಿ ಮತ್ತಿತರರು ಹಾಜರಿದ್ದರು.

ಪ್ರಗತಿಪರ ಸಾಹಿತಿಗಳಿಗೆ ಜೀವ ಬೆದರಿಕೆ ಗಂಭೀರವಾಗಿ ಪರಿಗಣಿಸಲಾಗುವುದು



ಬೆಂಗಳೂರು: ರಾಜ್ಯದ ಪ್ರಗತಿಪರ ಸಾಹಿತಿಗಳು ಮತ್ತು ಚಿಂತಕರಿಗೆ ಜೀವ ಬೆದರಿಕೆ ಹಾಕಿರುವುದನ್ನು ಗಂಭೀರವಾಗಿ ಪರಿಗಣಿಸಲಾಗುವುದು ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಹೇಳಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಪರಮೇಶ್ವರ್, ಬೆದರಿಕೆ ಎದುರಿಸುತ್ತಿರುವ ಸಾಹಿತಿಗಳಿಗೆ ಸೂಕ್ತ ಭದ್ರತೆ ಒದಗಿಸುವಂತೆ ಪೊಲೀಸ್ ಕಮಿಷನರ್ ಮತ್ತು ಡಿಜಿಪಿಗೆ ಈಗಾಗಲೇ ಸೂಚಿಸಿದ್ದೇನೆ ಎಂದರು. ಸಾಹಿತಿಗಳು ನನ್ನ ಭೇಟಿಗೆ ಸಮಯ ಕೇಳಿದ್ದು, ಅವರನ್ನು ಭೇಟಿ ಮಾಡುತ್ತೇನೆ. ಬೆದರಿಕೆ ಪತ್ರವನ್ನು ಡಿಜಿಪಿಗೆ ಕಳುಹಿಸಲಾಗುವುದು. ಪ್ರಗತಿಪರ ಚಿಂತಕರು ಹಾಗೂ ಹೋರಾಟಗಾರರಾದ ಗೌರಿ ಲಂಕೇಶ್ ಮತ್ತು ಪ್ರೊ.ಎಂ.ಎಂ.ಕಲಬುರ್ಗಿ ಹತ್ಯೆಯನ್ನು ನಾವು ಮರೆತಿಲ್ಲ ಎಂದು ಪರಮೇಶ್ವರ್ ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ ಇಂತಹ ಬೆದರಿಕೆಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಸಾಹಿತಿಗಳು ಮತ್ತು ಪ್ರಗತಿಪರ ಚಿಂತಕರನ್ನು ಒಮ್ಮೆ ಭೇಟಿ ಮಾಡಿದರೆ ಬೆದರಿಕೆಯ ನಿಖರ ಮಾಹಿತಿ ತಿಳಿಯಲಿದೆ ಎಂದು ತಿಳಿಸಿದ್ದಾರೆ.

ಸುಮಾರು 15ಕ್ಕೂ ಹೆಚ್ಚು ಪ್ರಗತಿಪರ ಸಾಹಿತಿಗಳು ಹಾಗೂ ಚಿಂತಕರ ಹೆಸರು ಬರೆದು ಎಲ್ಲರನ್ನೂ ಕೊಲೆ ಮಾಡುವುದಾಗಿ ಬೆದರಿಕೆ ಹಾಕಲಾಗಿದೆ. ಕೋಮುವಾದ, ಜಾತಿವಾದ, ಮೌಢ್ಯ ವಿರೋಧಿ ನಿಲುವುಳ್ಳ ಸಾಹಿತಿಗಳು ಹಾಗೂ ಬುದ್ಧಿಜೀವಿಗಳಿಗೆ ಪತ್ರದ ಮೂಲಕ ಜೀವ ಬೆದರಿಕೆ ಹಾಕಲಾಗಿದೆ. ಪ್ರೊ.ಕೆ.ಮರಳಸಿದ್ದಪ್ಪ, ಪ್ರೊ.ಎಸ್.ಜಿ.ಸಿದ್ದರಾಮಯ್ಯ, ಬಂಜಗೆರೆ ಜಯಪ್ರಕಾಶ್, ವಸುಂಧರಾ ಭೂಪತಿ, ಕುಂ.ವೀರಭದ್ರಪ್ಪ ಸೇರಿದಂತೆ 15 ಲೇಖಕರು ಹಾಗೂ ಸಾಹಿತಿಗಳಿಗೆ ಬೆದರಿಕೆ ಪತ್ರ ಬಂದಿದೆ. ಈ ಬಗ್ಗೆ ಸಚಿವ ಡಾ.ಪರಮೇಶ್ವರ್‌ರಿಗೆ ಪತ್ರ ಬರೆದಿದ್ದು, ಸಾಹಿತಿ ಲೇಖಕರ ಮೇಲಿನ ಜೀವ ಬೆದರಿಕೆ ಗಂಭಿರವಾಗಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ. ಅಲ್ಲದೇ ಈ ಬಗ್ಗೆ ಚರ್ಚೆಗೆ ಅವಕಾಶ ನೀಡಿ ಎಂದು ಬುದ್ಧಿಜೀವಿಗಳು ಮನವಿ ಮಾಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಆಕ್ಷೇಪಾರ್ಹ ಪದ ಬಳಕೆ

ನಟ ಉಪೇಂದ್ರ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ



ಮೈಸೂರು, ಆ.17(ಎಸ್‌ಬಿಡಿ)– ಆಕ್ಷೇಪಾರ್ಹ ಪದ ಬಳಕೆ ಮಾಡಿರುವ ನಟ ಉಪೇಂದ್ರ ಅವರನ್ನು ಬಂಧಿಸುವಂತೆ ಆಗ್ರಹಿಸಿ ಮೈಸೂರಿನ ಮಾನಸಗಂಗೋತ್ರಿಯಲ್ಲಿ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಕರ್ನಾಟಕ ರಾಜ್ಯ ಸಂಶೋಧಕರ ವೇದಿಕೆ, ದಲಿತ ವಿದ್ಯಾರ್ಥಿ ಒಕ್ಕೂಟ ಹಾಗೂ ಕರ್ನಾಟಕ ಶೋಷಿತ ಸಮುದಾಯಗಳ ಒಕ್ಕೂಟದ ಸಹಯೋಗದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿಯಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಮುಂಭಾಗ ಪ್ರತಿಭಟನೆ ನಡೆಸಿ, ನಟ ಉಪೇಂದ್ರ ಬಂಧನಕ್ಕೆ ಆಗ್ರಹಿಸಲಾಯಿತು.

ಕರ್ನಾಟಕ ಶೋಷಿತ ಸಮುದಾಯಗಳ ಒಕ್ಕೂಟದ ರಾಜ್ಯಾಧ್ಯಕ್ಷ ಎನ್.ರಾಜೇಂದ್ರ ಸಿಂಗ್ ಬಾಬು ಮಾತನಾಡಿ, ನಟ ಉಪೇಂದ್ರ ಆಕ್ಷೇಪಾರ್ಹ ಪದ ಬಳಸುವ ಮೂಲಕ ಶೋಷಿತ ಸಮುದಾಯಕ್ಕೆ ಅಪಮಾನ ಮಾಡಿದ್ದಾರೆ. ಇದರಿಂದ ಕೋಟ್ಯಂತರ ಜನರ ಮನಸ್ಸಿಗೆ ಘಾಸಿಯಾಗಿದೆ. ಗಾದೆ ನೆಪದಲ್ಲಿ ಜಾತಿ ನಿಂದನೆ ಮಾಡಿರುವುದೂ ಅಕ್ಷಮ್ಯ. ಸಮಾಜಕ್ಕೆ ಮಾದರಿಯಾಗಬೇಕಾದ ಅವರು ಅಜ್ಞಾನಿಯಂತೆ ನಡೆದುಕೊಂಡಿದ್ದಾರೆ. ಎಸ್ಸಿ, ಎಸ್ಟಿ ದೌರ್ಜನ್ಯ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಾಗಿದ್ದು, ನ್ಯಾಯಾಲಯ ಮಧ್ಯಂತರ ತಡೆಯಾಜ್ಞೆ ನೀಡಿದೆ. ಉಪೇಂದ್ರ ಅನುಯಾಯಿಗಳು ಸಾಮಾಜಿಕ ಜಾಲತಾಣಗಳಲ್ಲಿ ಅವರನ್ನು ಬೆಂಬಲಿಸುತ್ತಿರುವುದು ಖಂಡನಾರ್ಹ. ಕೂಡಲೇ ಉಪೇಂದ್ರ ಅವರನ್ನು ಬಂಧಿಸಬೇಕು. ಹಾಗೆಯೇ ಅವರನ್ನು ಬೆಂಬಲಿಸುವ ಮೂಲಕ ಸಮುದಾಯವನ್ನು ವಿರೋಧಿಸುತ್ತಿರುವವರ ವಿರುದ್ಧವೂ ಪ್ರಕರಣ ದಾಖಲಿಸಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ಸಂಶೋಧಕರ ವೇದಿಕೆ ರಾಜ್ಯಾಧ್ಯಕ್ಷ ರಾಜೇಶ್ ಚಾಕನಹಳ್ಳಿ ಹಾಗೂ ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಪರಂಜ್ಯೋತಿ ಮಾತನಾಡಿ, ನಟ ಉಪೇಂದ್ರ ಅವರನ್ನು ಬಂಧಿಸುವ ಮೂಲಕ ನೊಂದ ಸಮುದಾಯಕ್ಕೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದರು. ಚೇತನ್, ಕಾಂತರಾಜು, ಅಪ್ಪು ಸೇರಿದಂತೆ ಅನೇಕ ಸಂಶೋಧನಾ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಉಪೇಂದ್ರಗೆ ಮತ್ತೆ ರಿಲೀಫ್: ಹೈಕೋರ್ಟ್ ಮಧ್ಯಂತರ ತಡೆ

ಬೆಂಗಳೂರು, ಆ.17– ಚಿತ್ರನಟ ಉಪೇಂದ್ರ ವಿರುದ್ಧದ ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್‌ಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ. ವಿಚಾರಣೆಯನ್ನು ಇದೇ 24ಕ್ಕೆ ಮುಂದೂಡಲಾಗಿದೆ. ಪ್ರಾಸಿಕ್ಯೂಷನ್ ಪರವಾಗಿ ಎಸ್‌ಪಿಪಿ – 1 ಬೆಳ್ಳಿಯಪ್ಪ, ಉಪೇಂದ್ರ ಪರ ಹಿರಿಯ ವಕೀಲ ಉದಯ ಹೊಳ್ಳ ವಾದ ಮಂಡನೆ ಮಾಡಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ವಿಡಿಯೊ ನೇರ ಪ್ರಸಾರದ ವೇಳೆ ಅವಹೇಳನಕಾರಿ ಪದ ಬಳಸಿ ಜಾತಿ ನಿಂದನೆ ಮಾಡಿದ್ದಾರೆ ಎಂದು ಆರೋಪಿಸಿ ಅವರ ವಿರುದ್ಧ ಬೆಂಗಳೂರಿನ ಚೆನ್ನಮ್ಮನಕೆರೆ ಅಚ್ಚುಕಟ್ಟು ಪೊಲೀಸ್ ಠಾಣೆ ಮತ್ತು ಹಲಸೂರು ಗೇಟ್ ಪೊಲೀಸ್ ಠಾಣೆ ಎಫ್‌ಐಆರ್ ದಾಖಲಾಗಿತ್ತು.

ಪ್ರತಿಯೊಬ್ಬರಿಗೂ ಸಾಮಾಜಿಕ ಜವಾಬ್ದಾರಿ ಇದೆ; ಅದನ್ನು ನಿರ್ವಹಣೆ ಮಾಡುವುದು ನೈತಿಕ ಕರ್ತವ್ಯ

ಮೈಸೂರು ಜಿಲ್ಲಾಧಿಕಾರಿ ಡಾ.ರಾಜೇಂದ್ರ ಪ್ರತಿಪಾದನೆ

ಮೈಸೂರು, ಆ.17(ಎಸ್‌ಬಿಡಿ)– ಪ್ರತಿಯೊಬ್ಬರೂ ತಮ್ಮ ಸಾಮರ್ಥ್ಯಾನುಸಾರ ಸಾಮಾಜಿಕ ಕಾರ್ಯದಲ್ಲಿ ಸಕ್ರಿಯರಾಗಬೇಕು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಹೇಳಿದರು.

ಮೈಸೂರಿನ ಚಾಮುಂಡಿಬೆಟ್ಟ ತಪ್ಪಲಿನ ಶ್ರೀ ಸುತ್ತೂರು ಮಠದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಗುರುವಾರ ಸಂಜೆ ಆಯೋಜಿಸಿದ್ದ ಶ್ರಾವಣ ಮಾಸದ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬರಿಗೂ ಸಾಮಾಜಿಕ ಜವಾಬ್ದಾರಿ ಇದೆ. ಸಮಾಜಮುಖಿ ಕಾರ್ಯಗಳ ಮೂಲಕ ತಮ್ಮ ಹೊಣೆಗಾರಿಕೆ ನಿರ್ವಹಿಸಬೇಕು ಎಂದರು.

ಪ್ರತಿಯೊಂದು ಕೆಲಸವನ್ನೂ ಸರ್ಕಾರವೇ ಮಾಡಬೇಕೆಂಬ ಭಾವನೆಯಿಂದ ಸಾರ್ವಜನಿಕರು ಕೈಕಟ್ಟಿ ಕುಳಿತುಕೊಳ್ಳಬಾರದು. ಎಲ್ಲರೂ ತಮ್ಮ ಸಾಮರ್ಥ್ಯಾನುಸಾರ ಸಾಮಾಜಿಕ ಕಾರ್ಯ ಮಾಡಬೇಕು. ಮುಖ್ಯವಾಗಿ ನಮ್ಮ ಸುತ್ತಮುತ್ತಲ ಪರಿಸರ ಸಂರಕ್ಷಣೆ, ಸೌಹಾರ್ದತೆ, ಸಹಬಾಳ್ವೆ, ಸ್ವಚ್ಛತೆಗೆ ಸಹಕಾರಿಯಾಗಬೇಕು. ನಮ್ಮಿಂದಾಗುವ ಒಳ್ಳೆಯ ಕೆಲಸ ಮಾಡುವುದನ್ನು ರೂಢಿಸಿಕೊಳ್ಳಬೇಕು ಎಂದು ಆಶಿಸಿದರು.



ಸಮಾಜ ಕಟ್ಟುವಲ್ಲಿ ಮಠಮಾನ್ಯಗಳ ಪಾತ್ರ ಅತ್ಯಂತ ಮಹತ್ವಪೂರ್ಣದ್ದಾಗಿದೆ. ಶಿಕ್ಷಣ, ಆರೋಗ್ಯ, ಅನ್ನ ದಾಸೋಹದಂತಹ ಜನೋಪಯೋಗಿ ಕಾಯಕವನ್ನು ಮಠಗಳು ಉತ್ತಮವಾಗಿ ರೀತಿಯಲ್ಲಿ ನಡೆಸಿಕೊಂಡು ಬರುತ್ತಿವೆ. ಹಲವು ಕಾರಣಗಳಿಂದ ಹಾದಿ ತಪ್ಪುವ ಯುವ ಜನತೆ ಹಾಗೂ ಸಮಾಜವನ್ನು ಸತ್ಕಾರ್ಯಗಳ ಮುಖೇನ ಸರಿದಾರಿಗೆ ತರುವಲ್ಲಿ ಶ್ರೀಮಠಗಳು ಶ್ರಮಿಸುತ್ತಿವೆ. ಈ ನಿಟ್ಟಿನಲ್ಲಿ ಸುತ್ತೂರು ಮಠದ ಕಾಣಿಕೆ ದೊಡ್ಡದು. ಸರ್ಕಾರದ ಜವಾಬ್ದಾರಿಗಳನ್ನೂ ಪರ್ಯಾಯವಾಗಿ ನಿರ್ವಹಿಸಿಕೊಂಡು ಬರುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಉತ್ತಮ ಸಮಾಜಕ್ಕೆ ಗುರು ಪರಂಪರೆ ನೆರವಾಗಿದೆ. ಗುರು–ಗುರಿ ಇಲ್ಲದಿದ್ದರೆ ಸಮಾಜ ಹಿಂದೆ ಉಳಿದುಬಿಡುತ್ತದೆ. ನಮ್ಮ ನಾಡಿನ ಗುರು ಪರಂಪರೆ ಅತ್ಯಂತ ಶ್ರೀಮಂತವಾದುದು. ಆದ್ದರಿಂದಲೇ ಸಮಾಜ ಸುಭಿಕ್ಷವಾಗಿರಲು ಸಾಧ್ಯವಾಗಿದೆ. ಈ ಗುರು ಪರಂಪರೆಯೇ ಭವಿಷ್ಯದ ಸಮಾಜವನ್ನೂ ಕಟ್ಟಲಿದೆ ಎಂದು ಅಭಿಪ್ರಾಯಿಸಿದರು. ಚಾಮರಾಜನಗರ ತಾಲೂಕು ಮರಿಯಾಲದ ಶ್ರೀ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ, ಹೊಸ ಮಠದ ಶ್ರೀ ಚಿದಾನಂದ ಸ್ವಾಮೀಜಿ ಮತ್ತಿತರರು ಉಪಸ್ಥಿತರಿದ್ದರು. ಬಳಿಕ ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು ಅವರು ಲಕ್ಕಣ್ಣ ದಂಡೇಶ ವಿರಚಿತ ಶಿವತತ್ವ ಚಿಂತಾಮಣಿ ಕುರಿತು ಪ್ರವಚನ ನೀಡಿದರು.



ಲೋಕಸಭೆ ಅಧಿವೇಶನ ಮುಗಿಸಿಕೊಂಡು ಮೈಸೂರಿಗೆ ಆಗಮಿಸಿದ ಸಂಸದ ವಿ.ಶ್ರೀನಿವಾಸ್ ಪ್ರಸಾದರನ್ನು ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಹಿತೈಷಿಗಳು ಹಾಗೂ ಅಭಿಮಾನಿಗಳು ಅಭಿನಂದಿಸಿ, ಶುಭಾಶಯ ಕೋರಿದರು. ಚಿತ್ರದಲ್ಲಿ ಪತ್ನಿ ಶ್ರೀಮತಿ ಭಾಗ್ಯಲಕ್ಷ್ಮಿ ಶ್ರೀನಿವಾಸ ಪ್ರಸಾದ್, ಚಾಮರಾಜನಗರ ವಿವಿ ಕುಲಪತಿ ಪ್ರೊ. ಆರ್. ಗಂಗಾಧರ್, ಡಾ ಕಲ್ಯಾಣಸಿರಿ ಭಂತೇಜಿ, ಪ್ರಕಾಶಕ ಭರತ್ ರಾಮಸ್ವಾಮಿ, ಕುಂಬ್ರಹಳ್ಳಿ ಸುಬ್ಬಣ್ಣ, ಪಿ.ನಂದಕುಮಾರ್, ಪ್ರೊ. ನೀಲಗಿರಿ ತಳವಾರ್, ಸಂಸದರ ಹಿರಿಯ ಆಪ್ತ ಸಹಾಯಕ ಹೆಚ್.ಜಿ ರಮೇಶ್, ಡಾ. ಲೋಹಿತ್ ರಾಮಸ್ವಾಮಿ, ಡಿ. ವೆಂಕಟರಾಜು, ಸಿ.ಜಿ ಶಿವಕುಮಾರ್, ಗಂಗೋತ್ರಿ ಮಹೇಶ್, ಶಾಂತರಾಮ್ ಶೆಟ್ಟಿ, ಡಾ. ಮುಳ್ಳೂರು ನಂಜುಂಡಸ್ವಾಮಿ, ಮಾಂಬಳ್ಳಿ ನಂಜುಂಡಸ್ವಾಮಿ, ಜಯರಾಜ್, ಶ್ರೀನಿವಾಸ್, ದೇವಪುತ್ರ ಇತರರಿದ್ದಾರೆ.

ಸಹಬಾಳ್ವೆಯೊಂದಿಗೆ ಬದುಕು ಸಾಗಿಸಿ: ಪೇಜಾವರ ಶ್ರೀ

ಮೈಸೂರು, ಆ.17(ಸಿಎನ್)–ಅಸೂಯೆ ದ್ವೇಷವನ್ನು ಹುಟ್ಟು ಹಾಕುತ್ತದೆ. ದ್ವೇಷದಿಂದ ಮನಃಶಾಂತಿ ಜೊತೆಗೆ ಮನುಷ್ಯನು ನಾಶ ಹೊಂದುತ್ತಾನೆ. ಇದಕ್ಕೆ ಪೂರಕ ಉದಾಹರಣೆ ಮಂಥರೆಯರಂತ ಮತ್ಸರ ಬುದ್ಧಿಯಾಗಿದೆ. ಹಾಗಾಗಿ ಸಹಬಾಳ್ವೆಯೊಂದಿಗೆ ಬದುಕು ಸಾಗಿಸಬೇಕು ಎಂದು ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ತಿಳಿ ಹೇಳಿದರು.



ನಗರದ ಸರಸ್ವತಿಪುರಂನ ಕೃಷ್ಣಧಾಮದಲ್ಲಿ ಚಾತುರ್ಮಾಸ್ಯ ಸಮಿತಿಯಿಂದ ಉಡುಪಿ ಪೇಜಾವರ ಮಠದ ಪೀಠಾಧ್ಯಕ್ಷರಾದ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಅವರ 36ನೇ ಚಾತುರ್ಮಾಸ್ಯ ಸಂಕಲ್ಪವಾಗಿ ಆಯೋಜಿಸಲಾಗಿದ್ದ 'ಶ್ರೀಮದ್ರಾಮಾಯಣ' ಅಯೋಧ್ಯಾಕಾಂಡ ಪ್ರವಚನ ವೇಳೆ ಮಾತನಾಡಿದರು.

ಶ್ರೀರಾಮನ ಪಟ್ಟಾಭಿಷೇಕಕ್ಕೆ ಸಿದ್ಧತೆ ನಡೆಯುತ್ತಿದೆ. ಇಡೀ ರಾಜ್ಯವೇ ಸಂಭ್ರಮ ಪಡುತ್ತಿದ್ದರೆ, ಮಂಥರೆ ಮಾತ್ರ ಭರತನ ತಾಯಿ ಕೈಕೆಯಿ ಬಳಿ ಬಂದು ತನ್ನ ಮತ್ಸರದ ಮಾತುಗಳನ್ನು ಹೇಳುತ್ತಿದ್ದಾಳೆ. ಆದರೆ ಮಂಥರೆ ತಂದ ಸುದ್ದಿಯನ್ನು ಸಂತೋಷದಿಂದ ಸ್ವಾಗತಿಸಿದ ಕೈಕೆಯಿ, ಅವಳಿಗೆ ಉಡುಗೊರೆ ನೀಡುವ ಮೂಲಕ ಸಂತಸ ವ್ಯಕ್ತಪಡಿಸುತ್ತಾಳೆ. ಮಂಥರೆ ಹೇಳುತ್ತಾಳೆ, ಬಹಳ ಸಂತೋಷ ಒಳ್ಳೆಯದಲ್ಲ. ನಿನಗೆ ಶೋಕ ಸಾಗರ ಎದುರಾಗುತ್ತಿದೆ. ಆದರೆ ನೀನು ಬಾಲಿಶವಾಗಿ ವರ್ತಿಸುತ್ತಿದ್ದೀಯ. ನಿನ್ನ ನೋಡಿದರೆ ನಗು–ಅಳು–ಕೋಪ ಎಲ್ಲವೂ ಬರುತ್ತಿದೆ. ನಿನ್ನ ಬುದ್ಧಿಗೆ ಮಂಕು ಕವಿದಿದೆ ಎಂದು ತನ್ನ ವಿಷವಾಚನ ನೀಡುತ್ತಿದ್ದಾಳೆ ಎಂದರು.

ಮಂಥರೆ ಮಾತಿಗೆ ಉತ್ತರಿಸಿದ ಕೈಕೆಯಿ, ಶ್ರೀರಾಮನಿಗೆ ರಾಜ್ಯ ಸಿಕ್ಕರೆ ನನಗೇಕೆ ಬೇಸರವಾಗಬೇಕು? ಆತನು ನನ್ನ ಮಗನೇ ಅಲ್ಲವೆ. ಬಹಳ ಸಂತೋಷವಾಗಿದೆ ಎಂದಾಗ ಕೈಕೆಯಿ, ನಿನ್ನ ಮಗ ಭರತನಿಗೆ ರಾಮ ಪ್ರಬಲ ಸ್ಪರ್ಧಿ, ಲಕ್ಷ್ಮಣನಿಗೆ ರಾಮನಿಂದ ಭಯವಿಲ್ಲ. ಆದರೆ ಭರತನಿಗೆ ಕಂಟಕ ತಪ್ಪಿದ್ದಲ್ಲ. ನಿನ್ನ ಸವತಿ ಕೌಸಲ್ಯೆ ರಾಜಮಾತೆ ಆಗುತ್ತಿದ್ದಾಳೆ. ನೀನು ಅವಳ ಮುಂದೆ ದಾಸಿಯಾಗುವ ಪ್ರಮೇಯ ಬರುತ್ತದೆ. ಅಲ್ಲದೇ ನಿನ್ನ ಮಗನಿಗೂ ಈ ಸ್ಥಿತಿ ಎದುರಾಗುತ್ತೆ. ಹಾಗಾಗಿ ನಿನಗೆ ಬಂದಿರುವ ಸ್ಥಿತಿ ಉಪಯೋಗಕರವಾಗಿಲ್ಲ, ಅನಾನುಕೂಲವಾಗಿದೆ.

ಆಗ ಕೈಕೆಯಿ ಹೇಳುತ್ತಾಳೆ, ಶ್ರೀರಾಮ ಧರ್ಮಜ್ಞಾನ, ಮಹಾನ್‌ಜ್ಞಾನಿ, ವಿದ್ವಾನ್ ಅದೆಲ್ಲಕ್ಕಿಂತ ಮಿಗಿಲಾಗಿ ದಶರಥರ ಹಿರಿಯ ಪುತ್ರ ಹಾಗಾಗಿ ಅವನಿಗೆ ಪಟ್ಟಾಭಿಷೇಕ ಆಗಬೇಕು. ಇಂದು ರಾಮ, ನಾಳೆ ಭರತ ಇದು ನಡೆಯಬೇಕಾದ ಕ್ರಮ ನೀನೇಕೆ ಹುರಿದು ಬೀಳುತ್ತಿದ್ದೀಯ. ರಾಮನಿಗೆ ರಾಜ್ಯ ಸಿಕ್ಕರೆ ಭರತನಿಗೂ ಸಿಕ್ಕ ಹಾಗೆ. ತನ್ನನ್ನು ಹೇಗೆ ಕಾಣುತ್ತಾನೋ ತನ್ನ ಸಹೋದರನನ್ನು ಹಾಗೇ ಕಾಣುತ್ತೇನೆ ಅದರಲ್ಲಿ ಸಂಶಯ ಬೇಡ ಎನ್ನುತ್ತಾಳೆ.

ಮಂಥರೆಯ ಪ್ರಬಲ ಬಾಣ: ಮತ್ತಷ್ಟು ಕೋಪಗೊಂಡ ಮಂಥರೆ, ಕೌಸಲ್ಯೆಯನ್ನು ನೀನು ಎಷ್ಟು ಬಾರಿ ಅವಮಾನಿಸಿಲ್ಲ. ನಿನ್ನ ಗಂಡ ದಶರಥನ ವಿಚಾರವಾಗಿ ಎಷ್ಟು ಜಗಳ ಮಾಡಿದ್ದೀಯಾ? ಈ ವಿಚಾರಗಳನ್ನು ಕೌಸಲ್ಯಾ ಮನಸಿನಲ್ಲಿಟ್ಟುಕೊಂಡು ನಿನಗೆ ತಕ್ಕ ಉತ್ತರ ನೀಡುತ್ತಾಳೆ. ಅವಳು ದಾಸಿಯಾಗುವ ಕಾಲ ಸನ್ನಿಹಿತ ಎಂದಾಗ ಕೈಕೆಯಿ ಮನಸ್ಸಿಗೆ ಗಾಢವಾಗಿ ನಾಟಿತು. ಹೀಗೆ ದ್ವೇಷ, ಅಸೂಯೆ ಕುರಿತು ಪ್ರವಚನದಲ್ಲಿ ಶ್ರೀಗಳು ವಿವರಿಸಿದರು.

ಪ್ರವಚನ ಬಳಿಕ ಅಕ್ಷತಾ ರುದ್ರಪಟ್ಟಣ ಅವರ ತಂಡದಿಂದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನೆರವೇರಿತು.

ವಿಜ್ಞಾನಕ್ಕೂ ಮೀರಿದ್ದು ಆಧ್ಯಾತ್ಮಿಕ ಜ್ಞಾನ

ಮೈಸೂರು, ಆ.17(ಸಿಎನ್)– ನಾವು ಲೌಕಿಕ ಜಗತ್ತಿನಲ್ಲಿ ಬದುಕುತ್ತಿದ್ದೇವೆ. ಎಲ್ಲವನ್ನು ಪರಿಪ್ರಮಾಣದ ವೈಜ್ಞಾನಿಕವಾಗಿ, ಸಾಕ್ಷಿ ಸಮೇತ ನೋಡಲು ಬಯಸುತ್ತೇವೆ. ಆದರೆ ವಿಜ್ಞಾನಕ್ಕೂ ಮೀರಿದ ಜ್ಞಾನವಿದೆ ಅದುವೇ ಆಧ್ಯಾತ್ಮಿಕ ಜ್ಞಾನ ಎಂದು ಸಾಹಿತಿ ಪ್ರೊ.ಕೃಷ್ಣೇಗೌಡ ಅಭಿಪ್ರಾಯಪಟ್ಟರು.

ವಿಜಯನಗರ 4ನೇ ಹಂತದಲ್ಲಿರುವ ಸಂಕಲ್ಪ ಟ್ರೀ ಸಭಾಭವನದಲ್ಲಿ ಶರಣ ಸಾಹಿತ್ಯ ಪರಿಷತ್ ನಗರ ಘಟಕದಿಂದ ಆಯೋಜಿಸಲಾಗಿದ್ದ 'ಮನೆಮನೆಗೆ ಶ್ರಾವಣ ಮಾಸದ ಶರಣ ಸಂದೇಶ ಹಾಗೂ ಕೃತಿ ಲೋಕಾರ್ಪಣೆ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಹಲವು ದಶಕಗಳ ಹಿಂದೆ ವಿಜ್ಞಾನದ ದೃಷ್ಟಿಕೋನ ಬಲಿಷ್ಠವಿರಲಿಲ್ಲ. ಆಗಿನ ಕಾಲದಲ್ಲೇ ಆಧ್ಯಾತ್ಮಿಕ ಜ್ಞಾನದ ಮೂಲಕ ಅನೇಕ ವೈಜ್ಞಾನಿಕ ವಿಚಾರಗಳನ್ನು ಕಾಲಜ್ಞಾನಿಗಳು, ಸಂತರು, ಋಷಿಗಳು ತಿಳಿಸಿದ್ದಾರೆ ಎಂದರು.

ಈ ವೈಜ್ಞಾನಿಕ ಪದ ಬಳಕೆ ಯಾಕೆ ಮಾಡುತ್ತಾರೆ ಎಂದು ತಿಳಿಯುವುದಿಲ್ಲ. ರೈತರಿಗೆ ವೈಜ್ಞಾನಿಕ ಬೆಂಬಲ ಬೆಲೆ ನೀಡಿ ಎಂದು ಯಾಕೆ ಹೇಳುತ್ತಾರೆ ಗೊತ್ತಿಲ್ಲ. ರೈತರಿಗೆ ನಷ್ಟವಾಗಿದೆ ಎಂದು ಹೇಳಿದರೆ ಸಾಕು. ಈ ವೈಜ್ಞಾನಿಕ ಪದ ಯಾಕೆ ಬಳಸಲಾಗುತ್ತದೆ ಎಂದು ತಿಳಿಯುತ್ತಿಲ್ಲ. ವಿಜ್ಞಾನ ಎಂಬುದು ಒಂದು ರೋಗದ ರೀತಿ ಆಗಿದೆ. ಎಲ್ಲದಕ್ಕೂ ವೈಜ್ಞಾನಿಕ ಎನ್ನಬಾರದು ಎಂದರು.

ವ್ಯಕ್ತಿಯಿಂದ ದೊಡ್ಡವರೆಂದು ಗುರುತಿಸಲಾಗಲ್ಲ. ಅವರು ಮಾಡಿದ ಸಾಧನೆಯಿಂದ ಗುರುತಿಸಲ್ಪಡುತ್ತಾರೆ. ಅಬ್ದುಲ್ ಕಲಾಂ ಹಾಗೂ ಸಾಲುಮರದ ತಿಮ್ಮಕ್ಕ ಇಬ್ಬರಲ್ಲಿ ದೊಡ್ಡವರಾರು ಎಂದರೆ ಹೇಳಲು ಸಾಧ್ಯವೇ? ಹಾಗೆಯೇ ಎಲ್ಲದರಲ್ಲೂ ವೈಜ್ಞಾನಿಕ ಪದ ಬಳಸಲು ಸಾಧ್ಯವಿಲ್ಲ. ಸಾಲುಮರದ ತಿಮ್ಮಕ್ಕನ ಹೆಸರಲ್ಲಿ ಅಮೆರಿಕದಲ್ಲಿ ಒಂದು ಸಂಸ್ಥೆಯೇ ಇದೆ. ಆದರೆ ತಿಮ್ಮಕ್ಕನಿಗೆ ಅದು ಗೊತ್ತಾ? ಎಂದರು.

ರಾಮಾಯಣ ಬರೆದ ವಾಲ್ಮೀಕಿ ಮಹರ್ಷಿಗಳ ಜ್ಞಾನ ಎಷ್ಟರ ಮಟ್ಟಿಗೆ ಇತ್ತು ಎಂದರೆ ಅವರು ಅಣು ಅಣುವನ್ನು ಸಹ ಉಲ್ಲೇಖ ಮಾಡಿದ್ದಾರೆ. ಆಗಿನ ಕಾಲದಲ್ಲೇ ಅಂತಹ ಗ್ರಂಥವನ್ನು ಬರೆದಿದ್ದಾರೆ ಅವರ ಜ್ಞಾನಕ್ಕೆ ವೈಜ್ಞಾನಿಕ ಪ್ರಶ್ನೆ ಕೇಳಲು ಸಾಧ್ಯವೇ ಎಂದರು.

ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಮ.ಗು.ಸದಾನಂದಯ್ಯ ಮಾತನಾಡಿ, ಇಂದಿನಿಂದ ಮುಂದಿನ ತಿಂಗಳು 15ನೇ ತಾರೀಕಿನವರೆಗೆ ಮನೆಮನೆಗೆ ಶರಣ ಸಂದೇಶ ತಲುಪಿಸುವ ಕೆಲಸ ಮಾಡುತ್ತಿದ್ದೇವೆ. 31 ಉಪನ್ಯಾಸಗಳುಳ್ಳ ವಚನಗಳ ಆಧಾರಿತ ಸಂದೇಶಗಳನ್ನು, ನಗರದ ಬಡಾವಣೆಗಳಲ್ಲಿ ಹಂಚುವ ಉದ್ದೇಶದಿಂದ, 2500 ಪ್ಯಾಕೆಟ್ ಪ್ರತಿಗಳನ್ನು ಮಾಡಲಾಗಿದೆ. ಎಲ್ಲಾ ಜಾತಿ, ಧರ್ಮದ ಸಾರವನ್ನು ತೆಗೆದುಕೊಂಡು, ಅಳವಡಿಸಿ, ವಚನ ಸಾಹಿತ್ಯ ರಚಿಸಿದ್ದೇವೆ. ಶರಣ ಸಂದೇಶ ಜನರಿಗೆ ತಲುಪಿಸಬೇಕು ಎಂಬುದು ನಮ್ಮ ಮೂಲ ಉದ್ದೇಶ ಎರಂದರು.

ಈ ಸಂದರ್ಭ ಶರಣ ಸಾಹಿತ್ಯ ಪರಿಷತ್ ಸದಸ್ಯರು ಸೇರಿದಂತೆ ಮತ್ತಿತರರಿದ್ದರು.

ಯುವ ಜನತೆ ಜ್ಞಾನ ಸಂಪತ್ತು ಗಳಿಸಬೇಕು: ಡಾ.ಪವಿತ್ರ

ಮೈಸೂರು, ಆ.17(ಎಸ್‌ಬಿಡಿ)– ಯುವ ಜನತೆ ಜ್ಞಾನ ಸಂಪತ್ತು ಸಂಪಾದನೆಯಲ್ಲಿ ನಿರತರಾಗಬೇಕು ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಡಾ.ಆರ್.ಹೆಚ್.ಪವಿತ್ರ ಕಿವಿಮಾತು ಹೇಳಿದರು.

ಮೈಸೂರಿನ ವಿದ್ಯಾರಣ್ಯಪುರಂನ ವಿದ್ಯಾರಣ್ಯ ಟ್ರಸ್ಟ್ ಆಯೋಜಿಸಿದ್ದ ರಾಷ್ಟ್ರೀಯ ಗ್ರಂಥಪಾಲಕ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜೀವನವಿಡೀ ಸಂಪಾದಿಸಿದ ಹಣ, ಆಸ್ತಿ, ಐಶ್ವರ್ಯವನ್ನು ಕಳೆದುಕೊಳ್ಳಬಹುದು. ಆದರೆ ಜ್ಞಾನವನ್ನು ಯಾರೂ ಕಸಿದುಕೊಳ್ಳಲು ಸಾಧ್ಯವಿಲ್ಲ. ಅದು ಜೀವನದುದ್ದಕ್ಕೂ ಆಸರೆಯಾಗಿರುತ್ತದೆ ಎಂದರು. ಒಂದು ಉತ್ತಮ ಪುಸ್ತಕ ನೂರು ಸ್ನೇಹಿತರಿಗೆ ಸಮಾನ. ಗ್ರಂಥಾಲಯವು ಜ್ಞಾನ ಭಂಡಾರದ ಗಣಿ ಇದ್ದಂತೆ. ಜ್ಞಾನದ ಹಸಿವು ನೀಗಿಸುವ ದಾಸೋಹ ಕೇಂದ್ರ. ಗ್ರಂಥಾಲಯಗಳು ವಿದ್ಯಾರ್ಥಿಗಳ ಭವಿಷ್ಯಕ್ಕೆ ಬೆಳಕಾಗಿವೆ. ಸರ್ಕಾರಗಳು ಗ್ರಂಥಾಲಯಕ್ಕೆ ಯಥೇಚ್ಛ ಪುಸ್ತಕಗಳನ್ನು ಒದಗಿಸುತ್ತಿದ್ದು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಓದುವ ಹವ್ಯಾಸ ರೂಢಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.



ಕಾರ್ಯಕ್ರಮದಲ್ಲಿ ಭಾರತ ಗ್ರಂಥಾಲಯ ವಿಜ್ಞಾನದ ಪಿತಾಮಹರೆನಿಸಿರುವ ಡಾ.ಎಸ್.ಆರ್.ರಂಗನಾಥನ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಅವರ ಜೀವನ ಮತ್ತು ಸಾಧನೆಯನ್ನು ಸ್ಮರಿಸಲಾಯಿತು. ನಗರಪಾಲಿಕೆ ಸದಸ್ಯ ಮಾ.ವಿ.ರಾಂಪ್ರಸಾದ್, ವಿದ್ಯಾರಣ್ಯ ಟ್ರಸ್ಟ್ ಅಧ್ಯಕ್ಷ ಡಾ.ಜಿ.ವಿ. ರವಿಶಂಕರ್, ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷ ಚಂದ್ರಶೇಖರ್, ವಿಕ್ರಮ ಅಯ್ಯಂಗಾರ್, ಸುಚೇಂದ್ರ, ಚಕ್ರಪಾಣಿ, ವಿದ್ಯಾ, ನಾಗಶ್ರೀ ಮತ್ತಿತರರು ಉಪಸ್ಥಿತರಿದ್ದರು.

ಅಕ್ರಮ ಆರೋಪ ; ಗೃಹ ನಿರ್ಮಾಣ ಸಹಕಾರ ಸಂಘದ ವಿರುದ್ಧ ನಾಳೆ ಪ್ರತಿಭಟನೆ



ಮೈಸೂರು,ಆ.17(ಪಿಎಂ)– ಜೆಎಸ್‌ಎಸ್ ಮಹಾವಿದ್ಯಾಪೀಠದ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ವಿವಿಧ ಸಾಲಿನ ಆಡಳಿತ ಮಂಡಳಿಗಳಿಂದ ಅಕ್ರಮ ನಡೆದಿದೆ ಎಂದು ಆರೋಪಿಸಿದ ಸಂಘದ ಸದಸ್ಯ ಸಿ.ಎಸ್.ಶಿವಸ್ವಾಮಿ, ಇದರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಸಂಘದ ಸದಸ್ಯರು ಮತ್ತು ಸಹಸದಸ್ಯರು ಆ.19ರಂದು ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದೇವೆ ಎಂದು ಹೇಳಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 11ರಿಂದ ಸಂಜೆ 5ರವರೆಗೆ ಮೈಸೂರಿನ ರಾಜ್‌ಕುಮಾರ್ ರಸ್ತೆಯಲ್ಲಿರುವ ಸಂಘದ ಕಚೇರಿ ಎದುರು ಪ್ರತಿಭಟನೆ ನಡೆಸಲಿದ್ದೇವೆ. ನಮ್ಮ ಪ್ರತಿಭಟನೆಯು ಸಂಘದಲ್ಲಿ ಅಕ್ರಮ ನಡೆಸಿದ ಆಡಳಿತ ಮಂಡಳಿಯ ನಿರ್ದೇಶಕರ ವಿರುದ್ಧವೇ ಹೊರತು, ಜೆಎಸ್‌ಎಸ್ ಸಂಸ್ಥೆ ಅಥವಾ ಜೆಎಸ್‌ಎಸ್ ಆಡಳಿತ ಮಂಡಳಿಯ ವಿರುದ್ಧವಲ್ಲ ಎಂದು ಸ್ಪಷ್ಟಪಡಿಸಿದರು.

2010–15ನೇ ಸಾಲಿನಿಂದ 2020–25ನೇ ಸಾಲಿನ ಅವಧಿಯ ಆಡಳಿತ ಮಂಡಳಿಗಳು ಅನೇಕ ರೀತಿಯ ಅಕ್ರಮಗಳ ಮೂಲಕ ಸಂಘ ಮತ್ತು ಸಂಘದ ಸದಸ್ಯರಿಗೆ ಅಪಾರ ಆರ್ಥಿಕ ನಷ್ಟ ಉಂಟು ಮಾಡಿವೆ. ಠೇವಣಿ ಪಡೆದುಕೊಂಡ ಬಳಿಕ ಕನಿಷ್ಠ 2ರಿಂದ 3 ವರ್ಷಗಳ ಒಳಗಾಗಿ ಬಡಾವಣೆ ಅಭಿವೃದ್ಧಿಗೊಳಿಸಿ, ನಿವೇಶನ ಹಂಚಿಕೆ ಮಾಡಬೇಕೆಂಬ ನಿಯಮವಿದೆ. ಆದರೆ 15ರಿಂದ 20 ವರ್ಷಗಳಾದರೂ ನಿವೇಶನ ಕೊಟ್ಟಿಲ್ಲ. ಸುಮಾರು 3 ಸಾವಿರ ಸದಸ್ಯರಿಗೆ ನಿವೇಶನ ದೊರೆತಿಲ್ಲ. ಈ ಅನ್ಯಾಯದ ವಿರುದ್ಧ ಪ್ರತಿಭಟನೆ ಹಮ್ಮಿಕೊಂಡಿದ್ದೇವೆ ಎಂದು ಹೇಳಿದರು. ಸಂಘದ ಸದಸ್ಯರಾದ ಪ್ರೊ.ಕೆ.ಎಂ.ವೀರಯ್ಯ, ಮಹದೇವ್ ಮತ್ತಿತರರ ಸದಸ್ಯರು ಗೋಷ್ಠಿಯಲ್ಲಿದ್ದರು.

ಸೆಪ್ಟೆಂಬರ್ ಮೊದಲ ವಾರದಲ್ಲಿ ಮಹಿಷಾನ ಕುರಿತು ವಿಚಾರ ಸಂಕಿರಣ

ಮೈಸೂರು,ಆ.17(ಪಿಎಂ)– ಮಹಿಷಾ ದಸರಾ ಆಚರಣಾ ಸಮಿತಿ ವತಿಯಿಂದ ಸೆಪ್ಟೆಂಬರ್ ಮೊದಲ ವಾರದಲ್ಲಿ ಮಹಿಷಾ ಕುರಿತು ರಾಜ್ಯಮಟ್ಟದ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಸಮಿತಿಯ ಸದಸ್ಯರೂ ಆದ ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೊನ್ನೆ ಸಭೆಯಲ್ಲಿ ರಾಜ್ಯಮಟ್ಟದ ವಿಚಾರ ಸಂಕಿರಣ ಆಯೋಜಿಸಲು ತೀರ್ಮಾನಿಸಿದ್ದೇವೆ. ಅ.13ರಂದು ಮಹಿಷಾ ದಸರಾ ಆಚರಣೆ ಮಾಡಲಿದ್ದು, ಅದಕ್ಕೂ ಪೂರ್ವದಲ್ಲಿ ವಿಚಾರ ಸಂಕಿರಣ ನಡೆಯಲಿದೆ. ಮಹಿಷಾ ಮತ್ತು ಮೈಸೂರಿನ ಇತಿಹಾಸ ಕುರಿತು ಮುಖ್ಯವಾಗಿ ಪ್ರೊ.ಮಹೇಶ್‌ಚಂದ್ರಗುರು, ಪ್ರೊ.ಕೆ. ಎಸ್. ಭಗವಾನ್, ತಲಕಾಡಿನ ಚಿಕ್ಕರಂಗೇಗೌಡ ಮೊದಲಾದವರು ವಿಚಾರ ಮಂಡಿಸಲಿದ್ದಾರೆ. ವಿಚಾರ ಸಂಕಿರಣದ ದಿನಾಂಕ ಮತ್ತು ಸ್ಥಳ ಇನ್ನೂ ನಿಗದಿಯಾಗಿಲ್ಲ ಎಂದು ತಿಳಿಸಿದರು.

ಸ್ನೇಹಮಯಿ ಕೃಷ್ಣ ಎಂಬುವವರು ಸರ್ಕಾರಕ್ಕೆ ಪತ್ರ ಬರೆದು, ಮೈಸೂರು ದಸರಾ ವಿರುದ್ಧ ಇತ್ತೀಚಿನ ವರ್ಷಗಳಲ್ಲಿ ಇತಿಹಾಸ ಇಲ್ಲದ ವ್ಯಕ್ತಿಯನ್ನು ಆರಾಧಿಸುವ ಮಹಿಷಾ ದಸರಾ ಆಚರಣೆಯಾಗುತ್ತಿದೆ ಎಂದು ದೂರು ಕೊಟ್ಟಿರುವ ಮಾಹಿತಿ ಸಿಕ್ಕಿದೆ. ಇಂತಹ ಅಜ್ಞಾನದ ಮಾತುಗಳನ್ನು ಆಡುವ ಮೂಲಕ ಅವರು ತಮ್ಮ ಸ್ಥಾನಕ್ಕೆ ಚ್ಯುತಿ ಬರುವ ರೀತಿ ನಡೆದುಕೊಳ್ಳಬಾರದು ಎಂದು ಕುಟುಕಿದರು.

ಮೊನ್ನೆ ಸಂಸದ ಪ್ರತಾಪ್ ಸಿಂಹ ಅವರು ಮಹಿಷಾ ದಸರಾ ಮುಗಿದ ಅಧ್ಯಾಯ ಎಂಬ



ಹೇಳಿಕೆ ನೀಡಿದ್ದಾರೆ. ಆದರೆ 2024ರ ಚುನಾವಣೆಯಲ್ಲಿ ಅವರ ರಾಜಕೀಯ ಮುಗಿದ ಅಧ್ಯಾಯವಾಗಲಿದೆ ಎಂದು ಲೇವಡಿ ಮಾಡಿದರು.

ಮಹಿಷಾ ದಸರಾ ಆಚರಣೆಯು ಮೈಸೂರು ದಸರಾದ ವಿರುದ್ಧವಲ್ಲ. ಚಾಮುಂಡೇಶ್ವರಿಯ ವಿರುದ್ಧವೂ ಅಲ್ಲ. ನಮ್ಮ ಆಚರಣೆ ನಾವು ಮಾಡಿಕೊಳ್ಳುತ್ತೇವೆ ಅಷ್ಟೆ. ಮಹಿಷಾನ ವಿರುದ್ಧ ಮಾತನಾಡುವವರೂ ವಿಚಾರ ಸಂಕಿರಣಕ್ಕೆ ಬರಬಹುದು. ಸಂವಾದಕ್ಕೂ ವೇದಿಕೆ ಕಲ್ಪಿಸಲಾಗುವುದು. ಏನೇ ಮಾತನಾಡಿದರೂ ಆಕ್ರೋಶ ವ್ಯಕ್ತಪಡಿಸುವುದಿಲ್ಲ. ಅವರದೇ ಸತ್ಯ ಎಂದು ಸಾಬೀತುಪಡಿಸಿದರೆ ಒಪ್ಪಿಕೊಳ್ಳಲು ಸಿದ್ಧವಿದ್ದೇವೆ. ಅಷ್ಟೇ ಅಲ್ಲದೆ, ಮಹಿಷಾ ದಸರಾ ಆಚರಣೆಯನ್ನೇ ಕೈಬಿಡಲೂ ಸಿದ್ಧವಿದ್ದೇವೆ ಎಂದು ಹೇಳಿದರು.

ಪ್ರಗತಿಪರ ಚಿಂತಕ ಪ್ರೊ.ಮಹೇಶ್ ಚಂದ್ರ ಗುರು ಮಾತನಾಡಿ, ಜಯಚಾಮರಾಜ ಒಡೆಯರ್ ಅವರು ತಮ್ಮ ಎಲ್ಲಾ ಪತ್ರ ವ್ಯವಹಾರಗಳಲ್ಲಿ ಮಹಿಷೂರು ಎಂದು ಸಂಬೋಧಿಸಿದ್ದಾರೆ. ವಿವಿಧ ಕಾಲಘಟ್ಟಗಳಲ್ಲಿ ಚರಿತ್ರೆ ಮತ್ತು ಪುರಾಣಕ್ಕೂ ಸಂಘರ್ಷ ನಡೆದಿದೆ. ಚರಿತ್ರೆ ಸತ್ಯವಾದರೆ ಪುರಾಣ ಮಿಥ್ಯೆ. ಹಾಗಾಗಿ ಪುರಾಣಗಳಿಗೆ ಇದುವರೆಗೆ ಜಯ ಸಿಕ್ಕಿಲ್ಲ. ಇತಿಹಾಸಕ್ಕೆ ಅಂತಿಮ ಗೆಲುವು ದೊರೆತಿದೆ ಎಂದರು.

ಕರ್ನಾಟಕದಲ್ಲಿ ನಾವೇ ಗೆಲ್ಲುತ್ತೇವೆ ಎಂದು ರೋಡ್ ಶೋ, ಟಾಕ್ ಶೋ ಮಾಡಿದರು. ಕೊನೆಗೆ ಮತದಾರರು ಅವರನ್ನು ಫ್ಲಾಪ್ ಶೋ ಮಾಡಿದರು. ಬಹುತ್ವದ ಭಾರತ ನಮ್ಮದು. ಏಕತ್ವ ಭಾರತ ಪ್ರತಿಪಾದಿಸುವವರು ಮಹಿಷಾ ದಸರಾ ವಿರೋಧಿಸುತ್ತಿದ್ದಾರೆ. ಅಂದರೆ ಹಿಂದುತ್ವವಾದಿಗಳು ಮಹಿಷಾ ದಸರಾ ವಿರೋಧಿಸುತ್ತಿದ್ದಾರೆ. ಸಂಘ ಪರಿವಾರದವರು ಸೃಷ್ಟಿ ಮಾಡುವ ಸುಳ್ಳುಗಳನ್ನು ನಾವು ಒಪ್ಪಿಕೊಳ್ಳುವವರಲ್ಲ ಎಂದು ಕಿಡಿಕಾರಿದರು.

ಪ್ರಾಧಿಕಾರ ರಚನೆ ಆಗಬೇಕು: ಮಹಿಷಾ ಪ್ರಾಧಿಕಾರ ರಚಿಸುವಂತೆ ಸರ್ಕಾರಕ್ಕೆ ಒತ್ತಾಯಿಸಲು ಮೊನ್ನೆ ನಡೆದ ಸಮಾನಮನಸ್ಕರ ಸಭೆಯಲ್ಲಿ ನಿರ್ಣಯಿಸಿದ್ದೇವೆ. ಮಹಿಷಾನ ಚರಿತ್ರೆ ದಾಖಲಿಗೆ ಪ್ರಾಧಿಕಾರ ಸಹಕಾರಿ. ಅಲ್ಲದೆ, ಮೈಸೂರು ವಿವಿ ಸೇರಿದಂತೆ ವಿವಿಧ ವಿವಿಗಳಲ್ಲಿ ಮಹಿಷಾ ಅಧ್ಯಯನ ಪೀಠಗಳನ್ನು ಸ್ಥಾಪಿಸಲು ಸರ್ಕಾರಕ್ಕೆ ಒತ್ತಾಯಿಸಲೂ ನಿರ್ಧರಿಸಿದ್ದೇವೆ. ನಾವು ಯಾವುದೇ ಧರ್ಮ, ದೇವರು, ಜನಾಂಗದ ವಿರುದ್ಧವಿಲ್ಲ ಎಂದು ಪ್ರೊಮಹೇಶ್ ಚಂದ್ರಗುರು ಸ್ಪಷ್ಟಪಡಿಸಿದರು.

ಪ್ರತಾಪ್ ಸಿಂಹ ನನ್ನ ಪ್ರೀತಿ ವಿದ್ಯಾರ್ಥಿ: ಪ್ರತಾಪ್ ಸಿಂಹ ನನ್ನ ಪ್ರೀತಿಯ ವಿದ್ಯಾರ್ಥಿ. ನಮ್ಮಿಬ್ಬರ ನಡುವೆ ವೈಯಕ್ತಿಕ ನೆಲಗಟ್ಟಿನಲ್ಲಿ ವಿರೋಧವಿಲ್ಲ. ಸಿದ್ದರಾಮಯ್ಯನವರ ತಪ್ಪಿನ ಫಲವಾಗಿ ಪ್ರತಾಪ್ ಸಿಂಹ ಗೆದ್ದಿದ್ದಾರೆ. ಸ್ವಜಾತಿ ಪ್ರೇಮದಿಂದ ವಿಶ್ವನಾಥ್ ಮತ್ತು ವಿಜಯಶಂಕರ್ ಅವರಿಗೆ ಟಿಕೆಟ್ ಕೊಡದೇ ವೀರಶೈವರು ಅಥವಾ ಒಕ್ಕಲಿಗರಿಗೆ ಕೊಟ್ಟಿದ್ದರೆ ಪ್ರತಾಪ್ ಸಿಂಹ ಗೆಲುವು ಸಾಧಿಸುತ್ತಿರಲಿಲ್ಲ. ನಮ್ಮವ ಗೆಲ್ಲಲಿ, ಕುರುಬರು ಮಾತ್ರ ಎಂಪಿ ಆಗುವುದು ಬೇಡವೆಂಬ ಧೋರಣೆಯಲ್ಲಿ ಪ್ರತಾಪ್ ಸಿಂಹಗೆ ಗೆಲುವು ಸಿಕ್ಕಿತು ಎಂದರು.

ನಟ ಚೇತನ್ ಅವರ ವಿಚಾರದಲ್ಲಿ ಶೀಘ್ರವಾಗಿ ಬಂಧನವಾಗಿತ್ತು. ಆದರೆ ನಟ ಉಪೇಂದ್ರ ಅವರು ಪರಿಶಿಷ್ಟ ಸಮುದಾಯ ಕುರಿತು ನೀಡಿದ ಆಕ್ಷೇಪಾರ್ಹ ಹೇಳಿಕೆ ಪ್ರಕರಣದಲ್ಲಿ ವಿಳಂಬ ಮಾಡಲಾಗುತ್ತಿದೆಯೇ? ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮಹೇಶ್‌ಚಂದ್ರ ಗುರು, ನಿಂದನಾತ್ಮಕ ಪದ ಏಕೆ ಬಳಸಬೇಕಿತ್ತು. ಈ ವಿಚಾರದಲ್ಲಿ ಸರ್ಕಾರ ಮೇಲ್ವರ್ಗದವರನ್ನು ರಕ್ಷಣೆ ಮಾಡುತ್ತಿದೆ ಎಂದು ದೂರಿದರು.

ಯಾವುದೇ ಸರ್ಕಾರ ಬಂದರೂ ಆಳುವವರು ಮೇಲ್ವರ್ಗದವರೇ. ದಲಿತರೇ ಗೃಹಮಂತ್ರಿ ಆಗಿಲ್ಲವೇ. ಡಾ.ಜಿ.ಪರಮೇಶ್ವರ್ ಅವರಿಗೆ ದಲಿತರ ಬಗ್ಗೆ ಕಾಳಜಿ ಎಳ್ಳಷ್ಟು ಇಲ್ಲ. ಮುಂದಿನ ಪೀಳಿಗೆಯ ಅಭ್ಯುದಯ ಬಗ್ಗೆ ಇವರಿಗೆ ಕಾಳಜಿ ಇಲ್ಲ ಎಂದು ವಿವಿಧ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿ ಕಿಡಿಕಾರಿದರು. ಪುರುಷೋತ್ತಮ್ ಮಾತನಾಡಿ, ಉಪೇಂದ್ರರಿಗೆ ಚಿತ್ರರಂಗದಲ್ಲಿ ಹೆಸರು ಕಡಿಮೆಯಾಗುತ್ತಿದೆ. ಹಾಗಾಗಿ ಅವರಿಗೆ ಪ್ರಚಾರ ಬೇಕಿತ್ತು. ಅವರ ಬಂಧನವಾಗುವವರೆಗೂ ನಮಗೆ ನಿದ್ದೆ ಬರುವುದಿಲ್ಲ ಎಂದರು. ಪ್ರಗತಿಪರ ಚಿಂತಕ ಪ್ರೊ.ಕೆ.ಎಸ್.ಭಗವಾನ್, ಲೇಖಕ ಸಿದ್ದಸ್ವಾಮಿ, ಮುಖಂಡ ಚಿಕ್ಕಅನ್ನದಾನಿ ಗೋಷ್ಠಿಯಲ್ಲಿದ್ದರು.

ಗಿರವಿ ಅಂಗಡಿ ಕಿಟಕಿ ಸರಳು ಮುರಿದು

ಲಕ್ಷಾಂತರ ರೂ. ಮೌಲ್ಯದ ಬೆಳ್ಳಿ, ಚಿನ್ನಾಭರಣ ಕಳವು



ಕೆ.ಆರ್.ಪೇಟೆ, ಆ.17– ಗಿರವಿ ಅಂಗಡಿ ಕಿಟಕಿ ಸರಳುಗಳನ್ನು, ಗ್ಯಾಸ್ ಕಟ್ಟರ್‌ನಿಂದ ಮುರಿದು ಒಳನುಗ್ಗಿರುವ ದುಷ್ಕರ್ಮಿಗಳು 10 ಕೆಜಿ ಬೆಳ್ಳಿ ಸಾಮಾಗ್ರಿ, ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ಹಾಗೂ ನಗದು ದೋಚಿ ಪರಾರಿಯಾಗಿರುವ ಘಟನೆ ಪಟ್ಟಣದ ಶ್ರೀಲೀಲಾ ಜ್ಯುವೆಲರ್ಸ್ ಮತ್ತು ಬ್ಯಾಂಕರ್ಸ್‌ನಲ್ಲಿ ಬುಧವಾರ ಮಧ್ಯರಾತ್ರಿ ನಡೆದಿದೆ.

ಶ್ರೀಲೀಲಾ ಬ್ಯಾಂಕರ್ಸ್ ಮಾಲೀಕ ರಮೇಶ್ ಮಂಗಳವಾರ ಎಂದಿನಂತೆ ಕಾರ್ಯ ನಿರ್ವಹಿಸಿ ರಾತ್ರಿ ಅಂಗಡಿ ಮುಚ್ಚಿದ್ದರು. ಬುಧವಾರ ಅಮಾವಾಸ್ಯೆ ಅಂಗವಾಗಿ ಅಂಗಡಿ ತೆರೆದಿರಲಿಲ್ಲ. ಆದರೆ ರಾತ್ರಿ ಅಂಗಡಿ ಹಿಂಭಾಗದಲ್ಲಿರುವ ದಲಿತರ ಶಿಕ್ಷಣ ಸಂಸ್ಥೆ ಕಾಂಪೌಂಡ್ ಹಾರಿ ಬಂದಿರುವ ದುಷ್ಕರ್ಮಿಗಳು ಕಿಟಕಿಯ ಸರಳನ್ನು ಗ್ಯಾಸ್ ಕಟ್ಟರ್‌ನಿಂದ ಮುರಿದು ಒಳನುಗ್ಗಿ ಅಂಗಡಿ ಯಲ್ಲಿದ್ದ ಸುಮಾರು ಅಂದಾಜು 7 ಲಕ್ಷ ರೂ. ಮೌಲ್ಯದ 10 ಕೆಜಿ ಬೆಳ್ಳಿ, ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ಹಾಗೂ ನಗದು ಹಣವನ್ನು ದೋಚಿ ಗ್ಯಾಸ್ ಸಿಲಿಂಡರ್ ಅನ್ನು ಅಲ್ಲೇ ಬಿಟ್ಟು, ಅಂಗಡಿಯಲ್ಲಿ ಅಳವಡಿಸಿದ್ದ ಸಿಸಿಟಿವಿ ಹಾರ್ಡ್‌ಡಿಸ್ಕ್‌ನೊಂದಿಗೆ ಪರಾರಿಯಾಗಿದ್ದಾರೆ.

ವಿಷಯ ತಿಳಿದು ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್, ಎಎಸ್‌ಪಿ ತಿಮ್ಮಯ್ಯ, ಡಿವೈಎಸ್‌ಪಿ ಲಕ್ಷ್ಮೀ ನಾರಾಯಣ್ ಪ್ರಸಾದ್, ಸಿಪಿಐ ದೀಪಕ್, ಎಸ್.ಐ ಸುನೀಲ್, ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಜಗದೀಶ್, ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು. ಈ ಸಂಬಂಧ ಅಂಗಡಿ ಮಾಲೀಕ ರಮೇಶ್ ನೀಡಿದ ದೂರಿನ ಮೇರೆಗೆ ಕೆ.ಆರ್.ಪೇಟೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ತ.ನಾಡಿಗೆ ನೀರು ಬಿಡುಗಡೆ ಖಂಡಿಸಿ ಪ್ರತಿಭಟನೆ

ಮಂಡ್ಯ, ಆ.17– ರೈತರ ಜೀವನಾಡಿ ಕೃಷ್ಣರಾಜ ಸಾಗರದಿಂದ ತಮಿಳುನಾಡಿಗೆ ನೀರು ಬಿಡುಗಡೆ ಮಾಡಿರುವ ಸರ್ಕಾರದ ಕ್ರಮ ಖಂಡಿಸಿ ರೈತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ರೈತ ಸಂಘ (ಮೂಲ ಸಂಘಟನೆ) ಆಶ್ರಯದಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸಿದ ರೈತರು ಕೇಂದ್ರ ಮತ್ತು ರಾಜ್ಯ ಸರ್ಕಾರ ಹಾಗೂ ಜಿಲ್ಲೆಯ ಜನಪ್ರತಿನಿಧಿಗಳ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕೃಷ್ಣರಾಜಸಾಗರ ಜಲಾಶಯ ಜಿಲ್ಲೆಯ ರೈತರ ಬದುಕಿಗೆ ಜೀವನಾಡಿಯಾಗಿದೆ. ಇಷ್ಟೊತ್ತಿಗೆ ಜಲಾಶಯ ಭರ್ತಿಯಾಗಬೇಕಾಗಿತ್ತು, ಆದರೆ ಮಳೆ ಕೊರತೆ ಹಿನ್ನೆಲೆಯಲ್ಲಿ 110 ಅಡಿ ವರೆಗೆ ಮಾತ್ರ ಜಲಾಶಯದಲ್ಲಿ ನೀರಿದೆ ಆದರೂ ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಹರಿಸುತ್ತಿದೆ ಎಂದು ಕಿಡಿಕಾರಿದರು.

ರಾಜ್ಯ ಸರ್ಕಾರ ಕಾವೇರಿ ನದಿ ನೀರು ಹಂಚಿಕೆ ಸಂಕಷ್ಟದ ಬಗ್ಗೆ ಸುಪ್ರೀಂಕೋರ್ಟ್‌ಗೆ ಪರಿಸ್ಥಿತಿ ಮನದಟ್ಟು ಮಾಡಿಸಿ ಜಿಲ್ಲೆಯ ರೈತರ ಹಿತ ಕಾಪಾಡಬೇಕೆಂದು ಪ್ರತಿಭಟನಾನಿರತ ರೈತರು ಒತ್ತಾಯಿಸಿದರು.



ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ನೀರು ಬಿಡುಗಡೆ ಮಾಡುತ್ತಿರುವ ಬಗ್ಗೆ ರೈತರು ಬೇಕಾದರೆ ನ್ಯಾಯಾಲಯಕ್ಕೆ ಹೋಗಲಿ ಎಂದು ಹೇಳಿರುವುದು ನಾಚಿಕೆಗೇಡು. ಸರ್ಕಾರದ ಸಚಿವರಾಗಿ ನಾಡಿನ ರೈತರ ಹಿತದ ಬಗ್ಗೆ ಚಿಂತಿಸದೆ ಉಡಾಫೆಯಾಗಿ ವರ್ತಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಲಾಶಯದ ಅಚ್ಚುಕಟ್ಟು ಪ್ರದೇಶದ ನಾಲೆಗಳಿಗೆ ಕಟ್ಟು ಪದ್ಧತಿಯಲ್ಲಿ ನೀರು ಬಿಟ್ಟು, ತಮಿಳುನಾಡಿಗೆ ಮಾತ್ರ ಹೆಚ್ಚಿನ ಪ್ರಮಾಣದ ನೀರು ಬಿಟ್ಟಿದ್ದಾರೆ. ಈ ತಕ್ಷಣ ನದಿಗೆ ಬಿಡುತ್ತಿರುವ ನೀರು ಸ್ಥಗಿತಗೊಳಿಸಿ ನಾಲೆಗಳಿಗೆ ನಿರಂತರ ನೀರು ಹರಿಸುವಂತೆ ಒತ್ತಾಯಿಸಿದರು. ಕಳೆದೊಂದು ವಾರದಿಂದ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಹೆದ್ದಾರಿಯಲ್ಲಿ ಸಾರ್ವಜನಿಕರಿಗೆ ತೊಂದರೆ ಕೊಟ್ಟು, ಅವಾಚ್ಯ ಶಬ್ದಗಳಿಂದ ನಿಂದಿಸಿಕೊಂಡು ಸಳವಳಿ ಮಾಡಿದ್ದನ್ನು ಖಂಡಿಸಿದ ಪ್ರತಿಭಟನಾಕಾರರು, ಅವರು ವೈಯಕ್ತಿಕ ಪ್ರತಿಷ್ಠೆಗಾಗಿ ರೈತರ, ಸಾರ್ವಜನಿಕ ಹಿತಾಸಕ್ತಿ ಕಡೆಗಣಿಸಿದ್ದಾರೆ. ಮುಂದಿನ ದಿನಗಳಲ್ಲಿ ಜಿಲ್ಲಾಡಳಿತ ಇಂತಹ ಪ್ರಸಂಗಗಳಿಗೆ ಅವಕಾಶ ಕೊಡಬಾರದು ಎಂದು ಆಗ್ರಹಿಸಿದರು.

ಕಾವೇರಿ ನದಿ ನೀರು ವಿಚಾರದಲ್ಲಿ ರಾಜ್ಯ ಸರ್ಕಾರ ಜಿಲ್ಲೆಯ ರೈತರ ಪರ ನಿಲ್ಲದಿದ್ದರೆ ಜಿಲ್ಲೆಯ ಜನಪ್ರತಿನಿಧಿಗಳು, ಮಂತ್ರಿಗಳು, ಲೋಕಸಭಾ ಸದಸ್ಯರ ವಿರುದ್ಧ ಹೋರಾಟ ಮಾಡಲಾಗುವುದೆಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಇಂಡುವಾಳು ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ಎಸ್.ಮಂಜೇಶ್‌ಗೌಡ, ಮುಖಂಡರಾದ ಪ್ರಭುಲಿಂಗ, ವೈ.ಕೆ.ರಾಮೇಗೌಡ, ಕೆ.ರಾಮಲಿಂಗೇಗೌಡ, ವೆಂಕಟೇಶ್, ಬೋರಲಿಂಗೇಗೌಡ, ಉಮೇಶ್ ಭಾಗವಹಿಸಿದ್ದರು.

ಪಾಂಡವಪುರ ಪಿಎಲ್‌ಡಿ ಬ್ಯಾಂಕ್‌ಗೆ ಮುರಳಿ ಅಧ್ಯಕ್ಷ



ಪಾಂಡವಪುರ, ಆ.17– ತಾಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ(ಪಿಎಲ್‌ಡಿ) ಬ್ಯಾಂಕ್ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಎನ್.ಮುರಳಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಎಂ.ಸಿ.ಯಶವಂತ್ ಕುಮಾರ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ಉಪಾಧ್ಯಕ್ಷೆ ಗೌರಮ್ಮ ಪ್ರಭಾರ ಅಧ್ಯಕ್ಷೆಯಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಗುರುವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎಸ್.ಮುರಳಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ನಿರ್ಮಲ ಘೋಷಿಸಿದರು. ನೂತನ ಅಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆಯೇ ಬೆಂಬಲಿಗರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು. ಈ ವೇಳೆ ನೂತನ ಅಧ್ಯಕ್ಷರನ್ನು ಬ್ಯಾಂಕ್‌ನ ಎಲ್ಲಾ ನಿರ್ದೇಶಕರು ಅಭಿನಂದಿಸಿದರು.

ನೂತನ ಅಧ್ಯಕ್ಷ ಎನ್.ಮುರಳಿ ಮಾತನಾಡಿ, ನಮ್ಮ ನಾಯಕರು, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರ ಆಶೀರ್ವಾದ ಹಾಗೂ ಬ್ಯಾಂಕ್‌ನ ಎಲ್ಲಾ ನಿರ್ದೇಶಕರ ಸಹಕಾರದಿಂದ ನೂತನ ಅಧ್ಯಕ್ಷನಾಗಿ ಅವಿರೋಧವಾಗಿ ಆಯ್ಕೆಯಾಗಿದ್ದೇನೆ. ಮುಂದಿನ ದಿನಗಳಲ್ಲಿ ಬ್ಯಾಂಕ್ ಅಭಿವೃದ್ಧಿಗಾಗಿ ಎಲ್ಲಾ ನಿರ್ದೇಶಕರ ಸಹಕಾರ ಪಡೆದು ಕೆಲಸ ಮಾಡುತ್ತೇನೆ. ಬ್ಯಾಂಕ್ ವತಿಯಿಂದ ರೈತರಿಗೆ ಸಾಲ ಒದಗಿಸಿ ಕೊಡುವ ಪ್ರಾಮಾಣಿಕ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಈ ವೇಳೆ ಉಪಾಧ್ಯಕ್ಷೆ ಗೌರಮ್ಮ, ನಿರ್ದೇಶಕರಾದ ಎಂ.ಸಿ.ಯಶವಂತ್‌ಕುಮಾರ್, ಸಿ.ಪ್ರಕಾಶ್, ಡಿ.ಎನ್.ಸೋಮಶೇಖರ್, ರತ್ನಮ್ಮ, ಶಿವಣ್ಣ, ನಾಗಶೆಟ್ಟಿ, ನಾಗೇಗೌಡ, ಎಂ.ಚನ್ನಯ್ಯ, ಮುಖಂಡರಾದ ಟಿಎಪಿಸಿಎಂಎಸ್ ನಿರ್ದೇಶಕ ರಾಮಕೃಷ್ಣೇಗೌಡ, ಡಿಸಿಸಿ ಬ್ಯಾಂಕ್ ನಿರ್ದೇಶಕ ಚಲುವರಾಜು ಸೇರಿದಂತೆ ಹಲವರಿದ್ದರು.

ಯಲಾದಹಳ್ಳಿ ಸೊಸೈಟಿಗೆ ಆಯ್ಕೆ

ಭಾರತೀನಗರ, ಆ.17– ಇಲ್ಲಿಗೆ ಸಮೀಪದ ಯಲಾದಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಬಿ.ಶಿವಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಚುನಾವಣೆಯಲ್ಲಿ ಬಿ.ಶಿವಣ್ಣ ಅಧ್ಯಕ್ಷರಾಗಿ, ಲಕ್ಷ್ಮಿ ಕೆಂಪಶೆಟ್ಟಿ ಉಪಾಧ್ಯಕ್ಷರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಗ್ರಾಮದ ಮುಖಂಡರು, ಸಂಘದ ಸದಸ್ಯರು ಅಭಿನಂದಿಸಿದ್ದಾರೆ.

ಕರ್ತವ್ಯ ಲೋಪ: ಎಸ್‌ಡಿಎ ಅಮಾನತು

ಮಂಡ್ಯ, ಆ.17– ಅನಧಿಕೃತ ಗೈರು ಹಾಜರಿ ಹಾಗೂ ಕರ್ತವ್ಯ ಲೋಪ ಹಿನ್ನೆಲೆಯಲ್ಲಿ ಮಂಡ್ಯ ತಾಲೂಕು ಕಚೇರಿ ದ್ವಿತೀಯ ದರ್ಜೆ ಸಹಾಯಕ ಎಂ.ಆರ್.ಗಿರೀಶ್ ಅವರನ್ನು ಅಮಾನತುಗೊಳಿಸಿ ಜಿಲ್ಲಾಧಿಕಾರಿ ಡಾ.ಕುಮಾರ್ ಆದೇಶಿಸಿದ್ದಾರೆ.

2022ರ ನವೆಂಬರ್‌ನಲ್ಲಿ 17 ದಿನ, ಡಿಸೆಂಬರ್‌ನಲ್ಲಿ 8 ಹಾಗೂ ಕಳೆದ ಜನವರಿಯಲ್ಲಿ 11 ದಿನ ಗೈರು ಹಾಜರಾಗಿದ್ದು, ಕಾರಣ ಕೇಳಿ ನೋಟೀಸ್ ಜಾರಿ ಮಾಡಿದರೂ ಸಮಜಾಯಿಸಿ ನೀಡಿಲ್ಲ. ಅಲ್ಲದೆ ಪ್ರಕೃತಿ ವಿಕೋಪದಡಿ ಪರಿಹಾರ ನೀಡುವಂತೆ ಕೋರಿ ಸಾರ್ವಜನಿಕರು ಸಲ್ಲಿಸಿರುವ ಅರ್ಜಿ ಸಂಬಂಧ ಕ್ರಮ ಕೈಗೊಳ್ಳದೆ ಪರಿಹಾರ ಮಂಜೂರಾಗದೆ ತೊಂದರೆಯಾಗಿದೆ ಎಂದು ಆ.10ರಂದು ತಾಲೂಕು ಕಚೇರಿಗೆ ಆಗಮಿಸಿದ ವೇಳೆ ಕೇಳಿ ಬಂದ ದೂರು ಆಧರಿಸಿ ಕ್ರಮ ವಹಿಸಿ ವಿಚಾರಣೆ ಕಾಯ್ದಿರಿಸಿ ತಕ್ಷಣದಿಂದಲೇ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ಅಮಾನತುಗೊಳಿಸಿ ಸಕ್ಷಮ ಪ್ರಾಧಿಕಾರದ ಅನುಮತಿ ಇಲ್ಲದೆ ಕೇಂದ್ರಸ್ಥಾನ ಬಿಡತಕ್ಕದ್ದಲ್ಲ ಎಂದು ಅವರು ಆದೇಶದಲ್ಲಿ ತಿಳಿಸಿದ್ದಾರೆ.

ಹೃದಯಾಘಾತ: ಕಿರುತೆರೆ ಕಲಾವಿದ ಸಾವು

ಕೆ.ಆರ್.ಪೇಟೆ, ಆ.17– ಕೆ.ಆರ್.ಪೇಟೆ ಮೂಲದ ಹಿಂದಿ, ತಮಿಳು ಕಿರುತೆರೆ ಕಲಾವಿದರೊಬ್ಬರು ಗುರುವಾರ ಬೆಳಗ್ಗೆ ಮುಂಬೈನಲ್ಲಿ ಸಾವನ್ನಪ್ಪಿದ್ದಾರೆ.



ಮೂಲತಃ ಕೆ.ಆರ್.ಪೇಟೆ ತಾಲೂಕು ಹರಿಹರಪುರ ಗ್ರಾಮದ ನಿವಾಸಿ ನಾಗರಾಜು, ಸರಸ್ವತಿ ದಂಪತಿ ಪುತ್ರ ಹಾಗೂ ಕಿರುತೆರೆ ಕಲಾವಿದ ಪವನ್(25) ಸಾವನ್ನಪ್ಪಿದವರು. ಹಿಂದಿ, ತಮಿಳು ಕಿರುತೆರೆ ಕಲಾವಿದನಾಗಿ ಗುರುತಿಸಿಕೊಂಡಿದ್ದ ಈತ ಮುಂಬೈನ ತಮ್ಮ ನಿವಾಸದಲ್ಲಿ ಇಂದು ಮುಂಜಾನೆ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ. ಪವನ್ ಸಾವಿಗೆ ಅತಿಯಾದ ವ್ಯಾಯಾಮವೇ ಕಾರಣ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮುಂಬೈನ ಆಸ್ಪತ್ರೆಯಲ್ಲಿ ಶವದ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ವಾರಸುದಾರರಿಗೆ ಒಪ್ಪಿಸಿದ್ದು, ಶುಕ್ರವಾರ ಬೆಳಗ್ಗೆ 10 ಗಂಟೆಗೆ ಸ್ವಗ್ರಾಮ ಹರಿಹರಪುರದ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಕಿರುತೆರೆ ಕಲಾವಿದನ ಸಾವಿಗೆ ಶಾಸಕ ಮಂಜು ಸೇರಿದಂತೆ ಗಣ್ಯರು ಸಂತಾಪ ಸೂಚಿಸಿದ್ದಾರೆ.

ದಸರಾ ಬನ್ನಿಮಂಟಪಕ್ಕೆ ಹೊಸ ಮೆರಗು

ಮೊಗರಹಳ್ಳಿಗೆ ಶಾಸಕ ರಮೇಶ್‌ಬಾಬು ಭೇಟಿ, ಪರಿಶೀಲನೆ



ಶ್ರೀರಂಗಪಟ್ಟಣ, ಆ.17– ಪಟ್ಟಣದಲ್ಲಿ ಈ ಬಾರಿ ದಸರಾ ಉತ್ಸವವನ್ನು ವೈಭವದಿಂದ ಆಚರಿಸಲು ತೀರ್ಮಾನಿಸಿದ್ದು, ಉತ್ಸವ ಆರಂಭವಾಗುವ ಹೊತ್ತಿಗೆ ಬನ್ನಿಮಂಟಪದ ಪರಿಸರಕ್ಕೆ ಹೊಸ ಮೆರಗು ನೀಡಲಾಗುವುದು ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ತಿಳಿಸಿದರು.

ಪಟ್ಟಣ ಸಮೀಪದ ಕಿರಂಗೂರು ವೃತ್ತದ ಬಳಿಯ ದಸರಾ ಬನ್ನಿಮಂಟಪಕ್ಕೆ ಗುರುವಾರ ಜಿಲ್ಲಾಧಿಕಾರಿ ಡಾ.ಕುಮಾರ ಮತ್ತು ಇತರ ಅಧಿಕಾರಿಗಳ ಜತೆ ಭೇಟಿ ನೀಡಿ ಪರಿಶೀಲಿಸಿ ಮಾತನಾಡಿದ ಅವರು, ಬನ್ನಿ ಮಂಟಪದ ಸುತ್ತಲೂ ಇಂಟರ್ ಲಾಕ್ ಸಿಮೆಂಟ್ ಬ್ಲಾಕ್‌ಗಳನ್ನು ಅಳವಡಿಸಲಾಗುವುದು. ಸದ್ಯ ಇರುವ ಬೇಲಿಯನ್ನು ಮತ್ತಷ್ಟು ಸುಭದ್ರಗೊಳಿಸಲಾಗುವುದು. ಜನರು ಕೂರಲು ಕಲ್ಲಿನ ಬೆಂಚ್‌ಗಳನ್ನು ಹಾಕಿಸಲಾಗುವುದು. ಮಂಟಪದ ಶಿಥಿಲವಾದ ಭಾಗವನ್ನು ದುರಸ್ತಿ ಮಾಡಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು. ಇದಕ್ಕೂ ಮುನ್ನ ಶಾಸಕ, ಜಿಲ್ಲಾಧಿಕಾರಿ ಮತ್ತು ಇತರ ಅಧಿಕಾರಿಗಳ ತಂಡ ತಾಲೂಕಿನ ಮೊಗರಹಳ್ಳಿ ಬಳಿ ಸ.ನಂ.128ರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

1993–94ರಲ್ಲಿ, ಸ.ನಂ. 128ರಲ್ಲಿ 202 ಜನರಿಗೆ ನಿವೇಶನ ಹಂಚಿಕೆ ಮಾಡಿ ಹಕ್ಕು ಪತ್ರಗಳನ್ನು ನೀಡಲಾಗಿದೆ. ಈ ಪೈಕಿ 47 ಮಂದಿ ತಮ್ಮ ಜಾಗದಲ್ಲಿ ಮನೆ ಕಟ್ಟಿಕೊಂಡಿದ್ದಾರೆ. ಉಳಿದ ಜಾಗದಲ್ಲಿ ಹಕ್ಕುಪತ್ರ ಇಲ್ಲದವರು ಅಕ್ರಮವಾಗಿ ಕಟ್ಟಡ ಕಟ್ಟಲು ಆರಂಭಿಸಿದ್ದಾರೆ. ನಿವೇಶನಗಳಿಗೆ ಮೀಸಲಾಗಿದ್ದ ಜಾಗವನ್ನು ಕೆಐಎಡಿಬಿ ವಶಕ್ಕೆ ಪಡೆದಿದ್ದು, ಗೊಂದಲಕ್ಕೆ ಕಾರಣವಾಗಿದೆ ಎಂದು ಸ್ಥಳೀಯರು ಶಾಸಕ ಮತ್ತು ಅಧಿಕಾರಿಗಳಿಗೆ ತಿಳಿಸಿದರು.

ಮೊಗರಹಳ್ಳಿಯ ವಿವಾದಿತ ಜಾಗದಲ್ಲಿ ಹೊಸದಾಗಿ ಯಾರೂ ಕಟ್ಟಡಗಳನ್ನು ನಿರ್ಮಿಸದಂತೆ ನೋಡಿಕೊಳ್ಳಬೇಕು ಎಂದು ಸ್ಥಳೀಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸೂಚಿಸಿದರು. ಅಕ್ರಮವಾಗಿ ಕಟ್ಟಡ ನಿರ್ಮಿಸಿದ್ದರೆ ಅದನ್ನು ಪತ್ತೆ ಹಚ್ಚಲು ಉಪ ವಿಭಾಗಾಧಿಕಾರಿ ನೇತೃತ್ವದಲ್ಲಿ ತಂಡ ರಚಿಸಲಾಗಿದೆ ಎಂದರು.



ಮೈಸೂರಿನ ಅನಂತಗೀತ ವಿದ್ಯಾಲಯದಲ್ಲಿ 77ನೇ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು. ನಿವೃತ್ತ ಹವಾಲ್ದಾರ್ ಸುರೇಶ್ ಧ್ವಜಾರೋಹಣ ನೆರವೇರಿಸಿದರು. ಸಂಸ್ಥೆಯ ಅಧ್ಯಕ್ಷ ವೇಣುಗೋಪಾಲ್ ಕಲ್ಲೂರು, ಕಾರ್ಯದರ್ಶಿ ಗೀತಾ ಅನಂತರಾಮಯ್ಯ, ಪ್ರಾಂಶುಪಾಲ ಶ್ರೀಕಾಂತ್ ಅಮರನಾಥ್, ಉಪ ಪ್ರಾಂಶುಪಾಲ ಹರದೂರು ಲೋಕೇಶ್ ಮತ್ತಿತರರು ಹಾಜರಿದ್ದರು.



ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್ ಮೈಸೂರು ವತಿಯಿಂದ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಟ್ರಸ್ಟ್‌ನ ವಿದ್ಯಾನಿಧಿ ಯೋಜನೆಯ ಅಡಿಯಲ್ಲಿ ಮಂಡ್ಯ ಜಿಲ್ಲೆಯ ಚಿಕ್ಕಮಾಳಿಗೆ ಕೊಪ್ಪಲು ಗ್ರಾಮಾಂತರ ಶಾಲೆಗೆ ಪಠ್ಯಸಾಮಾಗ್ರಿಗಳನ್ನು ವಿತರಿಸಲಾಯಿತು. ಚಿತ್ರದಲ್ಲಿ ಫೌಂಡೇಶನ್‌ನ ಸಂಸ್ಥಾಪನಾ ಕಾರ್ಯದರ್ಶಿ ಗಾಯತ್ರಿ ಸುಂದರೇಶ್, ಗ್ರಾಮದ ಮುಖಂಡರು ಮತ್ತು ಶಾಲಾ ಮುಖ್ಯಸ್ಥರನ್ನು ಕಾಣಬಹುದು.



ಮೈಸೂರಿನ ಎಂ.ಎಂ.ಕೆ. ಮತ್ತು ಎಸ್.ಡಿ.ಎಂ. ಬಾಲಕಿಯರ ಪದವಿಪೂರ್ವ ಕಾಲೇಜು ಹಾಗೂ ಎಂ.ಎಂ.ಕೆ. ಮತ್ತು ಎಸ್.ಡಿ.ಎಂ. ಮಹಿಳಾ ಮಹಾವಿದ್ಯಾಲಯದಲ್ಲಿ 77ನೇ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು. ಈ ವೇಳೆ ವಿಶ್ರಾಂತ ಕನ್ನಡ ಪ್ರಾಧ್ಯಾಪಕರಾದ ಡಾ. ಪ್ರೀತಿ ಶುಭಚಂದ್ರ ಧ್ವಜಾರೋಹಣ ನೆರವೇರಿಸಿದರು. ಪ್ರಾಂಶುಪಾಲೆ ಶ್ರೀಮತಿ ನಯನ ಕುಮಾರಿ, ಪದವಿ ಕಾಲೇಜಿನ ಪ್ರಾಂಶುಪಾಲ ಪ್ರೊ.ಸಾಯಿನಾಥ್ ಮಲ್ಲಿಗೆಮಾಡು, ವಿದ್ಯಾರ್ಥಿನಿ ಕ್ಷೇಮಪಾಲನಾ ಅಧಿಕಾರಿಗಳಾದ ಶ್ರೀಮತಿ ಜಯಲಕ್ಷ್ಮಿ ಸಿ. ಮತ್ತು ಶ್ರೀಮತಿ ರಜಿತ, ಪದವಿ ಕಾಲೇಜಿನ ಉಪ ಪ್ರಾಂಶುಪಾಲರಾದ ಪ್ರೊ. ಎನ್. ಭಾರತಿ, ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀಮತಿ ಮಾಲತಿ ಉಪಸ್ಥಿತರಿದ್ದರು.

ವ್ಹೀಲಿಂಗ್ ಪ್ರಶ್ನಿಸಿದ್ದ ಇನ್ಸ್‌ಪೆಕ್ಟರ್ ಮೇಲೆ ಆಟೋ ಹತ್ತಿಸಲು ಯತ್ನಿಸಿದ್ದ ಚಾಲಕ ಬಂಧನ

ಹುಣಸೂರು, ಆ.17– ಅಪಾಯಕಾರಿಯಾಗಿ ಆಟೋ ವೀಲಿಂಗ್ ಮಾಡುತ್ತಿದ್ದವನನ್ನು ಪ್ರಶ್ನಿಸಿದ ಪೊಲೀಸ್ ಇನ್ಸ್‌ಪೆಕ್ಟರ್ ಮೇಲೆಯೇ ಆಟೋ ಹತ್ತಿಸಲು ಯತ್ನಿಸಿ, ಪರಾರಿಯಾಗುತ್ತಿದ್ದ ಚಾಲಕನನ್ನು ಸಾರ್ವಜನಿಕರ ನೆರವಿನೊಂದಿಗೆ ಬಂಧಿಸಿ, ಹುಣಸೂರು ನಗರ ಠಾಣೆ ಪೊಲೀಸರು ಆಟೋ ವಶಪಡಿಸಿಕೊಂಡಿದ್ದಾರೆ.



ಹುಣಸೂರಿನ ಟಿಪ್ಪುನಗರದ ರೋಷನ್(23) ಬಂಧಿತ ಆಟೋ ಚಾಲಕ. ಈತ ಸ್ವಾತಂತ್ರ್ಯೋತ್ಸವದಂದು ಸಂಜೆ ರತ್ನಪುರಿ ರಸ್ತೆಯಲ್ಲಿ ಪ್ಯಾಸೆಂಜರ್ ಆಟೋವನ್ನು ಐ.ಕೆ.ರಸ್ತೆ ಕಡೆಯಿಂದ ಅಪಾಯಕಾರಿಯಾಗಿ ವೀಲಿಂಗ್ ಮಾಡಿಕೊಂಡು ಬರುತ್ತಿದ್ದ. ಇದನ್ನು ಕಂಡು ಇನ್ಸ್‌ಪೆಕ್ಟರ್ ದೇವೇಂದ್ರ ಹಾಗೂ ಸಿಬ್ಬಂದಿ ಆಟೋವನ್ನು ತಡೆಯಲು ಹೋದ ವೇಳೆ ಹೋ ಎಂದು ಕೂಗುತ್ತಾ, ಪೊಲೀಸರನ್ನೇ ಅಣಕಿಸುತ್ತಾ, ಇನ್ಸ್‌ಪೆಕ್ಟರ್ ಮೇಲೆಯೇ ಆಟೋ ಹತ್ತಿಸಲು ಈತ ಯತ್ನಿಸಿದ್ದಾನೆ. ಇನ್ಸ್‌ಪೆಕ್ಟರ್ ಪಕ್ಕಕ್ಕೆ ಹಾರಿ ತಪ್ಪಿಸಿಕೊಂಡರೆ, ಆಟೋವನ್ನು ಜೀಪಿನ ಮುಂಭಾಗಕ್ಕೆ ಢಿಕ್ಕಿ ಹೊಡೆದು ಚಾಲಕ ರೋಷನ್ ಪರಾರಿಯಾಗಲು ಪ್ರಯತ್ನಿಸಿದ್ದಾನೆ. ಪೊಲೀಸರು ತಮ್ಮ ಜೀಪ್‌ನಲ್ಲಿ ಸುಮಾರು 2 ಕಿಮೀನಷ್ಟು ಬೆನ್ನತ್ತಿದರೂ ಆಟೋವನ್ನು ಅಡ್ಡಾದಿಡ್ಡಿಯಾಗಿ ಓಡಿಸಿಕೊಂಡು ಪರಾರಿಯಾಗಲೆತ್ನಿಸಿದ ವೇಳೆ ಸಾರ್ವಜನಿಕರ ಸಹಾಯದಿಂದ ಸಲೀಂ ಪ್ಯಾಲೆಸ್ ಬಳಿ ಆಟೋ ಸಹಿತ ಆರೋಪಿಯನ್ನು ಬಂಧಿಸಿದ್ದಾರೆ. ಈ ಸಂಬಂಧ ನಗರ ಠಾಣೆಯಲ್ಲಿ ಇನ್ಸ್‌ಪೆಕ್ಟರ್ ದೇವೇಂದ್ರರವರು ದೂರು ದಾಖಲಿಸಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಠಾಣಾಧಿಕಾರಿ ಕುಮಾರ್ ಕರ್ತವ್ಯಕ್ಕೆ ಅಡ್ಡಿ, ಸಮವಸ್ತ್ರದಲ್ಲಿದ್ದ ಪೊಲೀಸರು ಕಾನೂನು ಪಾಲನೆ ಸೂಚಿಸಿದರೂ ನಿರ್ಲಕ್ಷ ಹಾಗೂ ಆಟೋದಿಂದ ಡಿಕ್ಕಿ ಮಾಡಿ ಪ್ರಾಣ ಹಾನಿ ಮಾಡಲು ಯತ್ನಿಸಿದ್ದಲ್ಲದೆ. ಇಲಾಖೆ ಜೀಪ್ ಜಖಂಗೊಂಡಿಸಿದ ಆರೋಪದ ಮೇರೆಗೆ ವಿವಿಧ ಕಲಂಗಳಡಿ ಪ್ರಕರಣ ದಾಖಲಿಸಿ ಆಟೋ ಚಾಲಕನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಸೇನಾ ನೇಮಕಾತಿ ಪರೀಕ್ಷೆಯಲ್ಲಿ ಅನುತ್ತೀರ್ಣ; ಮನನೊಂದು 24 ವರ್ಷದ ಯುವಕ ಆತ್ಮಹತ್ಯೆ!

ಬೆಳಗಾವಿ, ಆ.17– ಪದೇ ಪದೆ ಪ್ರಯತ್ನಿಸಿದರೂ ಸೇನಾ ನೇಮಕಾತಿ ಪರೀಕ್ಷೆಯಲ್ಲಿ ಉತ್ತೀರ್ಣನಾಗದಿದ್ದಕ್ಕೆ ಮನನೊಂದು ನಿಪ್ಪಾಣಿ ತಾಲೂಕಿನಲ್ಲಿ ಗುರುವಾರ 24 ವರ್ಷದ ಯುವಕ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಮೃತನನ್ನು ಬೆಳಗಾವಿ ಸಮೀಪದ ನಿಪ್ಪಾಣಿ ತಾಲೂಕಿನ ಹಂಚಿನಾಳ್ ಗ್ರಾಮದ ನಿವಾಸಿ ಅಪ್ಪಾಸೊ ಶಿವಾಜಿ ಪಾನಡೆ ಎಂದು ಗುರುತಿಸಲಾಗಿದೆ. ಯುವಕ ಬಾಲ್ಯದಿಂದಲೂ ಸೇನೆಗೆ ಸೇರುವ ಕನಸನ್ನು ಹೊಂದಿದ್ದ. ಅದಕ್ಕಾಗಿ ತಯಾರಿ ನಡೆಸುತ್ತಿದ್ದನು. ಆತ ಮಹಾರಾಷ್ಟ್ರದ ಖಾಸಗಿ ಕಾರ್ಖಾನೆಯಲ್ಲಿ ಎರಡು ವರ್ಷ ಕೆಲಸ ಮಾಡಿದ್ದ. ಆದಾಗ್ಯೂ, ಆತ ಸೇನೆಗೆ ಸೇರಲು ಹಲವು ಬಾರಿ ಮಾಡಿದ ಪ್ರಯತ್ನಗಳು ವಿಫಲವಾಗಿದ್ದವು. ಈ ವೈಫಲ್ಯವನ್ನು ಸಹಿಸಲಾಗದ ಯುವಕ ತನ್ನ ನಿವಾಸದಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ. ನಿಪ್ಪಾಣಿ ಗ್ರಾಮಾಂತರ ಪೊಲೀಸರು ಸ್ಥಳಕ್ಕೆ ಧಾವಿಸಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಗಾಯಕರಾದ ವಾದಿರಾಜ್ ಜಮದಗ್ನಿ, ಶ್ರೀದೇವಿ ಅವರಿಂದ ಭಕ್ತಿ ಭಾವ– ಗಾಯನ

ಮೈಸೂರು, ಆ. 17– ಉಡುಪಿಯ ಪೇಜಾವರ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದಂಗಳರವರ 36ನೇ ಚಾತುರ್ಮಾಸದ ಪ್ರಯುಕ್ತ ಗಾಯಕರಾದ ವಾದಿರಾಜ್ ಜಮದಗ್ನಿ ಮತ್ತು ಶ್ರೀದೇವಿ ಅವರಿಂದ ಭಕ್ತಿ ಭಾವ– ಗಾಯನವನ್ನು ಸರಸ್ವತಿ ಪುರಂನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ನಾಳೆ (ಆ.18) ಸಂಜೆ 7 ಗಂಟೆಗೆ ಆಯೋಜಿಸಲಾಗಿದೆ ಎಂದು ಚಾತುರ್ಮಾಸ ಸಮಿತಿಯ ಕಾರ್ಯಾಧ್ಯಕ್ಷ ರವಿಶಾಸ್ತ್ರಿ ತಿಳಿಸಿದ್ದಾರೆ.





ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಜಯಕರ್ನಾಟಕ ಸಂಘಟನೆ ಮತ್ತು ರೈಲ್ವೆ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಟ್ರಸ್ಟ್ ರಮಾಬಾಯಿನಗರ ವತಿಯಿಂದ ಮೈಸೂರು ತಾಲೂಕು ಗುರೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ಮಕ್ಕಳಿಗೆ ಬ್ಯಾಗ್ ಮತ್ತು ಪಠ್ಯಸಾಮಾಗ್ರಿಗಳನ್ನು ವಿತರಿಸಲಾಯಿತು. ಜಯಕರ್ನಾಟಕ ಸಂಘಟನೆಯ ರಾಜ್ಯ ಉಪಾಧ್ಯಕ್ಷ ಹೆಚ್.ಎನ್ ಸತೀಶ್‌ಗೌಡ, ರಾಜ್ಯ ಸಂಘಟನಾ ಕಾರ್ಯದರ್ಶಿ ವಿಜಯ ಗೌಡ, ಜಿಲ್ಲಾಧ್ಯಕ್ಷ ಶ್ರೀಧರ ನಾಯಕ, ಜಿಲ್ಲಾ ಯುವ ಘಟಕದ ಅಧ್ಯಕ್ಷ ಸಂಜಯ್, ರೈಲ್ವೆ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಶ್ರೀನಿವಾಸರಾವ್, ಜಿಲ್ಲಾ ಉಪಾಧ್ಯಕ್ಷರಾದ ಕಾಂತರಾಜು, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಲಿಂಗರಾಜು, ಪದಾಧಿಕಾರಿಗಳಾದ ಆಶಾ ರಾಣಿ, ಸುರೇಶ್, ಮಂಜುನಾಥ್, ಸ್ವಾಮಿ, ರಾಜು, ರೈಲ್ವೆ ಮಂಜು, ರವಿಕುಮಾರ್, ಶಾಲಾ ಶಿಕ್ಷಕ ವೃಂದ ಹಾಜರಿದ್ದರು.

ಹೊಸ ವಿದ್ಯುತ್ ಮಾರ್ಗಕ್ಕೆ ಸಂಪರ್ಕ: ಎಚ್ಚರಿಕೆ ವಹಿಸಲು ಮಾಹಿತಿ

ಮೈಸೂರು, ಆ.17– ಹುಣಸೂರು ತಾಲೂಕು ತಮ್ಮಡಹಳ್ಳಿ ಸರಹದ್ದಿನಲ್ಲಿ 220/66/11 ಕೆ.ವಿ ತಮ್ಮಡಹಳ್ಳಿ ಕೇಂದ್ರದಿಂದ (ಸುಮಾರು 12.274 ಕಿ.ಮೀ) 66/11 ಗಾವಡಗೆರೆ ಉಪ ಕೇಂದ್ರಕ್ಕೆ ಸಂಪರ್ಕಗೊಳಿಸುವ ಏಕಮುಖ ಮಾರ್ಗ ಮತ್ತು 66/11 ಕೆ.ವಿ ಗಾವಡಗೆರೆ ಉಪ ಕೇಂದ್ರದಿಂದ(ಸುಮಾರು 6.975 ಕಿ.ಮೀ), ಚುಂಚನಕಟ್ಟೆ–ಕೆ.ಆರ್.ನಗರ ಮಾರ್ಗಕ್ಕೆ ಸಂಪರ್ಕಗೊಳ್ಳುವ ದ್ವಿಮುಖ ಮಾರ್ಗವನ್ನು ನೂತನವಾಗಿ ಸ್ಥಾಪಿಸಲಾಗುತ್ತಿದ್ದು, 66 ಕೆ.ವಿ ವಿದ್ಯುತ್ ಮಾರ್ಗಗಳನ್ನು ಆ.16 ರಂದು ಅಥವಾ ಯಾವುದೇ ನಂತರ ದಿನಗಳಲ್ಲಿ ಚಾಲನೆಗೊಳಿಸಲು ಉದ್ದೇಶಿಸಲಾಗಿದೆ.

ತಮ್ಮಡಹಳ್ಳಿ–ಗೌಡಗೆರೆ ಮಾರ್ಗವಾಗಿ–ತಮ್ಮಡಹಳ್ಳಿ ನಾಗನಹಳ್ಳಿ ಬೆಳತ್ತೂರು ಮೋದೂರು, ಮಾದಾಪುರ ಕಟ್ಟೆಮಳವಾಡಿ, ಹೊನ್ನೇನಹಳ್ಳಿ, ಬಿಳಿಗೆರೆ, ಮನುಗನಹಳ್ಳಿ, ಗಾವಡಗೆರೆಯವರೆಗೆ ಹಾಗೂ ಚುಂಚನಕಟ್ಟೆ–ಕೆ.ಆರ್ ನಗರ ಮಾರ್ಗವಾಗಿ ಮನುಗನಹಳ್ಳಿ, ಗಾವಡಗೆರೆ, ಮಂಚಬ್ಯಾಯನಹಳ್ಳಿ, ಕೆರೆಯೂರು, ಜಬಗೆರೆ, ಚಿಕ್ಕದನಗನಹಳ್ಳಿ, ಅಡಗನಹಳ್ಳಿ, ಬ್ಯಾಡರಹಳ್ಳಿಯವರೆಗೆ ವಿದ್ಯುತ್ ಮಾರ್ಗವು ಹಾದು ಹೋಗಲಿದೆ.

ಆದ್ದರಿಂದ ಸಾರ್ವಜನಿಕರು ಮಾರ್ಗಗಳ ಗೋಪುರಗಳಿಗೆ ದನಕರುಗಳನ್ನು ಕಟ್ಟುವುದಾಗಲೀ, ಲೋಹದ ಪಟ್ಟಿಯನ್ನು ತೆಗೆಯುವುದಾಗಲೀ, ಗೋಪುರಗಳನ್ನು ಹತ್ತುವುದಾಗಲೀ, ತಂತಿಗಳನ್ನು ಮುಟ್ಟುವುದಾಗಲೀ, ಗೋಪುರಗಳ ಕೆಳಗಡೆ ಮರಗಿಡಗಳನ್ನು ನೆಡುವುದಾಗಲೀ ಗೋಪುರಗಳಿಗೆ ಬಳ್ಳಿ ಹಾಗೂ ಹಗ್ಗ ಮುಂತಾದವುಗಳನ್ನು ಎಸೆಯುವುದಾಗಲೀ, ಗಾಳಿಪಟವನ್ನು ಗೋಪುರದ ಹತ್ತಿರ ಹಾರಿಸುವುದಾಗಲೀ ಮಾಡುವುದು ತುಂಬಾ ಅಪಾಯಕಾರಿ ಹಾಗೂ ಪ್ರಾಣಹಾನಿಯಾಗುತ್ತದೆ.

ಈ ಸೂಚನೆಯನ್ನು ಉಲ್ಲಂಘಿಸಿದ್ದಲ್ಲಿ ಉಂಟಾಗುವ ಯಾವುದೇ ತರಹದ ಅಪಘಾತ ಅಥವಾ ಪ್ರಾಣಹಾನಿಗೆ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಜವಾಬ್ದಾರರಲ್ಲ ಎಂದು ಕವಿಪ್ರನಿನಿ ಬೃಹತ್ ಕಾಮಗಾರಿ ವಿಭಾಗದ ಸೆಸ್ಕ್ ಪ್ರಕಟಣೆ ತಿಳಿಸಿದೆ.



ಮೈಸೂರಿನ ಕೆ.ಜಿ. ಕೊಪ್ಪಲಿನ ಎನ್.ವೈ.ಎಂ. ಕ್ರಿಯೇಟಿವ್ ಪಿಯು ಕಾಲೇಜಿನಲ್ಲಿ ನೇಗಿಲಯೋಗಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನಡೆದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಕಳೆದ ಜನವರಿಯಲ್ಲಿ ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗವಹಿಸಿದ್ದ ಪ್ರತಿಭಾವಂತ ವಿದ್ಯಾರ್ಥಿಗಳಾದ ಎಂ. ಸೋನುಶ್ರೀ ಹಾಗೂ ಆರ್. ಶಾಂಭವಿ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷೆ ಜೆ. ಶೋಭಾ, ಖಜಾಂಚಿ ಸುವರ್ಣ ರಾಜ್, ಕಾಲೇಜಿನ ಪ್ರಾಂಶುಪಾಲ ಯತೀಶ್ ಮತ್ತಿತರರು ಉಪಸ್ಥಿತರಿದ್ದರು.

ವಿಟಿಯು ಪರೀಕ್ಷೆಗಳಲ್ಲಿ ವಿವಿಸಿಇ ವಿದ್ಯಾರ್ಥಿಗಳ ಸಾಧನೆ







ಮೈಸೂರು, ಆ. 17– 2022–2023 ನೇ ಸಾಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಪರೀಕ್ಷೆಗಳಲ್ಲಿ ವಿದ್ಯಾವರ್ಧಕ ಕಾಲೇಜ್ ಆಫ್ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಗಮನಾರ್ಹ ಸಾಧನೆ ಮಾಡಿದ್ದಾರೆ. ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ (ಸಿಎಸ್‌ಇ) ವಿಭಾಗದ ಅನುಷಾ ಸುಬ್ರಹ್ಮಣ್ಯಂ 3ನೇ ರ‍್ಯಾಂಕ್, ಸಿವಿಲ್ ಇಂಜಿನಿಯರಿಂಗ್ ವಿಭಾಗದ ಸುಷ್ಮಾ ಯುಬಿ 4ನೇ ರ‍್ಯಾಂಕ್, ಮತ್ತು ಎಲೆಕ್ಟ್ರಿಕಲ್ಸ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ (ಇಇಇ) ವಿಭಾಗದ ಕುಸುಮಾ ಎಸ್ ಕೂಡ 4ನೇ ರ‍್ಯಾಂಕ್ ಪಡೆದಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪ್ರೀತಿ ನಿರಾಕರಿಸಿದ್ದಕ್ಕೆ 12 ವರ್ಷದ ಬಾಲಕಿಯನ್ನು ತಾಯಿಯ ಎದುರೇ 10 ಬಾರಿ ಇರಿದು ಕೊಂದ ಪಾಗಲ್ ಪ್ರೇಮಿ

ಮುಂಬೈ, ಆ.17– ಇಲ್ಲಿನ ಕಲ್ಯಾಣ್ ಪ್ರದೇಶದಲ್ಲಿ 12 ವರ್ಷದ ಬಾಲಕಿಯ ಕೊಲೆ ಪ್ರಕರಣ ಬೆಳಕಿಗೆ ಬಂದಿದೆ. ಯುವಕನೊಬ್ಬ ಬಾಲಕಿಯ ತಾಯಿಯ ಎದುರೇ ಚಾಕುವಿನಿಂದ ಇರಿದು ಹತ್ಯೆ ಮಾಡಿದ್ದಾನೆ.

ಬಾಲಕಿಗೆ ಒಟ್ಟು 10 ಬಾರಿ ಇರಿದಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಹಲ್ಲೆ ಬಳಿಕ ಯುವಕ ತಪ್ಪಿಸಿಕೊಳ್ಳಲು ಯತ್ನಿಸಿದ್ದು, ಸ್ಥಳೀಯರು ಆತನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಯುವಕ ಕಳುಹಿಸಿದ ಪ್ರೇಮ ಪ್ರಸ್ತಾಪವನ್ನು ಹುಡುಗಿ ತಿರಸ್ಕರಿಸಿದ್ದರಿಂದ ಆಕ್ರೋಶಗೊಂಡ ಯುವಕ ಆಕೆಯನ್ನು ಚಾಕುವಿನಿಂದ ಇರಿದು ಹತ್ಯೆಗೈದಿದ್ದಾನೆ.



ಮೈಸೂರು ವಿಜಯನಗರ 2ನೇ ಹಂತದ ಹಿರಿಯ ನಾಗರಿಕರ ಹಿತರಕ್ಷಣಾ ಸಮಿತಿ ವತಿಯಿಂದ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು. ಸಮಿತಿಯ ಅಧ್ಯಕ್ಷ ಶ್ರೀಕಾಂತ ಬಡಿಗೇರ, ಬಿ.ಎನ್.ಶ್ರೀಕಂಠಯ್ಯ ಹಾಗೂ ಬಡಾವಣೆ ನಿವಾಸಿಗಳು ಹಾಜರಿದ್ದರು.



ದಶಕದ ನಂತರ 'ಸಂಜು ವೆಡ್ಸ್ ಗೀತಾ-2'

12 ವರ್ಷಗಳ ಹಿಂದೆ ತೆರೆಕಂಡಿದ್ದ 'ಸಂಜು ವೆಡ್ಸ್ ಗೀತಾ' ತನ್ನ ಹಾಡುಗಳ ಮೂಲಕವೇ ಹೆಚ್ಚು ಜನಪ್ರಿಯವಾಗಿತ್ತು. ಈಗ ಆ ಚಿತ್ರದ ಸೀಕ್ವೆಲ್ 'ಸಂಜು ವೆಡ್ಸ್ ಗೀತಾ-2' ಸೆಟ್ಟೇರಿದೆ. ನಾಗಶೇಖರ್ ಅವರೇ ನಿರ್ದೇಶನ ಮಾಡುತ್ತಿದ್ದು, ಮೊದಲ ಭಾಗದಲ್ಲಿದ್ದ ಬಹುತೇಕರು ಈ ಚಿತ್ರದಲ್ಲೂ ಇರುತ್ತಾರೆ. ಫಾರ್ ಎ ಛೇಂಜ್ ರಮ್ಯಾ ಬದಲು ಇಲ್ಲಿ ರಚಿತಾರಾಮ್ ನಾಯಕಿಯಾಗಿದ್ದಾರೆ. ಇತ್ತೀಚೆಗೆ ಚಿತ್ರದ ಮುಹೂರ್ತ ಸಮಾರಂಭ ನೆರವೇರಿತು.

ಈ ಸಂದರ್ಭದಲ್ಲಿ ಮಾತನಾಡಿದ ನಾಗಶೇಖರ್, ನನಗೆ ಮೊದಲು ಅವಕಾಶ ನೀಡಿದ ಎಸ್.ಮಹೇಂದರ್ ಅವರಿಂದು ನಮ್ಮ ಚಿತ್ರದ ಟೀಸರ್ ಬಿಡುಗಡೆ ಮಾಡಿದರು. 5 ವರ್ಷಗಳ ಹಿಂದೆಯೇ ಈ ಚಿತ್ರವನ್ನು ಪ್ರಾರಂಭಿಸಬೇಕಿತ್ತು. ಆದರೆ ನಾನು ತೆಲುಗು, ತಮಿಳು ಕಡೆ ಹೋಗಿದ್ದರಿಂದ ಆಗಲಿಲ್ಲ. ರಮ್ಯಾ ಅವರು ರಾಜಕೀಯದಲ್ಲಿ ಬ್ಯುಸಿ ಇರೋದ್ರಿಂದ ನಾಯಕಿ ಪಾತ್ರವನ್ನು ರಚಿತಾರಾಮ್ ಮಾಡಲಿದ್ದಾರೆ. ನಾನು ಕಥೆಯ ಜೊತೆ ಹಾಡುಗಳಿಗೂ ಹೆಚ್ಚು ಪ್ರಾಮುಖ್ಯತೆ ಕೊಡುತ್ತೇನೆ. ಶ್ರೀಧರ್ ಸಂಭ್ರಮ್ ಅವರಿಗೆ ರಾತ್ರಿ 12 ಗಂಟೆಗೆ ಕಾಲ್ ಮಾಡಿ ಹಾಡುಗಳ ಸನ್ನಿವೇಶ ವಿವರಿಸಿದ್ದೇನೆ. ಅವರು ಅದ್ಭುತವಾದ 5 ಹಾಡುಗಳನ್ನು ಕೊಟ್ಟಿದ್ದಾರೆ ಎಂದರು. ಶ್ರೀನಗರ ಕಿಟ್ಟಿ, ರಚಿತಾ ರಾಮ್ ಅಭಿನಯದ ಹಾಡಿನ ಮುಹೂರ್ತ ದೃಶ್ಯಕ್ಕೆ ಶ್ರೀಮತಿ ಅಶ್ವಿನಿ ಪುನೀತ್‌ರಾಜ್‌ಕುಮಾರ್ ಕ್ಲಾಪ್ ಮಾಡಿದರೆ, ನಾಗಶೇಖರ್ ತಾಯಿ ವರಲಕ್ಷ್ಮಿ ಕ್ಯಾಮರಾ ಸ್ವಿಚ್ ಆನ್ ಮಾಡಿದರು. ಛಲವಾದಿ ಕುಮಾರ್ ಹಾಗೂ ನಾರಾಯಣ ಎಂಸಿ ಚಿತ್ರದ ನಿರ್ಮಾಪಕರು.

ನಾಯಕಿ ರಚಿತಾ ಮಾತನಾಡಿ, ನಾಗಶೇಖರ್ ಅವರ ಜೊತೆ ಫಸ್ಟ್‌ಟೈಮ್ ಕೆಲಸ ಮಾಡುತ್ತಿದ್ದೇನೆ. ಚಿತ್ರದ ಬಗ್ಗೆ ಅವರಿಗೆ ಡೆಡಿಕೇಶನ್ ಜಾಸ್ತಿ. ಅದನ್ನು ಫೋಟೋ ಶೂಟ್ ಸಮಯದಲ್ಲೇ ನೋಡಿದೆ. ಈ ಪಾತ್ರಕ್ಕೆ ನ್ಯಾಯ ಒದಗಿಸುತ್ತೇನೆ ಎಂದರು. ನಾಯಕ ಕಿಟ್ಟಿ ಮಾತನಾಡಿ, ನಾಗಶೇಖರ್ ಕಥೆಗೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತಾರೆ. ನನ್ನ ಲ್ಯಾಂಡ್‌ಮಾರ್ಕ್ ಸಿನಿಮಾಗಳಲ್ಲಿ 'ಸಂಜು ವೆಡ್ಸ್ ಗೀತಾ' ಕೂಡ ಒಂದು. ಅದ್ಭುತವಾದ ಪ್ರೇಮಕಥೆಯೊಂದಿಗೆ ಮತ್ತೆ ಬರುತ್ತಿದ್ದೇವೆ. ಮೊದಲ ಚಿತ್ರಕ್ಕಿಂತ ಈ ಚಿತ್ರದ ಪಾತ್ರ ಇನ್ನೂ ಚೆನ್ನಾಗಿದೆ. ರಚಿತಾರಾಮ್ ಅವರ ಜೊತೆ ಮೊದಲ ಬಾರಿಗೆ ತೆರೆ ಹಂಚಿಕೊಳ್ಳುತ್ತಿದ್ದೇನೆ ಎಂದರು. ನಂತರ ಸಂಗೀತ ನಿರ್ದೇಶಕ ಶ್ರೀಧರ್ ವಿ.ಸಂಭ್ರಮ್, ಛಾಯಾಗ್ರಾಹಕ ಸತ್ಯ ಹೆಗಡೆ, ಸಾಹಿತಿ ಕವಿರಾಜ್ ಚಿತ್ರ ಕುರಿತಂತೆ ಮಾತನಾಡಿದರು. ಅಭಿಷೇಕ್ ಅಂಬರೀಶ್, ಆದಿತ್ಯ, ನಿರ್ಮಾಪಕ ಕಾರ್ತಿಕ್‌ಗೌಡ ಇತರರು ಅತಿಥಿಯಾಗಿದ್ದರು.



'ಘೋಸ್ಟ್'ನಲ್ಲಿ ಬೀರಬಲ್ ಆದ ನಿರ್ದೇಶಕ ಶ್ರೀನಿ

ಪ್ರತಿಷ್ಠಿತ ಸಂದೇಶ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ಸಂದೇಶ್ ನಾಗರಾಜ್ ಅವರು ಅರ್ಪಿಸಿ, ಸಂದೇಶ್ ಎನ್. ನಿರ್ಮಾಣ ಹಾಗೂ ಶ್ರೀನಿ ನಿರ್ದೇಶನದ ಬಹು ನಿರೀಕ್ಷಿತ ಘೋಸ್ಟ್ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದೆ.

ಇತ್ತೀಚೆಗೆ ಈ ಚಿತ್ರದ ಚಿತ್ರೀಕರಣಕ್ಕೆ ಬೆಂಗಳೂರಿನಲ್ಲಿ ಕುಂಬಳಕಾಯಿ ಒಡೆಯಲಾಗಿದೆ. ವಿಶೇಷವೆಂದರೆ ಈ ಚಿತ್ರದಲ್ಲಿ ನಿರ್ದೇಶಕ ಶ್ರೀನಿ ಅವರು 'ಬೀರ್‌ಬಲ್' ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಈ ಹಿಂದೆ ಶ್ರೀನಿ ಅವರು ತಮ್ಮ ನಿರ್ದೇಶನದ 'ಬೀರ್‌ಬಲ್' ಚಿತ್ರದಲ್ಲಿ ಲಾಯರ್ ಬೀರ್‌ಬಲ್ ಆಗಿ ಅಭಿನಯಿಸಿದ್ದರು. ಈಗ ಮತ್ತೆ 'ಘೋಸ್ಟ್' ಚಿತ್ರದಲ್ಲಿ 'ಬೀರ್‌ಬಲ್' ಆಗಿಯೇ ಅಭಿನಯಿಸಿರುವುದು ಕುತೂಹಲ ಮೂಡಿಸಿದೆ. 'ಬೀರ್‌ಬಲ್' ಭಾಗ 2 ಬರಬಹುದಾ ಎಂಬ ಪ್ರಶ್ನೆಯನ್ನೂ ಸಹ ಹುಟ್ಟು ಹಾಕಿದೆ. ಈಗಾಗಲೇ ಬಿಡುಗಡೆಯಾಗಿರುವ 'ಘೋಸ್ಟ್' ಚಿತ್ರದ ಫಸ್ಟ್‌ಲುಕ್, ಬಿಗ್ ಡ್ಯಾಡಿ ಟೀಸರ್ ಅಭಿಮಾನಿಗಳ ಮನಗೆದ್ದಿದೆ. ಚಿತ್ರವನ್ನು ತೆರೆಯ ಮೇಲೆ ನೋಡುವ ಕಾತುರವನ್ನು ಅಭಿಮಾನಿಗಳಲ್ಲಿ ಹೆಚ್ಚಿಸಿದೆ. ಹ್ಯಾಟ್ರಿಕ್ ಹೀರೋ ಶಿವರಾಜಕುಮಾರ್, ಅನುಪಮ್ ಖೇರ್, ಜಯರಾಂ, ಸತ್ಯಪ್ರಕಾಶ್, ಪ್ರಶಾಂತ್ ನಾರಾಯಣನ್, ದತ್ತಣ್ಣ, ಅಭಿಜಿತ್, ಶ್ರೀನಿ ಮುಂತಾದವರು ಈ ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ.



ಕೊಲೆಯ ಸುತ್ತ ಅನುಮಾನದ ಹುತ್ತ 'ಪರಿಮಳ ಡಿಸೋಜಾ'

ಇತ್ತೀಚೆಗೆ ಮರ್ಡರ್ ಮಿಸ್ಟ್ರಿ ಆಧಾರಿತ ಚಿತ್ರಗಳೇ ಹೆಚ್ಚಾಗಿ ತೆರೆಗೆ ಬರುತ್ತಿವೆ. ಬಿಡುಗಡೆಗೆ ಸಿದ್ಧವಾಗಿರುವ ಪರಿಮಳ ಡಿಸೋಜಾ ಕೂಡ ಅದೇ ಜಾನರ್ ಚಿತ್ರ. ಒಂದು ಕೊಲೆಯ ಸುತ್ತ ನಡೆಯುವ ಕುತೂಹಲಕರ ಘಟನೆಗಳನ್ನು ಒಳಗೊಂಡ ಫ್ಯಾಮಿಲಿ ಎಂಟರ್‌ಟೈನರ್ ಇದಾಗಿದ್ದು, ವಿನೋದ್ ಶೇಷಾದ್ರಿ ಅವರು ನಿರ್ಮಾಣದ ಜೊತೆಗೆ ಚಿತ್ರದ ನಾಯಕನಾಗಿಯೂ ನಟಿಸಿದ್ದಾರೆ. ಚಿತ್ರದಲ್ಲಿ ಕೆ.ಕಲ್ಯಾಣ್ ರಚಿಸಿದ ತಾಯಿ ಸೆಂಟಿಮೆಂಟ್ ಹಾಡನ್ನು ಜೋಗಿ ಪ್ರೇಮ್ ಹಾಡಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ನಡೆಯಿತು.

ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ನಿರ್ಮಾಪಕ ಕಮ್ ನಾಯಕ ವಿನೋದ್ ಶೇಷಾದ್ರಿ, ನಾನು ಈ ಚಿತ್ರವನ್ನು ನಿರ್ಮಾಣ ಮಾಡುವ ಜೊತೆಗೆ ಪೊಲೀಸ್ ಆಫೀಸರ್ ಪಾತ್ರವನ್ನು ಸಹ ನಿರ್ವಹಿಸಿದ್ದೇನೆ. ಜೊತೆಗೆ ಚಿತ್ರದ ಗೀತೆಗೆ ಸಾಹಿತ್ಯ ಕೂಡ ಬರೆದಿದ್ದೇನೆ. ಇದೊಂದು ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಒಳಗೊಂಡ ಆ್ಯಕ್ಷನ್, ಸೆಂಟಿಮೆಂಟ್ ಜೊತೆಗೆ ಫ್ಯಾಮಿಲಿ ಮನರಂಜನೆ ಇರುವ ಸಿನಿಮಾ. ಒಂದು ಮರ್ಡರ್ ನಡೆದಾಗ ಅದರ ತನಿಖೆಯ ಸುತ್ತ ಈ ಸಿನಿಮಾದ ಕಥೆ ಸಾಗುತ್ತದೆ. ಚಿತ್ರದಲ್ಲಿ ಒಟ್ಟು 107 ಜನ ಕಲಾವಿದರು ನಟಿಸಿದ್ದಾರೆ ಎಂದು ಹೇಳಿದರು. ನಿರ್ದೇಶಕ ಡಾ.ಗಿರಿಧರ್ ಚಿತ್ರದ ಕಂಟೆಂಟ್ ಬಗ್ಗೆ ಮಾತನಾಡುತ್ತಾ, ಹಿಂದೂ ಕುಟುಂಬದ ಮನೆಗೆ ಕ್ರಿಶ್ಚಿಯನ್ ಹುಡುಗಿಯೊಬ್ಬಳು ಸೊಸೆಯಾಗಿ ಬರುತ್ತಾಳೆ. ಎಲ್ಲವೂ ಚೆನ್ನಾಗಿಯೇ ನಡೆಯುತ್ತಿರುವಾಗ ಘಟನೆಯೊಂದು ನಡೆಯುತ್ತದೆ. ಆ ಘಟನೆ ಏನು? ಅದರಿಂದ ಏನೇನೆಲ್ಲಾ ಪ್ರಾಬ್ಲಮ್ ಆಗುತ್ತದೆ ಎನ್ನುವುದೇ ಈ ಚಿತ್ರದ ಕಥಾವಸ್ತು. ಫ್ಯಾಮಿಲಿ ಸಬ್ಜೆಕ್ಟ್ ಜೊತೆಗೆ ಸಸ್ಪೆನ್ಸ್ ಥ್ರಿಲ್ಲರ್ ಶೈಲಿಯಲ್ಲಿ, ಕ್ವಾಲಿಟಿಯಲ್ಲಿ ಎಲ್ಲೂ ಕಾಂಪ್ರಮೈಸ್ ಆಗದೆ ಚಿತ್ರವನ್ನು ಅದ್ದೂರಿಯಾಗಿ ನಿರ್ಮಿಸಿದ್ದೇವೆ. ನಮ್ಮ ಚಿತ್ರದಲ್ಲಿ ಹೀರೋ ಪಾತ್ರವಿಲ್ಲ, ಕಥೆಯೇ ನಾಯಕ ಎಂದು ಹೇಳಿದರು. ನಂತರ ನಾಯಕನ ತಾಯಿಯ ಪಾತ್ರಧಾರಿ ಹಿರಿಯ ನಟಿ ಭವ್ಯ ಮಾತನಾಡಿ, ಚಿತ್ರದಲ್ಲಿ ಸಸ್ಪೆನ್ಸ್ ಕಥೆಯನ್ನು ತುಂಬಾ ಚೆನ್ನಾಗಿ ಹೇಳಿಕೊಂಡು ಹೋಗಿದ್ದಾರೆ. ಕೊರೊನಾ ಟೈಮ್‌ನಲ್ಲಿ ಈ ಚಿತ್ರದ ಶೂಟಿಂಗ್ ಶುರುವಾಗಿತ್ತು. ಸಿನಿಮಾ ಅದ್ಭುತವಾಗಿ ಮೂಡಿಬಂದಿದೆ ಎಂದು ಹೇಳಿದರು.

ಅರ್ಚನಾ ಕೊಟ್ಟಿಗೆಗೆ ಅವಕಾಶ ಸಾಲು ಸಾಲು




ಕನ್ನಡ ಚಿತ್ರರಂಗದಲ್ಲಿ ವಿಭಿನ್ನ ಪಾತ್ರಗಳನ್ನು ನಿರ್ವಹಿಸುವ ಮೂಲಕವೇ ಗುರುತಿಸಿಕೊಂಡಿರುವ ಅಚ್ಚ ಕನ್ನಡತಿ ಅರ್ಚನಾ ಕೊಟ್ಟಿಗೆ. ತನ್ನ ಸ್ನಿಗ್ಧ ಸೌಂದರ್ಯದ ಮೂಲಕವೇ ಕನ್ನಡ ಪ್ರೇಕ್ಷಕರ ಮನದಲ್ಲಿ ಅಚ್ಚಳಿಯದ ಛಾಪು ಮೂಡಿಸಿರುವ ಅರ್ಚನಾಗೆ ಸಮಾಜಕ್ಕೆ ಸಂದೇಶ ಕೊಡುವಂಥ ಪಾತ್ರಗಳನ್ನು ಮಾಡಬೇಕು ಎನ್ನುವ ಆಸೆಯಿದೆ. ಈ ವರ್ಷ ಅವರು ನಿರೀಕ್ಷಿಸಿದಂತಹ ಅವಕಾಶಗಳೇ ಹೆಚ್ಚಾಗಿ ಅವರನ್ನರಸಿ ಬರುತ್ತಿವೆ. ಸದ್ಯ ಅವರು ಅಭಿನಯಿಸಿರುವ ಸಾಕಷ್ಟು ಚಿತ್ರಗಳು ಬಿಡುಗಡೆಗೆ ಸಾಲು ಸಾಲಾಗಿ ನಿಂತಿವೆ.

ಸದ್ಯ ಯಶಸ್ವೀ ಪ್ರದರ್ಶನ ಕಾಣುತ್ತಿರುವ 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಚಿತ್ರದಲ್ಲೂ ಅರ್ಚನಾ ಕೊಟ್ಟಿಗೆ ಒಂದೊಳ್ಳೆ ಪಾತ್ರಕ್ಕೆ ಜೀವ ತುಂಬಿದ್ದಾರೆ. ಇದರ ಬೆನ್ನಲ್ಲೇ ಅರ್ಚನಾ ನಟಿಸಿರುವ ಬಯಲು ಸೀಮೆ, ಎಲ್ಲರ ಕಾಲೆಳೆಯುತ್ತೆ ಕಾಲ, ಜುಗಲ್‌ಬಂದಿ ಮುಂತಾದ ಚಿತ್ರಗಳು ಬಿಡುಗಡೆಯ ಹೊಸ್ತಿಲಲ್ಲಿವೆ. ಈ ಎಲ್ಲಾ ಚಿತ್ರಗಳಲ್ಲಿ ಅರ್ಚನಾ ಬೇರೆ ಬೇರೆ ಶೇಡ್ ಇರುವ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ.

'ಜುಗಲ್‌ಬಂದಿ' ಎನ್ನುವ ಚಿತ್ರದಲ್ಲಿ ಅವರು ನೆಗೆಟಿವ್ ಶೇಡಿನ ಪಾತ್ರ ಮಾಡಿದರೆ, 'ಬಯಲು ಸೀಮೆ' ಚಿತ್ರದಲ್ಲಿ ಕಾಲೇಜು ಹುಡುಗಿಯಾಗಿ ಕಾಣಿಸಿಕೊಂಡಿದ್ದಾರೆ. ಇನ್ನು 'ಎಲ್ಲರ ಕಾಲೆಳೆಯುತ್ತೆ ಕಾಲ' ಸಿನಿಮಾದಲ್ಲಿ ಚಂದನ್ ಶೆಟ್ಟಿ ಜೊತೆ ಹಳ್ಳಿಗಾಡಿನ ಬಜಾರಿಯಾಗಿ ನಟಿಸಿದ್ದಾರೆ. ಈ ವರ್ಷ ಈ ಎಲ್ಲಾ ಚಿತ್ರಗಳೂ ಒಂದರ ಹಿಂದೊಂದರಂತೆ ಬಿಡುಗಡೆಗೊಳ್ಳಲಿವೆ.

2018ರಲ್ಲಿ 'ಅರಣ್ಯಕಾಂಡ' ಚಿತ್ರದ ಮೂಲಕ ಬಣ್ಣ ಹಚ್ಚಿದ ಅರ್ಚನಾ, ಆನಂತರ 'ವಾಸು ನಾನ್ ಪಕ್ಕಾ ಕಮರ್ಶಿಯಲ್', 'ಮೇಡ್ ಇನ್ ಬೆಂಗಳೂರು', 'ಡಿಯರ್ ಸತ್ಯಾ', 'ಕಟಿಂಗ್‌ಶಾಪ್', 'ಹೊಂದಿಸಿ ಬರೆಯಿರಿ', 'ವಿಜಯಾನಂದ' ಸೇರಿದಂತೆ ಹಲವಾರು ಸಿನಿಮಾಗಳಲ್ಲಿ ನಟಿಸಿ ಸೈ ಎನಿಸಿಕೊಂಡಿದ್ದಾರೆ. ಕಡಿಮೆ ಅವಧಿಯಲ್ಲಿ ಹೆಚ್ಚು ಸಿನಿಮಾಗಳಲ್ಲಿ ನಟಿಸಿರುವ ಅರ್ಚನಾಗೆ ಕಲ್ಪನಾ, ಮಂಜುಳಾರಂತಹ ಕಲಾವಿದೆಯರು ಮಾಡಿದ ಪಾತ್ರಗಳನ್ನು ನಿರ್ವಹಿಸಬೇಕೆಂಬ ಆಸೆಯಿದೆ. ಇದರ ಜೊತೆ ಮತ್ತೊಂದಷ್ಟು ಅವಕಾಶಗಳೂ ಅವರನ್ನರಸಿ ಬರುತಿವೆ.

ಸಿನಿಪದಬಂಧ-487



ಹೆಸರು ________

ವಿಳಾಸ ________

ದೂರವಾಣಿ ಸಂಖ್ಯೆ ________

ವಿಜೇತರು: ಎಂ. ರಂಗಸ್ವಾಮಿ S/O ಲೇಟ್ ಮುನಿಯಯ್ಯ, #27, ಉತ್ತವಳ್ಳಿ, ಚಾಮರಾಜನಗರ ತಾಲೂಕು ಮತ್ತು ಜಿಲ್ಲೆ

ಎಡದಿಂದ ಬಲಕ್ಕೆ

1. ಕುಮಾರತ್ರಯರಲೊಬ್ಬರ ಮೊಮ್ಮಗನಿಗೆ ನಡೆದ "ಸಿಂಹಾಸನಾರೋಹಣ" 5
5. ವಲ್ಲಿ ನಾಯಗಮ್ ನಿರ್ದೇಶನದಲ್ಲಿ ಕಲ್ಯಾಣ್ ಕುಮಾರ್ ತಪ್ಪಿತಸ್ಥನಲ್ಲ 5
6. ವಿಷ್ಣುವರ್ಧನ್ ಅಭಿನಯದಲ್ಲಿ ಮಂಜುವಿನ ಸ್ಫೋಟ! 4
9. ಸಿ.ವಿ. ಶಿವಶಂಕರ್ ನಿರ್ದೇಶನದಿ ಡಿಗ್ರಿ ಪಡೆದಾತ 5
11. ವಿನೋದ್ ಆಳ್ವಾನ ಕುಬ್ಜ ಪ್ರಪಂಚ 5
13. ಪಿ. ಲಂಕೇಶ್ ಅವರ ಹೋಲಿಕೆಯಲ್ಲಿ ವ್ಯತ್ಯಾಸವಿಲ್ಲ! 4
16. ವಂಶವೃಕ್ಷ ಚಿತ್ರಕ್ಕೆ ಗಿರೀಶ್ ಕಾರ್ನಾಡ್ ಜೊತೆಯಾದ ನಿರ್ದೇಶಕ 5
17. ಮಿಥುನ್ ತೇಜಸ್ವಿ - ಛಾಯಾಸಿಂಗ್ ಅಭಿನಯದ ಚಿತ್ರ 5

ಮೇಲಿನಿಂದ ಕೆಳಕ್ಕೆ

1. ಅನಿಲ್ ಕಪೂರ್ - ಲಕ್ಷ್ಮೀ ಅಭಿನಯಕ್ಕೆ ಮಣಿರತ್ನಮ್ ನಿರ್ದೇಶನವಿದೆ 8
2. ಭವತಿ _ _ _ _ 4
3. ಪ್ರಭಾಕರ್ ಇಲ್ಲೇ ಎಡದಿಂದ ಬಲಕ್ಕೆ 5 ರಲ್ಲಿರುವವನಿಗೆ ವಿರುದ್ಧವಾಗಿದ್ದಾನೆ 4
4. ನಿನಗಾಗಿ ಚಿತ್ರದ ನಾಯಕಿ 3
5. ಶಶಿಕುಮಾರ್ - ಚರಣ್ ರಾಜ್ ಇಬ್ಬರಿಗೂ ಎಸ್. ನಾರಾಯಣ್ ಕೊಟ್ಟ ಪೆಟ್ಟು 3
7. ಪ್ರಾಣಿಯೊಂದರ ಮೇಲೆ ಬಿದ್ದ ಊರದೇವಿಯ ದೃಷ್ಟಿ! 8
8. ರಾಕ್ ಲೈನ್ ವೆಂಕಟೇಶ್ "ಪರಾಕ್ರಾಮಿ" 2
10. ಸಂಯುಕ್ತ ಚಿತ್ರದ ನಾಯಕಿ 2
12. ಪ್ರಭಾಕರ್ ಬರೆದ ನೂತನ ಕವಿತೆ 4
13. ಅಂಬರೀಷ್ ಸೋಲಿಸಲಾಗದವನು 3
14. _ _ _ _ ಪಾನವಾಲ 4
15. ವಿಷ್ಣುವಿಗೆ 'ಶುಭಮಿಲನ'ಗೊಂಡಾಕೆ 3



ಉಮ್ಮತ್ತೂರು ಇಂದುಶೇಖರ್

ಮೊ.9880820462

ಸಿನಿ ಪದಬಂಧ 486ರ ಉತ್ತರ

ಅ	ಗ್ನಿ	ಪ	ರೀ	ಕ್ಷೆ			ಪಿ		ಅ	
ದೇ		ದ್ಮ			ನಿ	ಧಿ	ಸು	ಬ್ಬ	ಯ್ಯ	
ರಾ		ವ್ಯೂ			ರ್ಣ		ಮಾ		ಪ್ಪ	
ಗ		ಹ	ರಿ	ಪ್ರಿ	ಯ		ತು			ಗೆ
ಅ								ಶಾ		ಲು
ದೇ	ವ	ರ	ಮ	ನೆ		ಪ್ರೇ	ಮ	ಪ	ಲ್ಲ	ವಿ
ಹಾ		ಮ್ಯ								ನ
ಡು			ಪ್ರೇ		ಮಾ	ತೃ	ಭೂ	ಮಿ		ಸ
	ಕಂ		ಮ		ಥ			ಲ್ತ್ರಿ		ರ
	ಪ	ರ	ಮ	ಶಿ	ವ			ಮಾ		ದಾ
	ನ		ಯಿ			ದ	ಶಾ	ವ	ತಾ	ರ

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಕೊಂಡಂಗೇರಿಯಲ್ಲಿ ಕೆಸರುಗದ್ದೆ ಕ್ರೀಡಾಕೂಟ

ಕುಂಜಿಲ ಚಾಲೆಂಜರ್ಸ್, ಎಮ್ಮೆಮಾಡು ಆರ್.ವೈ.ಸಿ. ತಂಡಗಳಿಗೆ ಚಾಂಪಿಯನ್ ಪಟ್ಟ



ಕೆಸರುಗದ್ದೆ ವಾಲಿಬಾಲ್ ಪಂದ್ಯಾವಳಿಯಲ್ಲಿ ಚಾಂಪಿಯನ್ ಪಟ್ಟಕ್ಕೇರಿದ ಎಮ್ಮೆಮಾಡು ಆರ್‌ವೈಸಿ ತಂಡ



ಕೆಸರುಗದ್ದೆ ಫುಟ್ಬಾಲ್ ಪಂದ್ಯಾವಳಿಯಲ್ಲಿ ವಿನ್ನರ್ಸ್ ಪ್ರಶಸ್ತಿ ಗಳಿಸಿದ ಕುಂಜಿಲ ಚಾಲೆಂಜರ್ಸ್ ತಂಡ

ಪೊನ್ನಂಪೇಟೆ, ಆ.17– ದೇಶದ 77ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಕೊಂಡಂಗೇರಿಯ ಬುಲ್ಲೆಟ್ ಫ್ರೆಂಡ್ಸ್ ತಂಡದ ಆಶ್ರಯದಲ್ಲಿ ನಡೆದ 5ನೇ ವರ್ಷದ ಜಿಲ್ಲಾ ಮಟ್ಟದ ಕೆಸರುಗದ್ದೆ ಕ್ರೀಡಾಕೂಟದ ಫುಟ್ಬಾಲ್ ಪಂದ್ಯಾವಳಿಯಲ್ಲಿ ಕುಂಜಿಲ ಚಾಲೆಂಜರ್ಸ್ ಮತ್ತು ವಾಲಿಬಾಲ್ ಪಂದ್ಯಾವಳಿಯಲ್ಲಿ ಎಮ್ಮೆಮಾಡಿನ ಆರ್. ವೈ. ಸಿ. ತಂಡ ಚಾಂಪಿಯನ್ ಪಟ್ಟವನ್ನು ಮುಡಿಗೇರಿಸಿಕೊಂಡಿತು.

ಕೊಂಡಂಗೇರಿಯ ಅಮ್ಮತಿ ರಸ್ತೆಯಲ್ಲಿರುವ ಡಾ. ಮುಕ್ಕಾಟಿರ ಸಿ. ಕಾರ್ಯಪ್ಪ ಅವರ ಭತ್ತದ ಗದ್ದೆಯಲ್ಲಿ ನಡೆದ ಈ ಕೆಸರುಗದ್ದೆ ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದ ಜಿಲ್ಲೆಯ ವಿವಿಧ ಭಾಗಗಳಿಂದ ಬಂದ ಕ್ರೀಡಾಳುಗಳು ದಿನವಿಡೀ ಕೆಸರಿನಲ್ಲಿ ಮಿಂದೆದ್ದು, ಕ್ರೀಡಾಕೂಟವನ್ನು ಮತ್ತಷ್ಟು ರಂಗೇರಿಸುವಲ್ಲಿ ಯಶಸ್ವಿಯಾದರು.

ವಿನ್ನರ್ಸ್ ಪ್ರಶಸ್ತಿ ಪಡೆಯುವ ತವಕದಲ್ಲಿ ಪ್ರಬಲ ಸ್ಪರ್ಧೆಯೊಡ್ಡಿದ ಆತಿಥೇಯ ಕೊಂಡಂಗೇರಿಯ ಬುಲ್ಲೆಟ್ ಫ್ರೆಂಡ್ಸ್ ತಂಡ ಫುಟ್ಬಾಲ್ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದರೆ, ಬಾಣಂಗಾಲದ ಸಿಗ್ನೇಚರ್ ತಂಡ ವಾಲಿಬಾಲ್ ಪಂದ್ಯಾವಳಿಯಲ್ಲಿ ಎದುರಾಳಿ ತಂಡದೆದುರು ಶರಣಾಗಿ ರನ್ನರ್ಸ್ ಪ್ರಶಸ್ತಿಗೆ ತೃಪ್ತಿಪಟ್ಟುಕೊಳ್ಳಬೇಕಾಯಿತು.

ಸಂಜೆ ಕತ್ತಲಾಗುವವರೆಗೂ ರೋಚಕವಾಗಿ ನಡೆದ ವಾಲಿಬಾಲ್ ಪಂದ್ಯಾವಳಿಯ ಫೈನಲ್ಸ್‌ನಲ್ಲಿ ಮೊದಲ ಸೆಟ್‌ನಲ್ಲಿ ಬಾಣಂಗಾಲ ಸಿಗ್ನೇಚರ್ ತಂಡ ಮೇಲುಗೈ ಸಾಧಿಸಿತು. 2ನೇ ಸೆಟ್‌ನಲ್ಲಿ ಜಯಗಳಿಸುವ ಮೂಲಕ ಎಮ್ಮೆಮಾಡು ಆರ್. ವೈ. ಸಿ. ತಂಡ ಸೇಡು ತೀರಿಸಿಕೊಂಡಿತು. ನಂತರ 3ನೇ ಸೆಟ್‌ನಲ್ಲಿ ಎಮ್ಮೆಮಾಡು ಆರ್. ವೈ. ಸಿ. ತಂಡ ಮತ್ತೆ ಮೇಲುಗೈ ಸಾಧಿಸಿದ್ದರಿಂದ ವಿಜಯದ ಮಾಲೆಯನ್ನು ತನ್ನ ಕೊರಳಿಗೇರಿಸಿಕೊಂಡಿತು.

ವಾಲಿಬಾಲ್ ಪಂದ್ಯಾವಳಿಯಲ್ಲಿ ಬಾಣಂಗಾಲ ಸಿಗ್ನೇಚರ್ ತಂಡದ ನವೀನ್ ಅತ್ಯುತ್ತಮ ಆಟಗಾರನಾಗಿ ವಿಶೇಷ ಪ್ರಶಸ್ತಿ ಪಡೆದರೆ, ಎಮ್ಮೆಮಾಡು ಆರ್. ವೈ. ಸಿ. ತಂಡದ ಶರೀಫ್ ಅತ್ಯುತ್ತಮ ಡಿಫೆಂಡರ್ ಪ್ರಶಸ್ತಿ ಗಳಿಸಿದರು. ಫುಟ್ಬಾಲ್ ಪಂದ್ಯಾವಳಿಯಲ್ಲಿ ಕೊಂಡಂಗೇರಿ ಬುಲ್ಲೆಟ್ ಫ್ರೆಂಡ್ಸ್ ತಂಡದ ಎಸ್. ಎಂ. ಜಮಾಲ್ ಬೆಸ್ಟ್ ಶೂಟರ್ ಪ್ರಶಸ್ತಿ ಪಡೆದರೆ, ಕುಂಜಿಲ ಚಾಲೆಂಜರ್ಸ್ ತಂಡದ ನಿಜಾಮ್ ಅತ್ಯುತ್ತಮ ಗೋಲ್ ಕೀಪರ್ ಪ್ರಶಸ್ತಿಯನ್ನು ತನ್ನದಾಗಿಸಿದರು.

ಸ್ಥಳೀಯ ಗ್ರಾಪಂ ಸದಸ್ಯರಾದ ಅಬ್ದುಲ್ ರಹಿಮಾನ್ (ಅಂದಾಯಿ) ಅವರ ಅಧ್ಯಕ್ಷತೆಯಲ್ಲಿ ಸಂಜೆ ನಡೆದ ಪಂದ್ಯಾವಳಿಯ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಕೊಡಗು ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತರ ವಿಭಾಗದ ಅಧ್ಯಕ್ಷರಾದ ಪಿ. ಎ. ಹನೀಫ್, ಸಹೋದರತೆಯ ಸಂಕೇತವಾಗಿ ಜರುಗುವ ಕ್ರೀಡಾಕೂಟಗಳು ಕ್ರೀಡಾಪಟುಗಳಲ್ಲಿ ಮತ್ತು ಪ್ರೇಕ್ಷಕರಲ್ಲಿ ಪರಸ್ಪರ ಆತ್ಮೀಯತೆಯನ್ನು ಹೆಚ್ಚಿಸಲು ಪ್ರಮುಖ ಪಾತ್ರ ವಹಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮಗಳಲ್ಲಿ ಮುಖ್ಯ ಅತಿಥಿಗಳಾಗಿದ್ದ ಪೊನ್ನಂಪೇಟೆಯ ಕೂರ್ಗ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಧ್ಯಕ್ಷ ಡಾ. ಮುಕ್ಕಾಟಿರ ಸಿ. ಕಾರ್ಯಪ್ಪ, ಹಾಲುಗುಂದ ಗ್ರಾ.ಪಂ. ಅಧ್ಯಕ್ಷರಾದ ಪಂದಿಕಂಡ ದಿನೇಶ್ (ಕುಶ), ನಿವೃತ್ತ ಸೇನಾಧಿಕಾರಿ ಕ್ಯಾ. ಮುಕ್ಕಾಟಿರ ಮಾದಪ್ಪ, ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಲ್ಪಸಂಖ್ಯಾತರ ವಿಭಾಗದ ಅಧ್ಯಕ್ಷ ಕೋಳುಮಂಡ ರಫೀಕ್, ಪೊನ್ನಂಪೇಟೆ ಬ್ಲಾಕ್ ಕಾಂಗ್ರೆಸ್ ಅಲ್ಪಸಂಖ್ಯಾತರ ವಿಭಾಗದ ಅಧ್ಯಕ್ಷ ಆಲೀರ ಎಂ.ರಶೀದ್ ಕೆದಮುಳ್ಳೂರು ಗ್ರಾಪಂ ಸದಸ್ಯ ಎಂ.ಎಂ. ಇಸ್ಮಾಯಿಲ್, ಬೈರಂಬಾಡದ ಕಾಫಿ ಬೆಳೆಗಾರ ಮುಕ್ಕಾಟಿರ ನಂದ, ಕೊಂಡಂಗೇರಿ ವಲಯ ಕಾಂಗ್ರೆಸ್ ಅಧ್ಯಕ್ಷ ಎ.ಎಂ. ಅಬ್ದುಲ್ಲಾ, ನಿವೃತ್ತ ಸೈನಿಕ ಕೆ.ಎಂ. ಮೊಹಮ್ಮದ್, ಕೊಂಡಂಗೇರಿ ವಲಯ ಯುವ ಕಾಂಗ್ರೆಸ್ ಅಧ್ಯಕ್ಷ ಪಿ.ಎಚ್. ಝುಕರಿಯಾ, ದೈಹಿಕ ಶಿಕ್ಷಕ ಪಿ. ಎ.ಮುಜೀಬ್ ಮೊದಲಾದವರು ಪಾಲ್ಗೊಂಡು ವಿಜೇತ ತಂಡಗಳಿಗೆ ಬಹುಮಾನ ವಿತರಿಸಿದರು. ಕಾರ್ಯಕ್ರಮದ ಆಯೋಜಕ ಶಾಮೀರ್, ಹನೀಫ್, ರಫೀಕ್ ಮೊದಲದವರು ಉಪಸ್ಥಿತರಿದ್ದರು. ಸಲಾಂ ವೀಕ್ಷಕ ವಿವರಣೆ ನೀಡಿದರು.

ಹನಿಟ್ರ್ಯಾಪ್ ಮೂಲಕ ಬೆಂಗಳೂರಿನ ನಿವೃತ್ತ ಸರ್ಕಾರಿ ಅಧಿಕಾರಿಯಿಂದ 82 ಲಕ್ಷ ಸುಲಿಗೆ

ಕೊಡಗಿನ ಇಬ್ಬರು ಸೇರಿ ಮೂವರ ಬಂಧನ



ಮಡಿಕೇರಿ, ಆ.17–ಹನಿ ಟ್ರ್ಯಾಪ್ ಮೂಲಕ ಬೆಂಗಳೂರಿನ ನಿವೃತ್ತ ಸರ್ಕಾರಿ ಅಧಿಕಾರಿಯಿಂದ 82 ಲಕ್ಷ ರೂ. ದೋಚಿದ ಆರೋಪದ ಮೇರೆಗೆ ಕೊಡಗಿನ ಇಬ್ಬರು ಸೇರಿದಂತೆ ಮೂವರನ್ನು ಬೆಂಗಳೂರಿನ ಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೂಲತಃ ಸುಂಟಿಕೊಪ್ಪದ ಅಣ್ಣಮ್ಮ, ಬೆಟಗೇರಿಯ ಲೋಕೇಶ್ ಮತ್ತು ಈತನ ಪತ್ನಿ, ಬೆಂಗಳೂರಿನ ಸ್ನೇಹ ಬಂಧಿತರಾಗಿದ್ದು, ಬೆಂಗಳೂರಿನ ಬೊಮ್ಮನಹಳ್ಳಿಯಲ್ಲಿ ವಾಸವಾಗಿದ್ದ ಇವರು, ನಿವೃತ್ತ ಸರ್ಕಾರಿ ಅಧಿಕಾರಿ ಶ್ರೀನಗರ ನಿವಾಸಿ ಬಿ. ಸುಧೀಂದ್ರ(60) ಎಂಬುವರನ್ನು, ಹನಿಟ್ರ್ಯಾಪ್ ಮಾಡಿ 82 ಲಕ್ಷ ರೂ. ಸುಲಿಗೆ ಮಾಡಿದ್ದಲ್ಲದೇ, ಮತ್ತೆ 42 ಲಕ್ಷ ರೂ.ಗಳಿಗೆ ಬೇಡಿಕೆ ಇಟ್ಟಿದ್ದರು ಎಂದು ಆರೋಪಿಸಲಾಗಿದೆ.

ವಿವರ: ನಿವೃತ್ತ ಸರ್ಕಾರಿ ಅಧಿಕಾರಿ ಸುಧೀಂದ್ರ ಅವರ ಸ್ನೇಹಿತ ರಾಮಚಂದ್ರ ಪ್ರಭು ಎಂಬುವರು ಅಣ್ಣಮ್ಮ ಎಂಬಾಕೆಯನ್ನು ಫೋನ್ ಮೂಲಕ ಪರಿಚಯಿಸಿ, ಆಕೆಯ ಮಗನಿಗೆ ಕ್ಯಾನ್ಸರ್ ಇರುವುದರಿಂದ ಸಹಾಯ ಮಾಡುವಂತೆ ಕಳೆದ ಏಪ್ರಿಲ್ ತಿಂಗಳ ಕೊನೆಯ ವಾರದಲ್ಲಿ ತಿಳಿಸಿದ್ದರಂತೆ.

ಅದರಂತೆ ಆಕೆಯನ್ನು ಫೋನ್ ಮೂಲಕ ಸಂಪರ್ಕಿಸಿದ ಸುಧೀಂದ್ರ, ಜಯನಗರದ ರಜತಾದ್ರಿ ಹೋಟೆಲ್ ಬಳಿಗೆ ಕರೆಸಿಕೊಂಡು, ಆಕೆಯ ಕಷ್ಟ–ಸುಖಗಳನ್ನು ಆಲಿಸಿ 5 ಸಾವಿರ ರೂ. ನೀಡಿದ್ದರು. ಅಲ್ಲದೇ ಈಕೆ ಪದೇ ಪದೆ ಸುಧೀಂದ್ರ ಅವರಿಂದ ಹಣ ಪಡೆಯುತ್ತಿದ್ದು, ಮೇ ತಿಂಗಳ ಮೊದಲನೇ ವಾರದಲ್ಲಿ ಎಲೆಕ್ಟ್ರಾನಿಕ್ ಸಿಟಿಯ ಉಸ್ಕೂರು ಗೇಟ್ ಬಳಿ ಇರುವ ಓಯೋ ಹೋಟೆಲ್‌ಗೆ ಸುಧೀಂದ್ರ ಅವರನ್ನು ಕರೆಸಿಕೊಂಡು, ಪ್ರಚೋದಿಸಿ ಅವರೊಂದಿಗೆ ಲೈಂಗಿಕ ಸಂಪರ್ಕ ಹೊಂದಿದ್ದಾಳೆ. ನಂತರವೂ ಎರಡು ಬಾರಿ ಅದೇ ಹೋಟೆಲ್‌ಗೆ ಅವರನ್ನು ಕರೆಸಿಕೊಂಡು ಲೈಂಗಿಕ ಸಂಪರ್ಕ ನಡೆಸಿದ್ದು, ಅವರಿಗೆ ತಿಳಿಯದಂತೆ ವೀಡಿಯೋ ಮಾಡಿಕೊಂಡಿದ್ದಾಳೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಕೆಲ ದಿನಗಳ ನಂತರ ಸ್ನೇಹ ಎಂಬಾಕೆಯನ್ನು ಸುಧೀಂದ್ರ ಅವರಿಗೆ ಅಣ್ಣಮ್ಮ ಪರಿಚಯಿಸಿದ್ದು, ಆಕೆಯೂ ಕೂಡ ಅವರಿಂದ ಹಣ ಸಹಾಯ ಪಡೆದಿದ್ದಾಳೆ. ನಂತರ ಜೂನ್ ತಿಂಗಳ ಎರಡನೇ ವಾರದಲ್ಲಿ ಅಣ್ಣಮ್ಮ ಮತ್ತು ಸುಧೀಂದ್ರ ಅವರಿದ್ದ ಏಕಾಂತದ ಫೋಟೋಗಳನ್ನು, ಸುಧೀಂದ್ರ ಅವರಿಗೆ ಸ್ನೇಹ ಕಳುಹಿಸಿ, 75 ಲಕ್ಷ ರೂ. ಕೊಡದಿದ್ದರೆ ಈ ಫೋಟೋ ಮತ್ತು ವೀಡಿಯೋಗಳನ್ನು ಸುಧೀಂದ್ರ ಅವರ ಸ್ನೇಹಿತರು ಹಾಗೂ ಅವರ ಕಾಂಟ್ಯಾಕ್ಟ್‌ನಲ್ಲಿರುವ ಎಲ್ಲರಿಗೂ ಕಳುಹಿಸುವುದಾಗಿ ಬೆದರಿಸಿದ್ದಾಳೆ. ಹೀಗಾಗಿ ಸುಧೀಂದ್ರ ಒಟ್ಟು 82 ಲಕ್ಷ ರೂ.ಗಳನ್ನು ನೀಡಿದ್ದಾರೆ.

ಅಷ್ಟಕ್ಕೇ ನಿಲ್ಲದ ಸ್ನೇಹ ಮತ್ತು ಅಣ್ಣಮ್ಮ ಮತ್ತೆ 42 ಲಕ್ಷ ರೂ. ನೀಡುವಂತೆಯೂ, ಇಲ್ಲದಿದ್ದರೆ ಸುಧೀಂದ್ರ ಅವರ ಮಗಳನ್ನು ರೇಪ್ ಮಾಡಿಸಿ ಕೊಲೆ ಮಾಡಿಸುವುದಾಗಿಯೂ ಬೆದರಿಸಿದ್ದಾರೆ. ಅಣ್ಣಮ್ಮ ಮತ್ತು ಸ್ನೇಹಾಳ ಈ ಕೃತ್ಯಗಳಿಗೆ ಸ್ನೇಹ ಪತಿ ಲೋಕೇಶ್ ಸಹಕರಿಸಿದ್ದಾನೆ. ಈ ಹಿನ್ನೆಲೆಯಲ್ಲಿ ಸುಧೀಂದ್ರ ಅವರು ಆ.11 ರಂದು ಬೆಂಗಳೂರಿನ ಜಯನಗರ ಠಾಣೆಗೆ ದೂರು ಸಲ್ಲಿಸಿದ್ದು, ಕಾರ್ಯಪ್ರವೃತ್ತರಾದ ಪೊಲೀಸರು, ನಿನ್ನೆ ಅಣ್ಣಮ್ಮ, ಸ್ನೇಹ ಹಾಗೂ ಆಕೆಯ ಪತಿ ಲೋಕೇಶ್‌ನನ್ನು ಬಂಧಿಸಿ ಬೆಂಗಳೂರಿನ 37ನೇ ಸಿಟಿ ಸಿವಿಲ್ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಅವರೆಲ್ಲರನ್ನೂ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ನರ್ಸ್ ಮೇಲೆ ದಾಳಿ ನಡೆಸಿದ ಸಾಕುನಾಯಿ; ಮಾಲೀಕನ ವಿರುದ್ಧ ಕೇಸ್

ಮಡಿಕೇರಿ, ಆ.17– ನಾಪೋಕ್ಲು ಪೊಲೀಸ್ ಠಾಣಾ ವ್ಯಾಪ್ತಿಯ ಕೊಣಂಜಗೇರಿ ಪಾರಾಣೆ ಗ್ರಾಮದಲ್ಲಿ ಬುಧವಾರ ನರ್ಸ್ ಕೆ.ಕೆ.ಭವ್ಯ ಅವರ ಮೇಲೆ ನಡೆದ ಸಾಕುನಾಯಿ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಲೀಕ ಬಿ.ಮಾಚಯ್ಯ ಎಂಬವರ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಪೊಲೀಸ್ ಪ್ರಕಟಣೆ ತಿಳಿಸಿದೆ.

ಮನೆಯ ಸಾಕುನಾಯಿಗಳು ಯಾವುದೇ ವ್ಯಕ್ತಿಗಳ ಮೇಲೆ ದಾಳಿ ಮಾಡಿರುವ ಘಟನೆ ಕಂಡು ಬಂದಲ್ಲಿ ಸಾಕುನಾಯಿ ಮಾಲೀಕರ ಮೇಲೆ ಐಪಿಸಿ ಸೆಕ್ಷನ್ 289 ಅಡಿಯಲ್ಲಿ ಪ್ರಕರಣ ದಾಖಲಿಸಲಾಗುವುದು ಹಾಗೂ 6 ತಿಂಗಳ ಜೈಲು ವಾಸ ಮತ್ತು ದಂಡ ವಿಧಿಸಲಾಗುವುದು ಎಂದು ಕೊಡಗು ಪೊಲೀಸ್ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ. ಸಾಕುನಾಯಿ ದಾಳಿ ಮಾಡಿರುವ ಘಟನೆಗಳು ಕಂಡುಬಂದಲ್ಲಿ ಸ್ಥಳೀಯ ಪೊಲೀಸ್ ಠಾಣೆ ಅಥವಾ ತುರ್ತು ಸಹಾಯವಾಣಿ 112ಗೆ ಕರೆ ಮಾಡಿ ಮಾಹಿತಿ ನೀಡುವಂತೆ ಹಾಗೂ ಕೆಎಸ್.ಪಿ ತಂತ್ರಾಂಶದ ಮೂಲಕ ಮಾಹಿತಿ ನೀಡಿ ಸಹಕರಿಸುವಂತೆ ಅಧಿಕಾರಿಗಳು ಮನವಿ ಮಾಡಿದ್ದಾರೆ. ಮಾಹಿತಿ ಒದಗಿಸುವವರ ವಿವರ ಬಹಿರಂಗ ಪಡಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ನಾಪೋಕ್ಲು ಬಳಿ ವ್ಯಕ್ತಿ ಮೇಲೆ ಕಾಡಾನೆ ದಾಳಿ

ಮಡಿಕೇರಿ, ಆ.17– ನಾಪೋಕ್ಲು ಸಮೀಪದ ಕಕ್ಕಬ್ಬೆ ಗ್ರಾಮದಲ್ಲಿ ನಡೆದುಕೊಂಡು ಮನೆಗೆ ಹೋಗುತ್ತಿದ್ದ ವ್ಯಕ್ತಿಯೊಬ್ಬರ ಮೇಲೆ ಕಾಡಾನೆ ದಾಳಿ ಮಾಡಿದ ಘಟನೆ ನಡೆದಿದೆ. ಅಲ್ಲಿನ ನಿವಾಸಿ ಕಂಬೆಯಂಡ ಅನು ಸುಬ್ಬಯ್ಯ ಎಂಬವರೇ ಗಂಭೀರ ಗಾಯಗೊಂಡ ವ್ಯಕ್ತಿಯಾಗಿದ್ದು, ಕಾಲು ಮೂಳೆ ಮುರಿದಿದೆ. ಗಾಯಾಳುವನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರು ಖಾಸಗಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ನೆನ್ನೆ ದಿನ ಸಂಜೆ 7 ಗಂಟೆ ವೇಳೆಗೆ ಅನು ಸುಬ್ಬಯ್ಯ ಅವರು ಮನೆಯ ಕಡೆಗೆ ತೆರಳುತ್ತಿದ್ದ ಸಂದರ್ಭ ಹಿಂಬದಿಯಿಂದ ಕಾಡಾನೆ ದಾಳಿ ನಡೆಸಿ ಕಾಲಿಗೆ ಗಂಭೀರ ಗಾಯಗೊಳಿಸಿತ್ತು. ಬಳಿಕ ಗಾಯಾಳುವನ್ನು ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ನೀಡಲಾಗಿದೆ.



ಶಾಸಕ ಪೊನ್ನಣ್ಣ ಸ್ಪಂದನ: ಕಾಡಾನೆ ದಾಳಿಯ ಮಾಹಿತಿ ಅರಿತ ವಿರಾಜಪೇಟೆ ಕ್ಷೇತ್ರ ಶಾಸಕ ಎ.ಎಸ್.ಪೊನ್ನಣ್ಣ ಮತ್ತು ರಾಜ್ಯ ಕಾಂಗ್ರೆಸ್ ವಕ್ತಾರ ಸಂಕೇತ್ ಪೂವಯ್ಯ ಅವರುಗಳು ಗಾಯಳುವಿಗೆ ಸ್ಪಂದಿಸಿದ್ದಾರೆ. ಶಾಸಕರ ಸೂಚನೆಯಂತೆ ಮಡಿಕೇರಿ ಜಿಲ್ಲಾಸ್ಪತ್ರೆಗೆ ತೆರಳಿದ ಸಂಕೇತ್ ಪೂವಯ್ಯ ಗಾಯಾಳು ಅನು ಸುಬ್ಬಯ್ಯ ಅವರ ಆರೋಗ್ಯ ವಿಚಾರಿಸಿದರು. ಬಳಿಕ ಜಿಲ್ಲಾಸ್ಪತ್ರೆಯ ವೈದ್ಯರ ಶಿಫಾರಸಿನಂತೆ ಗಾಯಾಳುವನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಅಲ್ಲಿನ ವೈದ್ಯರಿಂದ ಮಾಹಿತಿ ಪಡೆದು ಉತ್ತಮ ಚಿಕಿತ್ಸೆ ನೀಡುವಂತೆ ಮನವಿ ಮಾಡಿದ್ದರು. ಗಾಯಳುವಿನ ಕುಟುಂಬಸ್ಥರನ್ನು ಭೇಟಿ ಮಾಡಿದ ಸಂಕೇತ್ ಪೂವಯ್ಯ ಸಾಂತ್ವನ ಹೇಳಿದ್ದರು. ಶಾಸಕ ಪೊನ್ನಣ್ಣ ಅವರನ್ನು ಮೊಬೈಲ್ ಮೂಲಕ ಸಂಪರ್ಕಿಸಿದ ಸಂಕೇತ್ ಪೂವಯ್ಯ, ಗಾಯಾಳು ಅನು ಸುಬ್ಬಯ್ಯ ಅವರೊಂದಿಗೆ ಮಾತುಕತೆ ನಡೆಸಿ, ಧೈರ್ಯ ತುಂಬಿದರು.

ಕಾಶ್ಮೀರದಲ್ಲಿ ನಡೆಯುವ ರಾಷ್ಟ್ರಮಟ್ಟದ ವಿಚಾರ ಸಂಕಿರಣಕ್ಕೆ ಪೊನ್ನಂಪೇಟೆ ಗ್ರಾಮ ಪಂಚಾಯಿತಿ ಆಯ್ಕೆ

ಮಡಿಕೇರಿ, ಆ.17– ಕೊಡಗಿನ ಪೊನ್ನಂಪೇಟೆ ಗ್ರಾಮ ಪಂಚಾಯಿತಿ ಉತ್ತಮ ಆಡಳಿತ ನೀಡುವಲ್ಲಿ ಇತರ ಸ್ಥಳೀಯ ಸಂಸ್ಥೆಗಳಿಗೆ ಮಾದರಿಯಾಗಿದೆ. ಪಂಚಾಯತ್ ರಾಜ್‌ನಿಂದ ಜಮ್ಮು ಮತ್ತು ಕಾಶ್ಮೀರದ ಶ್ರೀನಗರದಲ್ಲಿ ನಡೆಯುವ ರಾಷ್ಟ್ರಮಟ್ಟದ ವಿಚಾರ ಸಂಕಿರಣದಲ್ಲಿ ಭಾಗವಹಿಸಲು ಪೊನ್ನಂಪೇಟೆ ಗ್ರಾಮ ಪಂಚಾಯಿತಿಯನ್ನು ಆಯ್ಕೆ ಮಾಡಲಾಗಿದೆ.

ಆ.21 ರಿಂದ 23ರವರೆಗೆ ನಡೆಯಲಿರುವ 'ಉತ್ತಮ ಆಡಳಿತದೊಂದಿಗೆ ಪಂಚಾಯತ್' ಎಂಬ ವಿಚಾರ ಸಂಕಿರಣದಲ್ಲಿ ಪೊನ್ನಂಪೇಟೆ ಗ್ರಾಪಂ ಸೇರಿದಂತೆ ರಾಜ್ಯದ ಮೂರು ಪಂಚಾಯಿತಿಗಳು ಭಾಗವಹಿಸಲಿವೆ.

ಗ್ರಾಪಂಗಳು ಉತ್ತಮ ಆಡಳಿತದ ಆಧಾರ ಸ್ತಂಭಗಳಾಗಿದ್ದು, ಉತ್ತಮ ಆಡಳಿತ ನೀಡುವಲ್ಲಿ ಪೊನ್ನಂಪೇಟೆ ಪಂಚಾಯಿತಿ ಮಹತ್ವಾಕಾಂಕ್ಷೆಯ ಹಾದಿಯಲ್ಲಿದೆ. ವೈಜ್ಞಾನಿಕ ತ್ಯಾಜ್ಯ ವಿಂಗಡಣೆ, ಸಾರ್ವಜನಿಕ ಸ್ಥಳಗಳ ಸುಧಾರಣೆ, ಕುಂದು ಕೊರತೆಗಳಿಗೆ ತಕ್ಷಣವೇ ಪರಿಹಾರ ಮತ್ತು ವಿವಿಧ ಸರ್ಕಾರಿ ಯೋಜನೆಗಳ ಯಶಸ್ವಿ ಅನುಷ್ಠಾನದಲ್ಲಿ ಪೊನ್ನಂಪೇಟೆ ಗ್ರಾಮ ಪಂಚಾಯಿತಿ ಮುಂಚೂಣಿಯಲ್ಲಿದೆ.

ಈ ಪಂಚಾಯಿತಿ ಸಾಮಾಜಿಕ ಮಾಧ್ಯಮ ಬಳಕೆಯಲ್ಲೂ ಮುಂದಿದ್ದು, 'ಗ್ರಾಮ ವಾಣಿ' ಎಂಬ ವಾಟ್ಸಾಪ್ ಗುಂಪನ್ನು ಹೊಂದಿದೆ. ಅಲ್ಲಿ ನಿವಾಸಿಗಳು ಪಂಚಾಯತ್ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳೊಂದಿಗೆ ಸಂವಾದಿಸಬಹುದು ಮತ್ತು ತಮ್ಮ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು.

ಪೊನ್ನಂಪೇಟೆ ಪಂಚಾಯಿತಿ ಪಿಡಿಒ ಪುಟ್ಟರಾಜು ಅವರೊಂದಿಗೆ ಪಂಚಾಯಿತಿ ಅಧ್ಯಕ್ಷೆ ಗಿರಿಜಾ ವೆಂಕಟೇಶ್ ಅವರು ಈ ತಿಂಗಳಾಂತ್ಯದಲ್ಲಿ ಪಂಚಾಯಿತಿಯಲ್ಲಿ ಉತ್ತಮ ಆಡಳಿತ ಕುರಿತು ಪ್ರಬಂಧ ಮಂಡಿಸಲು ಶ್ರೀನಗರಕ್ಕೆ ತೆರಳಲಿದ್ದಾರೆ.

ಬಂಡೀಪುರ ಅರಣ್ಯ ಪ್ರದೇಶದಲ್ಲಿ ಕಟ್ಟಡ ಕಾಮಗಾರಿ; ಗೋಲ್ಡನ್ ಸ್ಟಾರ್ ಗಣೇಶ್‌ಗೆ ನೋಟಿಸ್





ಚಾಮರಾಜನಗರ, ಆ.17– ಬಂಡೀಪುರ ಅಭಯಾರಣ್ಯಕ್ಕೆ ಹೊಂದಿಕೊಂಡಿರುವ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ನಟ ಗಣೇಶ್ ಅವರ ಒಡೆತನದ ಕಟ್ಟಡ ಕಾಮಗಾರಿಯನ್ನು ನಿಲ್ಲಿಸುವಂತೆ ಬಂಡೀಪುರ ಸೂಕ್ಷ್ಮ ವಲಯ ಪರಿಸರ ಸಮಿತಿ ಸದಸ್ಯ ಕಾರ್ಯದರ್ಶಿ ನೋಟಿಸ್ ನೀಡಿದ್ದಾರೆ.

ಮುಂದಿನ 7 ದಿನಗಳೊಳಗೆ ಸೂಕ್ತ ದಾಖಲಾತಿ ಒದಗಿಸಬೇಕು. ಅಲ್ಲಿಯವರೆಗೂ ಕಾಮಗಾರಿ ನಿಲ್ಲಿಸಬೇಕು ಎಂದು ಅವರು ಸೂಚಿಸಿದ್ದಾರೆ.

ಪರಿಸರವಾದಿಗಳ ಆಕ್ಷೇಪ: ಅಭಯಾರಣ್ಯಕ್ಕೆ ಹೊಂದಿಕೊಂಡಂತಿರುವ ಜಕ್ಕಳ್ಳಿ ಗ್ರಾಮದ ಸರ್ವೆ ನಂ. 105ರಲ್ಲಿ 1.24 ಎಕರೆ ಜಮೀನು ಖರೀದಿಸಿರುವ ಗಣೇಶ್, ಸ್ವಂತ ವಾಸಕ್ಕೆ ಮನೆ ಹಾಗೂ ಸುತ್ತಲೂ ಕಾಂಪೌಂಡ್ ನಿರ್ಮಿಸುವ ಕುರಿತು ಹೇಳಿದ್ದರು. ಅರಣ್ಯ ಅಧಿಕಾರಿಗಳು 2022ರ ಜೂನ್ ತಿಂಗಳಿನಲ್ಲಿ ಈ ಬಗ್ಗೆ ಮುಚ್ಚಳಿಕೆ ಬರೆಸಿಕೊಂಡು ಅನುಮತಿ ನೀಡಿದ್ದರು. ಆದರೆ ಈಗ ಆ ಜಾಗದಲ್ಲಿ ಜೆಸಿಬಿ ಮೂಲಕ ದೊಡ್ಡ ಮಟ್ಟದ ಕೆಲಸ ನಡೆಸುತ್ತಿದ್ದಾರೆ ಎನ್ನುವುದು ಪರಿಸರವಾದಿಗಳ ಆಕ್ಷೇಪವಾಗಿದೆ. ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಆ ರೀತಿಯ ಕಟ್ಟಡಕ್ಕೆ ಅವಕಾಶವಿಲ್ಲ ಎಂದು ಅವರು ಹೇಳಿದ್ದಾರೆ.

ಈ ವಿಚಾರ ತಿಳಿಯುತ್ತಿದ್ದಂತೆ ಅರಣ್ಯ ಇಲಾಖೆಯ ಅಧಿಕಾರಿಗಳು ಮುಚ್ಚಳಿಕೆ ಪತ್ರ, ಕಂದಾಯ ದಾಖಲಾತಿ ಸೇರಿದಂತೆ ಜಮೀನಿಗೆ ಸಂಬಂಧಿಸಿದ ಎಲ್ಲ ವಿವರಗಳನ್ನೂ ಮುಂದಿನ ಏಳು ದಿನಗಳೊಳಗೆ ಸಲ್ಲಿಸುವಂತೆ ಗಣೇಶ್ ಅವರಿಗೆ ಸೂಚನೆ ನೀಡಿದ್ದಾರೆ.

ನೋಟಿಸ್ ವಿವರ: ಗಣೇಶ್ ಅವರು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಹಂಗಳ ಹೋಬಳಿಯ ಜಕ್ಕಳ್ಳಿ ಗ್ರಾಮದ ಸರ್ವೆ ನಂಬರ್ 105ರಲ್ಲಿ 1 ಎಕರೆ ಮತ್ತು 24 ಗುಂಟೆ ಜಾಗದಲ್ಲಿ ವಾಸಕ್ಕೆ ಮನೆ ಮತ್ತು ತೋಟಗಾರಿಕೆ ಉದ್ದೇಶದಿಂದ ಸುತ್ತಲೂ ಕಾಂಪೌಂಡ್ ವಾಲ್ ನಿರ್ಮಾಣಕ್ಕೆ ಅನುಮತಿ ಕೋರಿ ಪ್ರಸ್ತಾವನೆ ಸಲ್ಲಿಸಿದ್ದಾರೆ. ಈ ಪ್ರಸ್ತಾವನೆಯನ್ನು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಸಮಿತಿಯ ಸಭೆಯಲ್ಲಿ ಹಾಜರುಪಡಿಸಲಾಗಿದೆ.

ಸರ್ವೋಚ್ಚ ನ್ಯಾಯಾಲಯದಲ್ಲಿ ಗಣೇಶ್ ಸಲ್ಲಿಸಿರುವ ದಾಖಲಾತಿಗಳು ನಕಲಿ ಎಂದು ಕಂಡುಬಂದಲ್ಲಿ ಯಾವುದೇ ಸೂಚನೆ ನೀಡದೇ ರದ್ದುಪಡಿಸಬಹುದು ಎಂಬ ಮುಚ್ಚಳಿಕೆ ಬರೆದುಕೊಟ್ಟಿದ್ದಾರೆ.

ಕುಂದುಕೆರೆ ಅರಣ್ಯಾಧಿಕಾರಿ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದು, ಸ್ಥಳದಲ್ಲಿ ಜೆಸಿಬಿ ಸಹಾಯದಿಂದ ನೆಲ ಸಮತಟ್ಟು ಮಾಡಿ ಬೃಹತ್ ಕಟ್ಟಡ ನಿರ್ಮಾಣಕ್ಕೆ ತಯಾರಿ ನಡೆಸುತ್ತಿರುವುದು ಕಂಡುಬಂದಿದೆ. ಮೇಲ್ನೋಟಕ್ಕೆ ಷರತ್ತುಗಳನ್ನು ಉಲ್ಲಂಘಿಸಿರುವುದು ಗೊತ್ತಾಗಿದೆ.

ಸೂಕ್ಷ್ಮ ಪರಿಸರ ವಲಯದ ಸಮಿತಿಯಲ್ಲಿ ಹಾಗೂ ಕಚೇರಿಗೆ ನೀಡಿರುವ ಪತ್ರದಲ್ಲಿ ಷರತ್ತುಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಾಣ ಕಾಮಗಾರಿ ನಡೆಸುತ್ತಿದ್ದು, ಕೂಡಲೇ ಕಾಮಗಾರಿ ಸ್ಥಗಿತಗೊಳಿಸಬೇಕು. ಇದರ ಜೊತೆಗೆ ಸಂಬಂಧಿಸಿದ ದಾಖಲೆಗಳನ್ನು ಕಂದಾಯ ಇಲಾಖೆ ಮತ್ತು ಸಂಬಂಧಿತ ಇಲಾಖೆಗೆ ನೀಡಬೇಕು. ಪತ್ರ ತಲುಪಿದ 7 ದಿನಗಳೊಳಗಾಗಿ ದಾಖಲೆಗಳನ್ನು ಒದಗಿಸಲು ಸೂಚಿಸಲಾಗಿದೆ.

ಚಾಮರಾಜನಗರ ಜಿಲ್ಲೆಯಲ್ಲಿ 13 ಸರ್ಕಾರಿ ಶಾಲೆಗಳಿಗೆ ಬೀಗ



ಚಾಮರಾಜನಗರ, ಆ.17 (ಎಸ್‌ಎಸ್)– ಶೂನ್ಯ ದಾಖಲಾತಿ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ 13 ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಬಂದ್ ಮಾಡಲಾಗಿದೆ.

ಚಾಮರಾಜನಗರ ತಾಲೂಕಿನಲ್ಲಿ 5 ಹಾಗೂ ಗುಂಡ್ಲುಪೇಟೆ ತಾಲೂಕಿನಲ್ಲಿ 6, ಕೊಳ್ಳೇಗಾಲ ಹಾಗೂ ಯಳಂದೂರು ತಾಲೂಕಿನ ತಲಾ ಒಂದೊಂದು ಶಾಲೆಗಳನ್ನು ಬಂದ್ ಮಾಡಲಾಗಿದೆ ಎಂದು ಶಿಕ್ಷಣ ಇಲಾಖೆ ಅಧಿಕಾರಿ ಗಳು ಮಾಹಿತಿ ನೀಡಿದರು.

ಸರ್ಕಾರಿ ಶಾಲೆಗಳಲ್ಲಿ ಮೂಲ ಸೌಲಭ್ಯ ಹಾಗೂ ಶಿಕ್ಷಕರ ಕೊರತೆ, ಖಾಸಗಿ ಶಾಲೆಗಳತ್ತ ಪೋಷಕರ ಆಕರ್ಷಣೆ ಸೇರಿದಂತೆ ಇನ್ನಿತರ ಕಾರಣಗಳಿಂದ ಸರ್ಕಾರಿ ಶಾಲೆಗಳ ದಾಖಲಾತಿ ವರ್ಷದಿಂದ ವರ್ಷಕ್ಕೆ ಕುಸಿಯು ತ್ತಿದೆ. ಅಲ್ಲದೇ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಜಿಲ್ಲೆಯ 13 ಶಾಲೆಗಳಲ್ಲಿ ಶೂನ್ಯ ದಾಖಲಾತಿ ಆಗಿರುವ ಹಿನ್ನೆಲೆಯಲ್ಲಿ ಶಾಲೆಗಳಿಗೆ ಬೀಗ ಹಾಕಲಾಗಿದೆ.

ನಗರ ಕೇಂದ್ರಿತವಾಗಿದ್ದ ಖಾಸಗಿ ಶಾಲೆಗಳು, ಗ್ರಾಮೀಣ ಭಾಗದಲ್ಲೂ ಬೇರು ಗಟ್ಟಿ ಮಾಡಿಕೊಳ್ಳುವಲ್ಲಿ ಎಲ್ಲ ರೀತಿಯಲ್ಲೂ ಸಕ್ರಿಯವಾಗಿವೆ. ಈ ನಡುವೆ ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡುವಲ್ಲಿ ಕೆಲವು ಶಾಲೆಗಳು ವಿಫಲವಾಗುತ್ತಿವೆ. ಇದರಿಂದ ಅಂತಹ ಶಾಲೆಗಳಲ್ಲಿ ವರ್ಷದಿಂದ ವರ್ಷಕ್ಕೆ ದಾಖಲಾತಿ ಕಡಿಮೆ ಯಾಗುತ್ತ ಸಾಗುತ್ತಿದೆ. ಬಾಯಿ ಮಾತಿಗೆ ಸರ್ಕಾರಿ ಶಾಲೆಗಳನ್ನು ಉಳಿಸಬೇಕು ಎನ್ನುವ ಸರ್ಕಾರ ಅಳಿವಿನಂಚಿನಲ್ಲಿರುವ ಶಾಲೆಗಳನ್ನು ಪುನಶ್ಚೇತನ ಗೊಳಿಸುವ ನಿಟ್ಟಿನಲ್ಲಿ ಹೆಚ್ಚಿನ ಕಾಳಜಿ ತೋರಿಸುತ್ತಿಲ್ಲ. ಹೀಗಾಗಿ, ಸರ್ಕಾರಿ ಶಾಲೆಗಳ ಸಂಖ್ಯೆ ಕಡಿಮೆಯಾಗುತ್ತಿದ್ದು, ಇನ್ನಾದರೂ ಶಿಕ್ಷಣ ಇಲಾಖೆ, ಜಿಲ್ಲಾಡಳಿತ ಹಾಗೂ ಜನಪ್ರತಿನಿಧಿಗಳು ಸರ್ಕಾರಿ ಶಾಲೆಗಳನ್ನು ಉಳಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳ ಬೇಕು ಎಂಬುದು ಶಿಕ್ಷಣ ಪ್ರೇಮಿಗಳ ಆಗ್ರಹವಾಗಿದೆ.

ಜಿಲ್ಲೆಯಲ್ಲಿ ಬಂದ್ ಆಗಿರುವ ಸರ್ಕಾರಿ ಶಾಲೆಗಳ ವಿವರ

ಚಾಮರಾಜನಗರ ತಾಲೂಕು

1. ಸಾನೇಗಾಲ ಸರ್ಕಾರಿ ಪ್ರಾಥಮಿಕ ಶಾಲೆ
2. ಕಳ್ಳೀಪುರ ಸರ್ಕಾರಿ ಪ್ರಾಥಮಿಕ ಶಾಲೆ
3. ಮಟ್ಟೇಗೌಡನಹುಂಡಿ ಸರ್ಕಾರಿ ಪ್ರಾಥಮಿಕ ಶಾಲೆ
4. ಕಿರಗಸೂರು ಉರ್ದು ಸರ್ಕಾರಿ ಪ್ರಾಥಮಿಕ ಶಾಲೆ
5. ಹರವೆ–ಹೊಸಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆ

ಗುಂಡ್ಲುಪೇಟೆ ತಾಲೂಕು

6. ಮೇಲುಕಾಮನಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆ
7. ಉತ್ತೇನಗೆರೆಹುಂಡಿ ಸರ್ಕಾರಿ ಪ್ರಾಥಮಿಕ ಶಾಲೆ
8. ಬರಗಿಕಾಲೋನಿ ಸರ್ಕಾರಿ ಪ್ರಾಥಮಿಕ ಶಾಲೆ
9. ಹೊಸಪುರ ಸರ್ಕಾರಿ ಪ್ರಾಥಮಿಕ ಶಾಲೆ
10. ಮರಲಾಪುರ ಸರ್ಕಾರಿ ಪ್ರಾಥಮಿಕ ಶಾಲೆ
11. ತಮಿಳುಶಾಲೆ,

ಕೊಳ್ಳೇಗಾಲ ತಾಲೂಕು

12. ಲಕ್ಕರಸನಪಾಳ್ಯ ಸರ್ಕಾರಿ ಪ್ರಾಥಮಿಕ ಶಾಲೆ

ಯಳಂದೂರು ತಾಲೂಕು

13. ದಾಸನಹುಂಡಿ ಸರ್ಕಾರಿ ಪ್ರಾಥಮಿಕ ಶಾಲೆ

ನಾಳೆ ಸಂತೇಮರಹಳ್ಳಿಯಲ್ಲಿ ಗ್ರಾಹಕರ ಸಂಪರ್ಕ ಸಭೆ

ಚಾಮರಾಜನಗರ, ಆ.17– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಮಾಸಿಕ ಗ್ರಾಹಕರ ಸಂಪರ್ಕ ಸಭೆಯು ಆಗಸ್ಟ್ 19ರಂದು ಬೆಳಗ್ಗೆ 11ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಸಂತೇಮರಹಳ್ಳಿ ಉಪವಿಭಾಗ ಕಚೇರಿಯಲ್ಲಿ ನಡೆಯಲಿದೆ. ಗ್ರಾಹಕರು ಸಭೆಗೆ ಹಾಜರಾಗಿ ವಿದ್ಯುತ್ ಸಂಬಂಧಿತ ಸಮಸ್ಯೆಗಳಿದ್ದಲ್ಲಿ ತಿಳಿಸುವಂತೆ ನಿಗಮದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ಮಹದೇಶ್ವರಬೆಟ್ಟದಲ್ಲಿ ಉಚಿತ ಸಾಮೂಹಿಕ ವಿವಾಹ ಆ.28ಕ್ಕೆ ಮುಂದೂಡಿಕೆ

ಚಾಮರಾಜನಗರ, ಆ.17– ಹನೂರು ತಾಲೂಕಿನ ಶ್ರೀ ಮಲೆ ಮಹದೇಶ್ವರ ಬೆಟ್ಟದಲ್ಲಿ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಆಗಸ್ಟ್ 23ರಂದು ಹಮ್ಮಿಕೊಂಡಿದ್ದ ಸಾಮೂಹಿಕ ವಿವಾಹವನ್ನು ಆಗಸ್ಟ್ 28ಕ್ಕೆ ಮುಂದೂಡಲಾಗಿದೆ.

ಮಲೆ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ 2023–24ನೇ ಸಾಲಿನಲ್ಲಿ ಆಗಸ್ಟ್ 23ರಂದು ಉಚಿತ ಸಾಮೂಹಿಕ ವಿವಾಹವನ್ನು ಏರ್ಪಡಿಸಲಾಗಿತ್ತು. ವಧು–ವರರ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ನಿಗದಿಪಡಿಸಿದ್ದು, ಈಗಾಗಲೇ 100ಕ್ಕೂ ಅಧಿಕ ಅರ್ಜಿಗಳನ್ನು ವಿತರಿಸಲಾಗಿದ್ದು 60 ಅರ್ಜಿಗಳು ಸ್ವೀಕೃತವಾಗಿವೆ. ಉಳಿದ ಅರ್ಜಿದಾರರು ಸಂಬಂಧಿಸಿದ ದಾಖಲಾತಿಗಳನ್ನು ಸಲ್ಲಿಸಲು ಒಂದು ವಾರ ಕಾಲಾವಕಾಶ ಕೋರಿರುವ ಹಿನ್ನೆಲೆ ಉಚಿತ ಸಾಮೂಹಿಕ ವಿವಾಹವನ್ನು ಆಗಸ್ಟ್ 28 ರಂದು ನಿಗದಿಪಡಿಸಲಾಗಿದೆ.

ನೂತನವಾಗಿ ವಿವಾಹವಾಗಲು ಬಯಸುವವರು ಆ.27 ರಂದು ಮಧ್ಯಾಹ್ನ 3 ಗಂಟೆಗೆ ಪ್ರಾಧಿಕಾರದ ಕಚೇರಿಗೆ ಹಾಜರಾಗಿ ಕೊಠಡಿಗಳನ್ನು ಹಾಗೂ ಬಟ್ಟೆಗಳನ್ನು ಪಡೆಯಬೇಕು ಎಂದು ಮಲೆ ಮಹದೇಶ್ವರಸ್ವಾಮಿ ಪ್ರಾಧಿಕಾರದ ಕಾರ್ಯದರ್ಶಿಯವರಾದ ಗೀತಾ ಹುಡೇದ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಅಪರಿಚಿತ ಶವ ಪತ್ತೆ

ಬೇಗೂರು, ಆ.17– ಸಮೀಪದ ಕಬ್ಬಹಳ್ಳಿ ಬಳಿಯಿರುವ ಕೆರೆಯಲ್ಲಿ ಸುಮಾರು 50 ವರ್ಷದ ಅಪರಿಚಿತ ಪುರುಷನ ಶವ ಪತ್ತೆಯಾಗಿದೆ. ಸ್ಥಳಕ್ಕೆ ಬೇಗೂರು ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು. ಕಳೆದ ಮೂರು ನಾಲ್ಕು ದಿನಗಳ ಹಿಂದೆ ಅಪರಿಚಿತ ವ್ಯಕ್ತಿ ಕೆರೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಪೊಲೀಸರು ತಿಳಿಸಿದ್ದಾರೆ.

ಎನ್. ಗಣೇಶ್ ನಿಧನ



ಬೇಗೂರು, ಆ.17– ಗ್ರಾಮದ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ, ಬ್ರಾಹ್ಮಣ ಮಂಡಲಿಯ ಖಜಾಂಚಿಯಾಗಿದ್ದ ಎನ್.ಗಣೇಶ್(72) ಗುರುವಾರ ಸ್ವಗ್ರಾಮದಲ್ಲಿ ನಿಧನರಾದರು. ಮೃತರಿಗೆ ಪತ್ನಿ, ಒಬ್ಬ ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಅಂತ್ಯಕ್ರಿಯೆ ಗುರುವಾರ ಸ್ವಗ್ರಾಮದಲ್ಲಿ ನೆರವೇರಿತು. ಮೃತರ ನಿಧನಕ್ಕೆ ಗ್ರಾಮಸ್ಥರು ಹಾಗೂ ನಾನಾ ಪಕ್ಷಗಳ ಮುಖಂಡರು ಸಂತಾಪ ಸೂಚಿಸಿದ್ದಾರೆ.

ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ ಹೆದ್ದಾರಿ ತಡೆ ಪ್ರತಿಭಟನಾನಿರತರ ಬಂಧನ, ಬಿಡುಗಡೆ



ಚಾಮರಾಜನಗರ, ಆ.17– ತಮಿಳುನಾಡಿಗೆ ಕಾವೇರಿ ನೀರು ಬಿಟ್ಟಿರುವುದನ್ನು ಖಂಡಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ಕಬ್ಬು ಬೆಳೆಗಾರರ ಸಂಘದ ವತಿಯಿಂದ ನಗರದ ಜಾಲಹಳ್ಳಿಹುಂಡಿ ಸಮೀಪ ರಾಷ್ಟ್ರೀಯ ಹೆದ್ದಾರಿ 209 ಅನ್ನು ತಡೆದು ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆ ನೇತೃತ್ವ ವಹಿಸಿದ್ದ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ತಮಿಳುನಾಡಿಗೆ 14 ಸಾವಿರ ಕ್ಯೂಸೆಕ್ ನೀರು ಬಿಟ್ಟಿರುವುದು ರಾಜ್ಯದ ರೈತರ ಪಾಲಿಗೆ ಮರಣಶಾಸನ ಬರೆಯಲು ರಾಜ್ಯ ಸರ್ಕಾರ ಹೊರಟಿದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಅಧಿಕಾರಕ್ಕೆ ಬರುವ ಮುನ್ನ ಮೇಕೆದಾಟು ಯೋಜನೆಗಾಗಿ ಪಾದಯಾತ್ರೆ ಮಾಡಿದರು. ಇಂದು ತಮಿಳುನಾಡಿಗೆ ನೀರು ಹರಿಸುವ ಮೂಲಕ ರಾಜ್ಯದ ಜನರನ್ನು ಬಲಿಕೊಡಲು ಹೋಗಿದ್ದಾರೆ ಎಂದು ದೂರಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೂಡಲೇ ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ನಿಲ್ಲಿಸಬೇಕು. ರಾಜ್ಯದಲ್ಲಿ ಸರಿಯಾಗಿ ಮಳೆಯಾಗಿಲ್ಲ. ಜಲಾಶಯಗಳಲ್ಲಿ ನೀರಿನ ಮಟ್ಟ ಕುಸಿದಿದ್ದು, ಕೆರೆ–ಕಟ್ಟೆಗಳಿಗೆ ನೀರು ಬಿಡುವ ಕೆಲಸ ಮಾಡಿಲ್ಲ. ಕೂಡಲೇ ತಮಿಳುನಾಡಿಗೆ ನೀರು ನಿಲ್ಲಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಆಗುವ ಅನಾಹುತಕ್ಕೆ ನೇರವಾಗಿ ಕರ್ನಾಟಕ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ. ಅಕ್ಕಿಗಾಗಿ ಬೇರೆ ರಾಜ್ಯಗಳನ್ನು ಬೇಡುವ ಪರಿಸ್ಥಿತಿ ಸರ್ಕಾರಕ್ಕೆ ಇದೆ. ರಾಜ್ಯದ ರೈತರಿಗೆ ಸರಿಯಾಗಿ ನೀರು ಬಿಟ್ಟಿದ್ದರೆ ಇಲ್ಲೇ ಭತ್ತ ಬೆಳೆಯಬಹುದಿತ್ತು. ಅದರ ಜೊತೆಗೆ ಅಂತರ್ಜಲ ವೃದ್ಧಿಯಾಗುತ್ತಿತ್ತು ಎಂದರು.

20ಕ್ಕೂ ಹೆಚ್ಚು ರೈತರ ಬಂಧನ, ಬಿಡುಗಡೆ: ತಮಿಳುನಾಡಿಗೆ ಬಿಟ್ಟಿರುವ ಕಾವೇರಿ ನೀರನ್ನು ನಿಲ್ಲಿಸುವ ತನಕ ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ಮಾಡುವುದಾಗಿ ಪಟ್ಟು ಹಿಡಿದಿದ್ದ ವೇಳೆ ವಾಹನ ಸಂಚಾರಕ್ಕೆ ಅಡಚಣೆಯಾಗಿತ್ತು. ಪ್ರತಿಭಟನಾನಿರತ ಮನವೊಲಿಕೆಗೆ ಪೊಲೀಸರು ಮುಂದಾದರು. ಅದಕ್ಕೆ ಮಣಿಯದ 20ಕ್ಕೂ ಹೆಚ್ಚು ರೈತರನ್ನು ಪೊಲೀಸರು ಬಂಧಿಸಿ, ಬಿಡುಗಡೆ ಮಾಡಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಹೊನ್ನೂರು ಬಸವಣ್ಣ, ಕಬ್ಬು ಬೆಳೆಗಾರರ ಸಂಘದ ತಾಲೂಕು ಅಧ್ಯಕ್ಷ ಹಾಲಿನ ನಾಗರಾಜು, ಪಟೇಲ್ ಶಿವಮೂರ್ತಿ, ಹರ್ಷ, ಮಹೇಶ್, ಸತೀಶ್, ಚನ್ನಪ್ಪ, ಹೆಗ್ಗೋಠಾರ ಮಹೇಶ್, ಬಸವರಾಜಪ್ಪ, ಮಹೇಂದ್ರ, ಮಂಜು, ಪ್ರವೀಣ್, ಉಡಿಗಾಲ ಗ್ರಾಮ ಘಟಕದ ಅಧ್ಯಕ್ಷ ಮಂಜುನಾಥ್, ಗುರು, ಮಲ್ಲಪ್ಪ, ಮಹದೇವಸ್ವಾಮಿ, ರೇವಣ್ಣ, ಸ್ವಾಮಿ ಇತರರು ಭಾಗವಹಿಸಿದ್ದರು.

ಯಳಂದೂರಿನಲ್ಲಿ ಇಂದು ಪತ್ರಿಕಾ ದಿನಾಚರಣೆ

ಯಳಂದೂರು, ಆ.17– ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ನಾಳೆ (ಆ.18) ಪಟ್ಟಣದ ಶಂಕರ ಸಭಾಭವನದಲ್ಲಿ ಪತ್ರಿಕಾ ದಿನಾಚರಣೆ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಶಾಸಕ ಎ.ಆರ್. ಕೃಷ್ಣಮೂರ್ತಿ ನೆರವೇರಿಸುವರು. ಅಧ್ಯಕ್ಷತೆಯನ್ನು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಅಂಬಳೆ ವೀರಭದ್ರ ನಾಯಕ ವಹಿಸುವರು. ಡಿವಿಜಿರವರ ಭಾವಚಿತ್ರಕ್ಕೆ ಪುಷ್ಪಾರ್ಚನೆಯನ್ನು ಜಿಲ್ಲಾಧಿಕಾರಿ ಶಿಲ್ಪಾನಾಗ್ ನೆರವೇರಿಸುವರು. ವಿವಿಧ ಕ್ಷೇತ್ರಗಳ ಸಾಧಕರಿಗೆ ತಹಸೀಲ್ದಾರ್ ಜಯಪ್ರಕಾಶ್, ತಾಲೂಕು ಪಂಚಾಯಿತಿ ಇಒ ಉಮೇಶ್, ವೃತ್ತ ನಿರೀಕ್ಷಕರಾದ ಶಿವರಾಜ್ ಮುಧೋಳ್, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ರವಿಕೀರ್ತಿ ಪ್ರಶಸ್ತಿ ಪ್ರದಾನ ಮಾಡುವರು. ಬಹುಮಾನ ವಿತರಣೆಯನ್ನು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ದೇವರಾಜು ಕಪ್ಪಸೋಗೆ ಮಾಡುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗೌಡಳ್ಳಿ ಮಹೇಶ್, ರಾಜ್ಯ ಮಂಡಳಿ ಸದಸ್ಯ ಗೂಳಿಪುರ ನಂದೀಶ್, ಎಂ.ಇ. ಮಂಜುನಾಥ್, ತಾಲೂಕು ಆರೋಗ್ಯಾಧಿಕಾರಿ ಡಾ. ಶ್ರೀಧರ್ ಆಗಮಿಸುವರು ಎಂದು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಡಿ.ಪಿ. ಮಹೇಶ್ ತಿಳಿಸಿದ್ದಾರೆ.

ಮಧ್ಯಪ್ರದೇಶ-ಛತ್ತೀಸ್‌ಗಢ ವಿಧಾನಸಭಾ ಚುನಾವಣೆ: ಮೊದಲ ಪಟ್ಟಿ ಬಿಡುಗಡೆ ಮಾಡಿದ ಬಿಜೆಪಿ!

ನವದೆಹಲಿ, ಆ.17– ಮಧ್ಯಪ್ರದೇಶ ಮತ್ತು ಛತ್ತೀಸ್‌ಗಢದಲ್ಲಿ ತನ್ನ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಜೆಪಿ ಬಿಡುಗಡೆ ಮಾಡಿದೆ. ಈ ವರ್ಷ ಎರಡೂ ರಾಜ್ಯಗಳಲ್ಲಿ ವಿಧಾನಸಭೆ ಚುನಾವಣೆ ನಡೆಯಲಿದ್ದು ಇದಕ್ಕಾಗಿ ಪಕ್ಷ ಸಿದ್ಧತೆಯಲ್ಲಿ ತೊಡಗಿದೆ.

ಗುರುವಾರ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಿದ ಪಕ್ಷವು ಮಧ್ಯಪ್ರದೇಶದಲ್ಲಿ 39 ಮತ್ತು ಛತ್ತೀಸ್‌ಗಢದಲ್ಲಿ 21 ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದೆ. ವಾಸ್ತವವಾಗಿ, ಎರಡೂ ರಾಜ್ಯಗಳಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಬಿಜೆಪಿಯ ಕೇಂದ್ರ ಚುನಾವಣಾ ಸಮಿತಿಯ ಸಭೆ ಬುಧವಾರ ನಡೆಯಿತು. ಈ ಸಭೆಯಲ್ಲಿ ಪ್ರಧಾನಿ ಮೋದಿ, ಅಮಿತ್ ಶಾ, ಜೆಪಿ ನಡ್ಡಾ ಸೇರಿದಂತೆ ಎಲ್ಲಾ ನಾಯಕರು ಭಾಗವಹಿಸಿದ್ದರು. ಉಭಯ ರಾಜ್ಯಗಳ ಚುನಾವಣೆಯ ಹೊರತಾಗಿ ಹಲವು ವಿಷಯಗಳ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆದಿದೆ. ಇದಾದ ನಂತರವೇ ಮೊದಲು ರಾಜ್ಯಗಳಲ್ಲಿ ಬಿಜೆಪಿಯ ಚುನಾವಣಾ ತಂಡವನ್ನು ಘೋಷಿಸಲಾಯಿತು. ನಂತರ ಮಧ್ಯಪ್ರದೇಶ ಮತ್ತು ಛತ್ತೀಸ್‌ಗಢದಲ್ಲಿ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ.

2018ರಲ್ಲಿ ನಡೆದ ಛತ್ತೀಸ್‌ಗಢ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಹೀನಾಯ ಸೋಲನ್ನು ಎದುರಿಸಬೇಕಾಯಿತು. ರಾಜ್ಯದ ಒಟ್ಟು 90 ವಿಧಾನಸಭಾ ಸ್ಥಾನಗಳ ಪೈಕಿ ಬಿಜೆಪಿ 15 ಸ್ಥಾನಗಳನ್ನು ಮಾತ್ರ ಗೆದ್ದುಕೊಂಡಿತು. ಅದೇ ಸಮಯದಲ್ಲಿ, ಕಾಂಗ್ರೆಸ್ ಗರಿಷ್ಠ 68 ವಿಧಾನಸಭಾ ಸ್ಥಾನಗಳನ್ನು ಗೆದ್ದು ಸರ್ಕಾರವನ್ನು ರಚಿಸಿತು. ಇದೀಗ ಬಿಜೆಪಿ ಹಲವು ವಿಚಾರಗಳ ತಯಾರಿಯಲ್ಲಿ ನಿರತವಾಗಿದ್ದು, ತಾನು ಸೋತ ಸ್ಥಾನಗಳಿಗೆ ಕಾರಣ ಹುಡುಕುತ್ತಾ, ಮುಂದೆ ರಣತಂತ್ರ ರೂಪಿಸುತ್ತಿದೆ. 2018ರ ಮಧ್ಯಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 114 ಸ್ಥಾನಗಳನ್ನು ಪಡೆದುಕೊಂಡಿತು. 230 ಸದಸ್ಯರ ವಿಧಾನಸಭೆಯಲ್ಲಿ ಬಹುಮತಕ್ಕೆ ಎರಡು ಸ್ಥಾನ ಕೊರತೆಯಿತ್ತು. ಇನ್ನು ಬಿಜೆಪಿ 109 ಸ್ಥಾನಗಳು ಪಡೆದಿತ್ತು ಬಿಎಸ್‌ಪಿ ಎರಡು ಸ್ಥಾನ ಪಡೆದರೆ ಇತರರಿಗೆ ಐದು ಸ್ಥಾನಗಳು ಲಭಿಸಿತ್ತು. ನಂತರ ಬಿಎಸ್‌ಪಿ, ಎಸ್‌ಪಿ ಮತ್ತು ಇತರರ ಬೆಂಬಲದೊಂದಿಗೆ ಕಾಂಗ್ರೆಸ್ ಸರ್ಕಾರ ರಚಿಸಿತು. 15 ವರ್ಷಗಳ ನಂತರ ರಾಜ್ಯದಲ್ಲಿ ಅಧಿಕಾರವನ್ನು ಪಡೆದುಕೊಂಡಿತು. ಕಮಲನಾಥ್ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಕಾಂಗ್ರೆಸ್ ಸರ್ಕಾರ ಡಿಸೆಂಬರ್ 2018ರಿಂದ ಮಾರ್ಚ್ 2020ರವರೆಗೆ ನಡೆಯಿತು.

ಒಂದನೇ ಪುಟದಿಂದ

ತಮಿಳುನಾಡಿಗೆ ನೀರು ಬಿಡುಗಡೆ

ಸರಕಾರ. ತಮಿಳುನಾಡಿಗೆ ಬೆದರಿ ಶರಣಾಗಿದೆ. ಕಾವೇರಿ ಜಲನಿರ್ವಹಣಾ ಪ್ರಾಧಿಕಾರದ ಸಭೆ ಯಿಂದಲೇ ಹೊರನಡೆದ, ರಾಜ್ಯದ ವಿರುದ್ಧ ಸುಪ್ರೀಂಕೋರ್ಟ್‌ಗೆ ಅರ್ಜಿ ಹಾಕಿದ ರಾಜ್ಯದ ದುರು ದೈನೇಸಿಯಾಗಿ ಮಂಡಿಯೂರಿದ್ದು, ಕನ್ನಡಿಗರ ಸ್ವಾಭಿಮಾನಕ್ಕೆ ಕೊಟ್ಟ ಕೊಡಲಿ ಪೆಟ್ಟು ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

1962ರಿಂದಲೂ ಕಾವೇರಿ ಕೊಳ್ಳದ ರೈತರಿಗಾಗಿ ಹೆಚ್.ಡಿ.ದೇವೇಗೌಡರು ಜೀವವನ್ನೇ ತೇದರು. ಕಾವೇರಿಗಾಗಿ ಹಿಂದಿನ ಪ್ರತಿ ಸರಕಾರವೂ ಕೇಂದ್ರಕ್ಕೆ ಸಡ್ಡು ಹೊಡೆದು ತಮಿಳುನಾಡು ಅಬ್ಬರಕ್ಕೆ ಅಂಕೆ ಹಾಕಿದ್ದವು. ಇಂಥ ಕೆಟ್ಟ ಕರ್ನಾಟಕ ಇತಿಹಾಸದಲ್ಲಿ ಈ ಸರಕಾರವು, ನೆರೆರಾಜ್ಯ ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಹಾಕಿದಾಕ್ಷಣ ಬೆದರಿ ಕೈ ಚೆಲ್ಲಿದೆ ಎಂದು ಅವರು ಹೇಳಿದ್ದಾರೆ. ಸಂಕಷ್ಟ ಸ್ಥಿತಿಯ ಬಗ್ಗೆ ರಾಜ್ಯ ಕಾಂಗ್ರೆಸ್ ಸರ್ಕಾರ ಸುಪ್ರೀಂಕೋರ್ಟ್‌ಗೆ ಮನವರಿಕೆ ಮಾಡಿಕೊಡಲಿಲ್ಲ, ಯಾಕೆ? ಕಾನೂನು ತಜ್ಞರ ಜತೆ, ಪ್ರತಿಪಕ್ಷ ಮುಖಂಡರ ಜತೆ ಸಮಾಲೋಚನೆ ನಡೆಸದೇ ವಾಯುವೇಗದಲ್ಲಿ ತಮಿಳುನಾಡಿಗೆ ನೀರು ಹರಿಸಿದ ಒಳಗುಟ್ಟೇನು? ಜನತೆಗೆ ಗೊತ್ತಾಗಬೇಕಿದೆ ಎಂದು ಅವರು ತಿಳಿಸಿದ್ದಾರೆ. ಜಲ ಸಂಪನ್ಮೂಲ ಸಚಿವರು ಮಂತ್ರಿ ಆಗಿರುವುದು ಕರ್ನಾಟಕಕ್ಕೋ ಅಥವಾ ತಮಿಳುನಾಡಿಗೋ? ಅವರು ಸ್ಪಷ್ಟಪಡಿಸಬೇಕಿದೆ.

ಕಾವೇರಿ ಕೀಲಿ ಕೇಂದ್ರದ ಬಳಿ ಇದೆ ಎಂದಿದ್ದರೆ ಇವರ ಹೊಣೆ ಏನು? ಆ ಕೀಲಿ ಈಗ ಸ್ಟಾಲಿನ್ ಅವರ ಕೈಯ್ಯಲ್ಲಿದೆಯೋ ಅಥವಾ ಸೋನಿಯಾ ಗಾಂಧಿ ಅವರ ಕೈಯ್ಯಲ್ಲಿದೆಯೋ? ಎಂದು ಅವರು ಕೇಳಿದ್ದಾರೆ. ತಾಕತ್ತಿದ್ದರೆ ಕೋರ್ಟ್‌ಗೆ ಹೋಗಿ ಎಂದು ರೈತರಿಗೆ ಉಪ ಮುಖ್ಯಮಂತ್ರಿಗಳು ಹೇಳಿರುವುದು ದರ್ಪ, ದುರಹಂಕಾರದ ಪರಾಕಾಷ್ಠೆ. ನಿತ್ಯವೂ ಸಾವಿರಾರು ಕ್ಯೂಸೆಕ್ ಕಾವೇರಿ ನೀರು ನೆರೆರಾಜ್ಯಕ್ಕೆ ಹರಿದು ಹೋಗುತ್ತಿದೆ. ಇನ್ನೂ 10 ಟಿಎಂಸಿ ಬಿಡುತ್ತೇವೆ ಎಂದು ಅವರು ಹೇಳಿರುವುದು ಸರಿಯಲ್ಲ? ಎಂದಿದ್ದಾರೆ. ಕನ್ನಡಿಗರು ಕೊಟ್ಟ ಪೆನ್ ಈಗ ಗನ್ ರೂಪ ತಳೆದಿದೆಯಾ ಹೇಗೆ? ಕನ್ನಡಿಗರನ್ನು ಕೇಳಿಕೇಳಿ ಪಡೆದುಕೊಂಡ ಪೆನ್ ಈಗ ಪೆಚ್ಚಗೆ, ಬೆಪ್ಪಗೆ ಮಲಗಿದೆಯಾ? ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರವೇ ರಾಜ್ಯದ ಜಲ ಸಂಕಷ್ಟದ ಬಗ್ಗೆ ಸಭೆಯಲ್ಲೇ ಅಂಕಿ–ಅಂಶ ಸಮೇತ ಹೇಳಿದೆ. ಪಾಪ. ಜಲ ಸಂಪನ್ಮೂಲ ಸಚಿವರಿಗೆ ಈ ಬಗ್ಗೆ ಮಾಹಿತಿ ಇಲ್ಲವೇ? ಎಂದು ಅವರು ಪ್ರಶ್ನಿಸಿದ್ದಾರೆ. ಕಾವೇರಿ ವಿಷಯದಲ್ಲಿ ಕಾಂಗ್ರೆಸ್ಸಿನದು ಸದಾ ಎರಡು ನಾಲಿಗೆ! ಕಾವೇರಿ ಪಾಲಿಗೆ ಆ ಪಕ್ಷ ನಯವಂಚನೆ, ನಂಬಿಕೆ ದ್ರೋಹದ ಪ್ರತೀಕ.ಅಧಿಕಾರಕ್ಕೆ ಬಂದು 100 ದಿನ ಕಳೆಯುವ ಮುನ್ನವೇ ಕೊಳ್ಳಿ ಇಡುವ ಕೆಲಸ ಮಾಡಿಬಿಟ್ಟಿದೆ. ಈ ಅನ್ಯಾಯ ಸಹಿಸುವ ಪ್ರಶ್ನೆಯೇ ಇಲ್ಲ. ತಮಿಳುನಾಡಿಗೆ ನೀರು ಹರಿಸುವುದನ್ನು ನಿಲ್ಲಿಸಬೇಕು. ಸಂಕಷ್ಟಸೂತ್ರದ ಪಾಲನೆಗೆ ಒತ್ತಡ ಹೇರಬೇಕು ಹಾಗೂ ಕೂಡಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸರ್ವಪಕ್ಷ ಸಭೆ ಕರೆಯಬೇಕು ಎಂದು ಮಾಜಿ ಮುಖ್ಯಮಂತ್ರಿ ಅವರು ಒತ್ತಾಯ ಮಾಡಿದ್ದಾರೆ.

ಪ್ರಾಧಿಕಾರಕ್ಕೆ ಮನವಿ

ಮಹದಾಯಿ, ಕೃಷ್ಣ ಸೇರಿದಂತೆ ರಾಜ್ಯದ ಪ್ರಮುಖ ವಿಚಾರಗಳ ಬಗ್ಗೆ ಸರ್ವಪಕ್ಷಗಳ ಜತೆ ಚರ್ಚೆ ಮಾಡುವುದು ಸರಿ. ನಾವು ಕೂಡ ಸರ್ವಪಕ್ಷ ಸಭೆ ನಡೆಸುವ ಬಗ್ಗೆ ಆಲೋಚನೆ ಮಾಡಿದ್ದೇವೆ. ಬೊಮ್ಮಾಯಿ ಯವರು ತಮಿಳುನಾಡಿಗೆ ನೀರು ಬಿಡಬಾರದು ಎಂದು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಈ ಹಿಂದೆ ಅವರ ಸರ್ಕಾರ ಇದ್ದಾಗಲೂ ಸಂಕಷ್ಟದ ಸಮಯದಲ್ಲಿ ತಮಿಳುನಾಡಿಗೆ ನೀರು ಹರಿಸಲಾಗಿತ್ತು. ದೇವೇಗೌಡರು ಪ್ರಧಾನಿಯಾಗಿದ್ದಾಗಲೂ ನೀರು ಬಿಡಲಾಗಿತ್ತು. ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗಲೂ ನೀರು ಬಿಡಲಾಗಿತ್ತು. ಈ ಬಗ್ಗೆ ದಾಖಲೆಗಳಿವೆ. ಈ ವಿಚಾರದಲ್ಲಿ ರಾಜಕಾರಣ ಮಾಡುವ ಅಗತ್ಯವಿಲ್ಲ. ನಮ್ಮ ಪರಿಸ್ಥಿತಿ ಹದಗೆಟ್ಟಿದ್ದು ತಮಿಳುನಾಡಿನವರ ಆಗ್ರಹ ಮುಂದುವರೆದಿದೆ' ಎಂದು ಹೇಳಿದರು.

ಸೆಮಿ ಕಂಡಕ್ಟರ್ ಘಟಕ ಅನುಮಾನ

ಘಟಕ ಸ್ಥಾಪನೆಗೆ ನಿರ್ಧರಿಸಿತ್ತು. ಕಂಪನಿಯ ಹಿರಿಯ ಅಧಿಕಾರಿಗಳು ಕಡಕೊಳ ಕೈಗಾರಿಕಾ ಪ್ರದೇಶದ ಕೋಚನಹಳ್ಳಿ ಬಳಿ ಭೇಟಿ ನೀಡಿ, ಸನಿಹದಲ್ಲಿ ಮಂಡಕಳ್ಳಿ ವಿಮಾನ ನಿಲ್ದಾಣ, ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆ, ಪಕ್ಕದಲ್ಲೇ ಕಪಿಲಾ ನದಿ ಸೇರಿದಂತೆ ಎಲ್ಲಾ ಮೂಲ ಸೌಕರ್ಯ ಇರುವ ಕಾರಣ ನಮ್ಮ ಕಂಪನಿ ಸ್ಥಾಪನೆಗೆ ಇದೇ ಹೇಳಿ ಮಾಡಿಸಿದ ಸ್ಥಳ ಎಂದು ತೀರ್ಮಾನಿಸಿದ್ದರು. ಈ ಹಿನ್ನೆಲೆಯಲ್ಲಿ ಹಿಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸರ್ಕಾರ ಹಾಗೂ ಕಂಪನಿಯ ನಡುವೆ ಎಂಒಯು ಕೂಡ ಆಗಿತ್ತು. ಸೆಮಿ ಕಂಡಕ್ಟರ್ ಚಿಪ್ ತಯಾರಿಕಾ ಘಟಕ ಸ್ಥಾಪನೆಗೆ ಕಡಿಮೆ ಬೆಲೆಯಲ್ಲಿ ಭೂಮಿ, ಹಲವು ರೀತಿಯ ಸಬ್ಸಿಡಿ, ಸಮರ್ಪಕ ವಿದ್ಯುತ್ ಹಾಗೂ ನೀರು ಪೂರೈಕೆ ಸೇರಿದಂತೆ ಹಲವು ಸೌಲಭ್ಯ ಕಲ್ಪಿಸುವುದಾಗಿ ಕರ್ನಾಟಕ ಸರ್ಕಾರ ಭರವಸೆಯನ್ನೂ ನೀಡಿತ್ತು.

ಸುಮಾರು 22,900 ಕೋಟಿ ಬಂಡವಾಳ ಹೂಡಿಕೆಯ ಸೆಮಿ ಕಂಡಕ್ಟರ್ ಘಟಕದಿಂದ ಎರಡು ಸಾವಿರ ಇಂಜಿನಿಯರ್‌ಗಳು ಸೇರಿದಂತೆ 10 ಸಾವಿರ ಜನರಿಗೆ ಉದ್ಯೋಗ ದೊರೆಯುವ ನಿರೀಕ್ಷೆ ಇತ್ತು. ಮೈಸೂರಿನಲ್ಲಿ ಸ್ಥಾಪನೆಯಾಗುವ ಸೆಮಿ ಕಂಡಕ್ಟರ್ ಕೋರ್ ಯೂನಿಟ್‌ನಲ್ಲಿ ಮೊಬೈಲ್, ಕಂಪ್ಯೂಟರ್, ಸಿಸಿಟಿವಿ, ಎಲ್‌ಸಿಡಿ ಸೇರಿದಂತೆ ಹಲವು ರೀತಿಯ ಎಲೆಕ್ಟ್ರಾನಿಕ್ ವಸ್ತುಗಳ ತಯಾರಿಕೆಗೆ ಅವಶ್ಯವಿರುವ ಕಚ್ಚಾ ವಸ್ತುಗಳನ್ನು ತಯಾರಿಸಲು ಕಂಪನಿ ಯೋಜನೆ ರೂಪಿಸಿತ್ತು.

ಸೆಮಿ ಕಂಡಕ್ಟರ್ ಚಿಪ್ ತಯಾರು ಮಾಡುವ ಒಂದೇ ಒಂದು ಕಂಪನಿ ಭಾರತದಲ್ಲಿ ಇಲ್ಲ. ಚೀನಾ, ಥೈವಾನ್ ಸೇರಿದಂತೆ ಬೇರೆ ದೇಶಗಳಿಂದ ಸೆಮಿ ಕಂಡಕ್ಟರ್ ಚಿಪ್ ಆಮದು ಮಾಡಿಕೊಳ್ಳಲಾಗುತ್ತದೆ. ಈಗ ಭಾರತದಲ್ಲೇ, ಅದೂ ಮೈಸೂರಿನಲ್ಲೆ ದೇಶದ ಮೊದಲ ಸೆಮಿ ಕಂಡಕ್ಟರ್ ಚಿಪ್ ತಯಾರಿಕೆ ಆಗುವ ಕಾರಣ ಇಲ್ಲಿ ಆರ್ಥಿಕ ಅಭಿವೃದ್ಧಿಯಾಗುತ್ತದೆ ಎಂದು ನಿರೀಕ್ಷಿಸಲಾಗಿತ್ತು.

ಈ ಕಂಪನಿ ಸ್ಥಾಪನೆಯಾದರೆ ಭಾರತ ಮಾತ್ರವಲ್ಲದೆ ವಿಶ್ವದ ಹಲವು ದೇಶಗಳ ಇಂಜಿನಿಯರ್‌ಗಳು ಮೈಸೂರಿನಲ್ಲೇ ನೆಲೆಸುವುದರಿಂದ ಮೈಸೂರಿನ ಬೆಳವಣಿಗೆಯೂ ಮತ್ತಷ್ಟು ವೃದ್ಧಿಯಾಗುತ್ತದೆ. 10 ಸಾವಿರ ಜನರಿಗೆ ಉದ್ಯೋಗಾವಕಾಶ ದೊರೆಯುವುದರಿಂದ ಮೈಸೂರಿನ ವಾಣಿಜ್ಯ ಬೆಳವಣಿಗೆ ವೃದ್ಧಿಯಾಗುತ್ತದೆ ಎಂದು ಲೆಕ್ಕಾಚಾರ ಹಾಕಲಾಗಿತ್ತು. ಇಸ್ರೇಲ್ ಮೂಲದ ಸೆಮಿ ಕಂಡಕ್ಟರ್ ಕಂಪನಿ ಸ್ಥಾಪನೆ ಮಾಡಲು ಸರ್ಕಾರದ ಸೂಚನೆಯಂತೆ ಕೆಐಎಡಿಬಿ ಅಧಿಕಾರಿಗಳು ಕಡಕೊಳದ ಕೋಚನಹಳ್ಳಿ ಸುತ್ತಮುತ್ತ ರೈತರಿಂದ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದರು. ಒಂದು ಎಕರೆಗೆ 47.50 ಲಕ್ಷ ರೂ. ನೀಡಿ 189 ಎಕರೆಯನ್ನು ಕೆಐಎಡಿಬಿಯವರು ರೈತರಿಂದ ಭೂಸ್ವಾಧೀನ ಪಡಿಸಿಕೊಂಡಿದ್ದರು. 45 ಎಕರೆ ಸೇರಿದಂತೆ ಒಟ್ಟು 234 ಎಕರೆ ಭೂಮಿಯನ್ನು ಸೆಮಿಕಂಡಕ್ಟರ್ ಘಟಕ ಸ್ಥಾಪನೆಗೆ ಕೆಐಎಡಿಬಿನವರು ಮೀಸಲಿಟ್ಟಿದ್ದರು.

ಆದರೆ ಈಗ ಇಸ್ರೇಲ್ ಮೂಲದ ಐಎಸ್‌ಎಂಸಿ ಅನಲಾಗ್ ಫ್ಯಾಬ್ ಪ್ರೈವೆಟ್ ಲಿಮಿಟೆಡ್ ಮೈಸೂರಿನ ಕಡಕೊಳದಲ್ಲಿ ಸೆಮಿ ಕಂಡಕ್ಟರ್ ಘಟಕ ಸ್ಥಾಪಿಸುವುದು ಅನುಮಾನವಾಗಿದೆ. ಮೈಸೂರಿನಲ್ಲಿರುವ ಬಹಳಷ್ಟು ಕೈಗಾರಿಕೆಗಳು ಬಾಗಿಲು ಮುಚ್ಚಿವೆ. ಇಂತಹ ಪರಿಸ್ಥಿತಿಯಲ್ಲಿ ದೇಶದ ಮೊದಲ ಬೃಹತ್ ಸೆಮಿ ಕಂಡಕ್ಟರ್ ಘಟಕ ಸ್ಥಾಪನೆ ಆಗುತ್ತಿದೆ ಎಂಬ ಸುದ್ದಿ ಕೇಳಿದಾಗ ಮೈಸೂರು ಜನರು ಸಂತೋಷಪಟ್ಟಿದ್ದರು. ಇನ್ನೇನು ಕಂಪನಿಯ ನಿರ್ಮಾಣ ಪ್ರಕ್ರಿಯೆ ಆರಂಭವಾಗಬಹುದು ಎಂದು ಮೈಸೂರು ಜನರು ನಿರೀಕ್ಷಿಸಿದ್ದರು. ಆದರೆ ಈಗ ಇಸ್ರೇಲ್ ಕಂಪನಿ ಮೈಸೂರಿನಲ್ಲಿ ಸೆಮಿ ಕಂಡಕ್ಟರ್ ಘಟಕ ಸ್ಥಾಪನೆ ಅನುಮಾನವಾಗಿರುವುದರಿಂದ ಮೈಸೂರಿಗರಿಗೆ ಸಹಜವಾಗಿಯೇ ನಿರಾಸೆಯಾಗಿದೆ. ಈಗ ಮೀಸಲಿಟ್ಟಿರುವ 234 ಎಕರೆ ಪ್ರದೇಶದಲ್ಲಿ ಬೇರೆ ಎಲೆಕ್ಟ್ರಾನಿಕ್ ಡಿವೈಸ್ ಕಂಪನಿ ಸ್ಥಾಪನೆಯಾದರೆ ಮೈಸೂರಿನ ಪ್ರಗತಿ ಮತ್ತಷ್ಟು ಹೆಚ್ಚಾಗುತ್ತದೆ. ಅದು ಬಿಟ್ಟು ಆ ಜಾಗ ಅನ್ಯ ಉಪಯೋಗಕ್ಕೆ ಬಳಕೆಯಾದರೆ ಉದ್ಯೋಗದ ಕನಸು ಕಂಡಿದ್ದ ಮೈಸೂರಿಗರಿಗೆ ನಿರಾಸೆ ಕಾದಿದೆ.

ಬಂಡೀಪುರದ 'ಯುವ ಮಿತ್ರ' ಯೋಜನೆಗೆ ಯುಎನ್‌ಡಿಪಿ ಮೆಚ್ಚುಗೆ

- ಜಾಗೃತಿ ಕಾರ್ಯಕ್ರಮ ಮುಂದುವರೆಸಲು ಸಮಿತಿ ರಚನೆ
- ಅಧಿಕಾರಿಗಳು ಬದಲಾದರೂ, ಕಾರ್ಯಕ್ರಮದ ರೂಪುರೇಷೆ ಕಾಯ್ದುಕೊಳ್ಳಲು ಕ್ರಮ
- ದೇಶದಲ್ಲೇ ಮೊದಲ ಪ್ರಯೋಗದಿಂದ ಗಮನ ಸೆಳೆದ ಬಂಡೀಪುರ
- 3547 ವಿದ್ಯಾರ್ಥಿಗಳು, 277 ಶಿಕ್ಷಕರು, 103 ಗ್ರಾ.ಪಂ ಸದಸ್ಯರು, ಸಿಬ್ಬಂದಿಗೆ ಅರಿವು



ಬಂಡೀಪುರ ಕ್ಯಾಂಪಸ್‌ನಲ್ಲಿ 'ಯುವ ಮಿತ್ರ' ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ವಿವಿಧ ಶಾಲಾ ವಿದ್ಯಾರ್ಥಿಗಳು



ಯುವ ಮಿತ್ರ ಕಾರ್ಯಕ್ರಮದಲ್ಲಿ ತುಮಕೂರಿನ ಉರಗ ಸಂರಕ್ಷಕ ಸ್ನೇಕ್ ಸಿರಿ ಪ್ರಸಾದ್ ಅವರು ಮಕ್ಕಳಿಗೆ ಹಾವಿನ ಬಗ್ಗೆ ಮಾಹಿತಿ ನೀಡುತ್ತಿರುವುದು.

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಆ.17– ಕಾಡಂಚಿನ ಗ್ರಾಮಗಳ ಶಾಲಾ ಮಕ್ಕಳಿಗಾಗಿ ವನ್ಯಜೀವಿ ಸಂರಕ್ಷಣೆಯ ಮಹತ್ವದ ಬಗ್ಗೆ ಅರಿವು ಮೂಡಿಸಲು ದೇಶದಲ್ಲೇ ಮೊದಲ ಬಾರಿಗೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಆರಂಭಿಸಿರುವ 'ಯುವ ಮಿತ್ರ' ಕಾರ್ಯಕ್ರಮಕ್ಕೆ ಯುನೈಟೆಡ್ ನೇಷನ್ಸ್ ಡೆವಲಪ್‌ಮೆಂಟ್ ಪ್ರೋಗ್ರಾಂ (ಯುಎನ್‌ಡಿಪಿ) ಸಂಸ್ಥೆ ಪ್ರಶಂಸೆ ವ್ಯಕ್ತಪಡಿಸಿ ನೆರವು ನೀಡುವ ಭರವಸೆ ನೀಡಿದೆ. ಇದರಿಂದ "ಯುವ ಮಿತ್ರ" ಕಾರ್ಯಕ್ರಮವನ್ನು ಶಾಶ್ವತವಾಗಿ ಮುಂದುವರೆಸಲು ಸಮತಿ ರಚಿಸಲಾಗಿದೆ.

ಹುಲಿ ಸಂರಕ್ಷಿತ ಪ್ರದೇಶಕ್ಕೆ 50 ವರ್ಷ ಸಂದ ಹಿನ್ನೆಲೆಯಲ್ಲಿ ಕೇಂದ್ರ ಅರಣ್ಯ ಸಚಿವ ಭೂಪೇಂದರ್ ಯಾದವ್ ಜ.5ರಂದು ಬಂಡೀಪುರ ಕ್ಯಾಂಪಸ್‌ನಲ್ಲಿ 'ಯುವ ಮಿತ್ರ' ಯೋಜನೆಗೆ ಚಾಲನೆ ನೀಡಿದ್ದರು. ಪರಿಸರ ಸಂರಕ್ಷಣೆಯ ಪಾಠದೊಂದಿಗೆ ಅರಿವು ಮೂಡಿಸುವ 'ಯುವ ಮಿತ್ರ' ಕಾರ್ಯಕ್ರಮಕ್ಕೆ ವ್ಯಾಪಕ ಪ್ರಶಂಸೆ ವ್ಯಕ್ತವಾಗುತ್ತಿದೆ. ದೇಶದಲ್ಲಿರುವ 53 ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಯುವ ಮಿತ್ರ ಯೋಜನೆ ಮೊದಲ ಬಾರಿಗೆ ಆರಂಭಿಸಿದ ಕೀರ್ತಿ ಬಂಡೀಪುರ ಅರಣ್ಯಕ್ಕೆ ಸಲ್ಲುತ್ತದೆ.


ವರ್ಷಕ್ಕೆ 15 ಸಾವಿರ ವಿದ್ಯಾರ್ಥಿಗಳಿಗೆ ಅರಿವು: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯಲ್ಲಿ 136 ಕಾಡಂಚಿನ ಗ್ರಾಮಗಳಿದ್ದು, ಈ ಗ್ರಾಮಗಳ ಶಾಲಾ ವಿದ್ಯಾರ್ಥಿಗಳಿಗೆ ಅರಣ್ಯ ಸಂರಕ್ಷಣೆ, ವನ್ಯಜೀವಿಗಳ ಮಹತ್ವ ಸೇರಿದಂತೆ ಪರಿಸರ ಶಿಕ್ಷಣ ನೀಡಲು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಅಧಿಕಾರಿಗಳು ನಿರ್ಧರಿಸಿದ್ದು, ವರ್ಷಕ್ಕೆ 15 ಸಾವಿರ ವಿದ್ಯಾರ್ಥಿಗಳು ಹಾಗೂ ಒಂದು ಸಾವಿರ ಶಿಕ್ಷಕರಿಗೆ ಪರಿಸರ ಶಿಕ್ಷಣ ನೀಡುವ ಗುರಿ ಹೊಂದಲಾಗಿದೆ. ಇದಕ್ಕಾಗಿ ಎರಡು ಪ್ರತ್ಯೇಕ ಮಿನಿ ಬಸ್ ಖರೀದಿಸಲಾಗಿದ್ದು, ಶನಿವಾರ, ಭಾನುವಾರ ಹೊರತುಪಡಿಸಿ, ಉಳಿದ ದಿನಗಳಂದು ಹೆಸರು ನೋಂದಾಯಿಸಿಕೊಂಡಿರುವ ಕಾಡಂಚಿನ ಗ್ರಾಮಗಳ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳನ್ನು ಬಂಡೀಪುರ ಕ್ಯಾಂಪಸ್‌ಗೆ ಕರೆತಂದು ಬಂಡೀಪುರ ಅಭಯಾರಣ್ಯದ ಬಗ್ಗೆ ಮಾಹಿತಿ ನೀಡಲಾಗುತ್ತಿದೆ. ಬಳಿಕ ಮಧ್ಯಾಹ್ನ ಊಟದ ಬಳಿಕ ವಿದ್ಯಾರ್ಥಿಗಳನ್ನು ಸಫಾರಿಗೆ ಕರೆದುಕೊಂಡು ಹೋಗಲಾಗುತ್ತದೆ.

ಶಾಲೆಯಿಂದ ಕರೆದುಕೊಂಡು ಬಂದಾಗ ಮಕ್ಕಳಲ್ಲಿ ಬಂಡೀಪುರದ ಬಗ್ಗೆ ಇರುವ ಮಾಹಿತಿ ಪಡೆದುಕೊಳ್ಳಲು ಕೆಲ ಪ್ರಶ್ನೆಯುಳ್ಳ ಪತ್ರಿಕೆ ನೀಡಿ, ಮಕ್ಕಳಿಂದಲೇ ಉತ್ತರ ಪಡೆಯಲಾಗುತ್ತದೆ. ಬಳಿಕ, ಸಿಬ್ಬಂದಿ ಹಾಗೂ ಸಂಪನ್ಮೂಲ ವ್ಯಕ್ತಿಗಳಿಂದ ವನ್ಯಜೀವಿಗಳ ರಕ್ಷಣೆಯ ಮಹತ್ವ, ಅದರಿಂದ ಆಗುವ ಪ್ರಯೋಜನಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಸಫಾರಿಯಿಂದ ಬಂದ ಬಳಿಕ ಮತ್ತೊಮ್ಮೆ ಪ್ರಶ್ನೆ ಪತ್ರಿಕೆಯನ್ನು ಮಕ್ಕಳಿಗೆ ನೀಡಿ ಅವರಿಂದ ಮಾಹಿತಿ ಪಡೆಯಲಾಗುತ್ತಿದೆ. ಇದರಿಂದ ಕಾಡಂಚಿನ ಗ್ರಾಮಗಳ ಶಾಲಾ ಮಕ್ಕಳಲ್ಲಿ ಅರಣ್ಯದ ಬಗ್ಗೆ ಜಾಗೃತಿಯನ್ನು ಪರಿಣಾಮಕಾರಿ ಮೂಡಿಸಲು "ಯುವ ಮಿತ್ರ" ಕಾರ್ಯ ಕ್ರಮ ಯಶಸ್ವಿಯಾಗಿದೆ ಇದುವರೆಗೆ 3547 ವಿದ್ಯಾರ್ಥಿಗಳು, 277 ಶಿಕ್ಷಕರು, 103 ಗ್ರಾ.ಪಂ ಸದಸ್ಯರು ಹಾಗೂ ಸಿಬ್ಬಂದಿಗಳು ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡಿದ್ದಾರೆ.

ಕೈ ಜೋಡಿಸಿದ ಯುಎನ್‌ಡಿಪಿ: ಪರಿಸರ ಸಂರಕ್ಷಣೆ, ಹವಾಮಾನ, ಅರಣ್ಯ, ವನ್ಯಜೀವಿ ಸಂರಕ್ಷಣೆ ಕುರಿತಂತೆ ವಿಶ್ವದ 191 ರಾಷ್ಟ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಯುನೈಟೆಡ್ ನೇಷನ್ಸ್ ಡೆವಲಪ್‌ಮೆಂಟ್ ಪ್ರೋಗ್ರಾಂ (ಯುಎನ್‌ಡಿಪಿ) ವಿಭಾಗ ಬಂಡೀಪುರದ 'ಯುವ ಮಿತ್ರ' ಯೋಜನೆಯನ್ನು ಶ್ಲಾಘಿಸಿದ್ದು, ಈ ಯೋಜನೆ ಮುಂದುವರೆಸಲು ಬೇಕಾದ ನೆರವನ್ನು ನೀಡುವುದಾಗಿ ಭರವಸೆ ನೀಡಿದೆ. ಇದರಿಂದ ಬಂಡೀಪುರದಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದು, ಪ್ರಶಂಸೆಗೆ ಪಾತ್ರವಾಗಿದೆ.

ಸಮಿತಿ ರಚನೆ: ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಜಾರಿಗೆ ತಂದಿರುವ 'ಯುವ ಮಿತ್ರ' ಯೋಜನೆ ಸ್ಥಗಿತಗೊಳ್ಳದಂತೆ ನೋಡಿಕೊಳ್ಳಲು ಸಮಿತಿ ರಚಿಸಲಾಗಿದೆ. ಈ ಸಮಿತಿಯಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರು, ಬಿಇಓ, ಕೆಲ ಸ್ವಯಂ ಸೇವಾ ಸಂಸ್ಥೆಯ ಮುಖಂಡರನ್ನು ಸೇರಿಸಲು ನಿರ್ಧರಿಸಲಾಗಿದೆ. ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಯುವ ಮಿತ್ರ ಯೋಜನೆಯಲ್ಲಿ ಮಕ್ಕಳು ಕಲಿಯುವುದನ್ನು 3–4 ದಿನ ಖುದ್ದಾಗಿ ವೀಕ್ಷಿಸಿದ್ದು, ಈ ಕಾರ್ಯಕ್ರಮಕ್ಕೆ ನೆರವು ನೀಡುವುದಾಗಿ ಭರವಸೆ ನೀಡಿದ್ದಾರೆ. ಇದರಿಂದ ಸಮಿತಿಗೆ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಸೇರಿಸಲು ಉದ್ದೇಶಿಸಲಾಗಿದೆ.

'ಬಂಡೀಪುರ ನಮ್ಮದು' ಎಂಬ ಭಾವನೆ ಮೂಡಿಸಬೇಕು



ದೇಶದಲ್ಲಿಯೇ ಆನೆ ಸಂಖ್ಯೆಯಲ್ಲಿ ಮೊದಲ ಹಾಗೂ ಹುಲಿ ಸಂಖ್ಯೆಯಲ್ಲಿ ಎರಡನೇ ಸ್ಥಾನ ಪಡೆದಿರುವ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ವನ್ಯಜೀವಿ ಸುರಕ್ಷಣೆಯಲ್ಲೂ ಎರಡನೇ ಸ್ಥಾನ ಪಡೆದಿದೆ. ಇದೀಗ ಅರಣ್ಯದಂಚಿನ ಗ್ರಾಮಗಳ ಜನರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ನಡೆಸಬೇಕಾಗಿದೆ. ಅಲ್ಲದೆ ಸ್ಥಳೀಯರು ಬಂಡೀಪುರ ಅರಣ್ಯವನ್ನು 'ನಮ್ಮ ಬಂಡೀಪುರ' ಎಂದು ಹೆಮ್ಮೆಯಿಂದ ಹೇಳಬೇಕಾಗಿದೆ ದೇಶದಲ್ಲೇ ಮೊದಲ ಬಾರಿಗೆ ತಂದಿರುವ 'ಯುವ ಮಿತ್ರ' ಯೋಜನೆಗೆ ಪ್ರಶಂಸೆ ವ್ಯಕ್ತವಾಗುತ್ತಿದೆ 74 ಕಾರ್ಯಕ್ರಮಗಳಿಂದ ಒಟ್ಟು 3927 ಮಂದಿ ಪ್ರಯೋಜನ ಪಡೆದುಕೊಂಡಿದ್ದಾರೆ. ಈ ಕಾರ್ಯಕ್ರಮಕ್ಕೆ ಯುಎನ್‌ಡಿಪಿ ಪ್ರಶಂಸೆ ವ್ಯಕ್ತಪಡಿಸಿದೆ. ಈ ಕಾರ್ಯಕ್ರಮ ಸ್ಥಗಿತಗೊಳ್ಳದಂತೆ ನೋಡಿಕೊಳ್ಳುವ ಉದ್ದೇಶದಿಂದ ಸಮಿತಿಯೊಂದನ್ನು ರಚಿಸಲಾಗಿದೆ. ಗ್ರಾ.ಪಂ ಸದಸ್ಯರಿಗೂ ವನ್ಯಜೀವಿ ಸಂರಕ್ಷಣೆಯ ಜಾಗೃತಿ ಕಾರ್ಯಕ್ರಮ ನಡೆಸಲಾಗುತ್ತಿದೆ.

-ಡಾ.ಪಿ.ರಮೇಶ್ ಕುಮಾರ್, ನಿರ್ದೇಶಕರು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ

ಡಿ.ಬಿ.ಕುಪ್ಪೆ ಆಶ್ರಮ ಶಾಲೆಯಲ್ಲಿ ಉಚಿತ ಆರೋಗ್ಯ ತಪಾಸಣೆ



ಮೈಸೂರು,ಆ.17 (ಎಂಟಿವೈ)– ಹೆಚ್.ಡಿ.ಕೋಟೆ ತಾಲೂಕಿನ ಡಿ.ಬಿ.ಕುಪ್ಪೆ ಆಶ್ರಮ ಶಾಲೆಯಲ್ಲಿ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ವತಿಯಿಂದ ವಿದ್ಯಾರ್ಥಿಗಳಿಗೆ ಆರೋಗ್ಯ ತಪಾಸಣೆ ನಡೆಸಿ, ಅಗತ್ಯವುಳ್ಳವರಿಗೆ ಚಿಕಿತ್ಸೆ ನೀಡಲಾಯಿತು.

ನವದೆಹಲಿಯ ಬುಡಕಟ್ಟು ವ್ಯವಹಾರಗಳ ಸಚಿವಾಲಯ, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಹಾಗೂ ವಾಕ್ ಶ್ರವಣ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಿದ್ದ ಆರೋಗ್ಯ ತಪಾಸಣೆ ಶಿಬಿರದಲ್ಲಿ ಆಶ್ರಮ ಶಾಲೆಯ ವಿದ್ಯಾರ್ಥಿಗಳಿಗೆ ಆರೋಗ್ಯ ತಪಾಸಣೆ ಮಾಡಲಾಯಿತು.

ಈ ಶಿಬಿರವನ್ನು ಅಸಾಧಾರಣ ಶಾಲಾ ಮಕ್ಕಳ ಆರೋಗ್ಯ ತಪಾಸಣೆಗಾಗಿ ಆಯೋಜಿಸಲಾಗಿತ್ತು. ಆದರೆ, ಸಾಧಾರಣ ಮಕ್ಕಳು ಪಾಲ್ಗೊಂಡು ಆರೋಗ್ಯ ತಪಾಸಣೆಗೆ ಒಳಗಾದರು. ಶಿಬಿರದಲ್ಲಿ ಸಾಮಾನ್ಯ ತಪಾಸಣೆ, ದಂತ, ಕಿವಿ, ಮೂಗು, ಗಂಟಲು, ನೇತ್ರ ತಪಾಸಣೆ, ರಕ್ತ ಪರೀಕ್ಷೆ, ವಾಕ್ ಮತ್ತು ಶ್ರವಣ ಪರೀಕ್ಷೆ, ಮಕ್ಕಳಲ್ಲಿರುವ ಪೌಷ್ಟಿಕಾಂಶದ ಕೊರತೆ ಪತ್ತೆ ಹಚ್ಚುವಿಕೆಗೂ ಪರೀಕ್ಷೆ ನಡೆಸಲಾಯಿತು. ಶಾಲೆಯ 180 ವಿದ್ಯಾರ್ಥಿಗಳಿಗೆ 30 ಜನರ ವೈದ್ಯರ ತಂಡ ಆರೋಗ್ಯ ತಪಾಸಣೆ ನಡೆಸಿ ಉಚಿತವಾಗಿ ಔಷಧಿ ವಿತರಿಸಿದರು.

ಇದೇ ವೇಳೆ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ. ಎಲ್. ಶ್ರೀನಿವಾಸ್ ಮಾತನಾಡಿ, ನಮ್ಮ ಸಂಸ್ಥೆಯಿಂದ ಆರೋಗ್ಯ ತಪಾಸಣಾ ಶಿಬಿರ ನಡೆಸಿ ಮಕ್ಕಳಲ್ಲಿರುವ ಆರೋಗ್ಯ ಸಮಸ್ಯೆ ಗುರುತಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಈ ಹಿಂದೆ ಹುಣಸೂರು ತಾಲೂಕಿನ ನೆಲ್ಲೂರು ಪಾಲ ಆಶ್ರಮ ಶಾಲೆಯಲ್ಲಿ ಮಕ್ಕಳಿಗೆ ಆರೋಗ್ಯ ನಡೆಸಿದಾಗ 48 ಮಕ್ಕಳಿಗೆ ರಕ್ತಹೀನತೆ ಕಂಡುಬಂದಿದೆ. 3 ಮಕ್ಕಳಿಗೆ ಚರ್ಮಕ್ಕೆ ಸಂಬಂಧಿಸಿದ ಕಾಯಿಲೆ ಇದೆ. 5 ಮಕ್ಕಳಿಗೆ ಅನ್ನಾಂಗದ ಕೊರತೆ, 5 ಮಕ್ಕಳಿಗೆ ಹೃದಯದಲ್ಲಿ ತೊಂದರೆ ಕಂಡುಬಂದಿದ್ದು, ಈ ಎಲ್ಲಾ ಮಕ್ಕಳಿಗೆ ಸಂಬಂಧಪಟ್ಟ ವೈದ್ಯರ ಬಳಿ ಚಿಕಿತ್ಸೆ ಕೊಡಿಸುತ್ತೇವೆ ಎಂದರು.

ಡಿ.ಬಿ. ಕುಪ್ಪೆ ಸುತ್ತಮುತ್ತ ಯಾವುದೇ ಆಸ್ಪತ್ರೆಗಳಿಲ್ಲ. ಇದು ಕರ್ನಾಟಕದ ಕಡೆ ಗ್ರಾಮವಾಗಿದೆ. ಆದ್ದರಿಂದ ನಾವು ಮುಂದಿನ ದಿನಗಳಲ್ಲಿ ಹಾಡಿ ಜನರಿಗೂ ಆರೋಗ್ಯ ತಪಾಸಣಾ ಶಿಬಿರಗಳನ್ನು ನಡೆಸುತ್ತೇವೆ. ಚಾಮರಾಜನಗರ ಕೊಡಗು, ಚಿಕ್ಕಮಗಳೂರು ಜಿಲ್ಲೆಗಳ ಆಶ್ರಮ ಶಾಲೆಗಳಲ್ಲಿಯೂ ಮಕ್ಕಳಿಗೆ ಆರೋಗ್ಯ ತಪಾಸಣೆ ನಡೆಸಲಾಗುವುದು. ಈ ಶಿಬಿರ ಅತ್ಯಂತ ಯಶಸ್ವಿಯಾಗಿದ್ದು, ಎಲ್ಲಾ ವೈದ್ಯರು ಸಿಬ್ಬಂದಿಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಬಿ.ಎಸ್.ಪ್ರಭಾ ಅರಸ್, ತಾಲೂಕು ಕಲ್ಯಾಣಾಧಿಕಾರಿಗಳಾದ ಎಂ.ನಾರಾಯಣಸ್ವಾಮಿ, ಹೆಚ್.ಸಿ. ಬಸವರಾಜು, ಅರುಣ್ ಪ್ರಭು, ಮುಖ್ಯ ಶಿಕ್ಷಕ ಅಶೋಕ್, ಸಮುದಾಯ ಆರೋಗ್ಯಾಧಿಕಾರಿ ಡಾ. ರವೀಶ್, ಜೆಎಸ್‌ಎಸ್ ಆಸ್ಪತ್ರೆಯ ಮಕ್ಕಳ ದಂತ ವೈದ್ಯರಾದ ಡಾ. ಇಂದಿರಾ, ಡಾ.ಸುಷ್ಮಾ, ಡಾ. ಪ್ರಶಾಂತ್, ಡಾ. ಚೇತನ್, ಡಾ. ಸುನೀತಾಸಿಂಗ್, ಡಾ. ಮಹಾದೇವಪ್ಪ ಡಾ. ಮೌರ್ಯ, ಡಾ. ಸಾರಾನ್ಸ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ವಿದ್ಯುತ್ ವ್ಯತ್ಯಯ

ಮೈಸೂರು, ಆ.17– ಚುಂಚನಕಟ್ಟೆಯಲ್ಲಿ ತ್ರೈಮಾಸಿಕ ನಿರ್ವಹಣಾ ಕಾರ್ಯ ಕೈಗೊಳ್ಳುವುದರಿಂದ ಕೆ.ಆರ್ ನಗರ ಉಪ ವಿಭಾಗ ವ್ಯಾಪ್ತಿಗೆ ಒಳಪಡುವ ಹಳಿಯೂರು, ಹೊಸಪೇಟೆ, ಕುಪ್ಪೆ, ಮಾಯಗೌಡನಹಳ್ಳಿ, ಸಿದ್ದಾಪುರ, ಮಾವತ್ತೂರು ಹಾಗೂ ಕೆಸ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಎಲ್ಲಾ ಗ್ರಾಮಗಳಲ್ಲಿ ಆ.18 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಕೆ.ಆರ್ ನಗರ ತಾಲೂಕು ಚಾ.ವಿ.ಸ.ನಿ.ನಿಗಮದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚೆಲುವಾಂಬ ಪಾರ್ಕ್‌ನಲ್ಲಿ ಗಂಧದ ಮರ ಕಳವಿಗೆ ಯತ್ನ

ವಾಯುವಿಹಾರಿಗಳು ಪ್ರತಿರೋಧ; ಕಡಿದುರುಳಿಸಿದ ಮರ ಬಿಟ್ಟು ಪರಾರಿಯಾದ ಖದೀಮರು

ಮೈಸೂರು, ಆ. 17 (ಆರ್‌ಕೆ)– ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿ ಆಕಾಶವಾಣಿ ಎದುರಿನ ಚೆಲುವಾಂಬ ಪಾರ್ಕಿನಲ್ಲಿ ಶ್ರೀಗಂಧದ ಮರ ಕಳವಿಗೆ ವಿಫಲ ಯತ್ನ ನಡೆದಿದೆ.



ಇಂದು ಮುಂಜಾನೆ ಮರ ಕಡಿದುರುಳಿಸಿ ಕಾಂಡ ತುಂಡರಿಸುತ್ತಿದ್ದಾಗ ವಾಯು ವಿಹಾರಕ್ಕೆ ಬಂದ ಕೆಲವರು ಅದನ್ನು ಕಂಡು ಪ್ರಶ್ನಿಸಿದ್ದಾರೆ. ಖದೀಮರು ಮರ ಕಡಿಯಲು ತಂದಿದ್ದ ಮಚ್ಚು, ಕುಡುಗೋಲು ತೋರಿಸಿ, ಅವರನ್ನು ಹೆದರಿಸಿದರಾದರೂ, ವಾಯು ವಿಹಾರಿಗಳೆಲ್ಲರೂ ಸೇರಿ ಪ್ರತಿರೋಧವೊಡ್ಡಿದ್ದರಿಂದ ಗಂಧದ ಮರ ಬಿಟ್ಟು ಕಳ್ಳರು ಪರಾರಿಯಾಗಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ವಿ.ವಿ.ಪುರಂ ಠಾಣೆ ಪೊಲೀಸರು, ಅರಣ್ಯ ಇಲಾಖೆ ಅಧಿಕಾರಿಗಳನ್ನು ಕರೆಸಿಕೊಂಡು ಮಹಜರು ನಡೆಸಿದರು. ಪ್ರಕರಣ ದಾಖಲಿಸಿಕೊಂಡಿರುವ ಅರಣ್ಯ ಇಲಾಖೆ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ. ಪಾರ್ಕ್‌ಗಳಲ್ಲಿ ಗಿಡ ನೆಟ್ಟರೆ ಸಾಲದು. ಅವುಗಳ ಸಂರಕ್ಷಣೆಯನ್ನೂ ಮಾಡಬೇಕು. ವಾಯು ವಿಹಾರ ಮಾಡುವ ಸಾರ್ವಜನಿಕರ ರಕ್ಷಣೆ, ಭದ್ರತೆಗೂ ಕ್ರಮ ವಹಿಸಬೇಕೆಂದು ವಾಯು ವಿಹಾರಿಗಳು ಒತ್ತಾಯಿಸುತ್ತಿದ್ದರು.

ಆ.20ರಂದು 'ಸ್ವರಾಲಯ ಸಾಂಸ್ಕೃತಿಕ ಹಬ್ಬ–2023'

ಮೈಸೂರು, ಆ.17– ನಗರದ ರಾಮಕೃಷ್ಣನಗರದಲ್ಲಿರುವ ಸ್ವರಾಲಯ ಸಂಗೀತ ಸಂಸ್ಥೆಯು ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಯೋಗದೊಂದಿಗೆ ಆ.20ರ ಭಾನುವಾರ ಸಂಜೆ 4.30ಕ್ಕೆ ರಾಮಕೃಷ್ಣನಗರ, ಸುಯೋಗ್ ಆಸ್ಪತ್ರೆ ಹಿಂಭಾಗದಲ್ಲಿರುವ ರಮಾಗೋವಿಂದ ರಂಗಮಂದಿರದಲ್ಲಿ 'ಸ್ವರಾಲಯ ಸಾಂಸ್ಕೃತಿಕ ಹಬ್ಬ–2023 (ಭಾಗ–2)' ಆಚರಿಸಲಾಗುವುದು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಂಗೀತ ಶಿಕ್ಷಕಿ ವಿದುಷಿ ಎಂ.ವಿ. ಸುಧಾಕೃಷ್ಣರವರು ನೆರವೇರಿಸಲಿದ್ದು, ಮುಖ್ಯ ಅತಿಥಿಯಾಗಿ ಗೌರಿ ಸಂಗೀತ ಶಾಲೆಯ ಸಂಸ್ಥಾಪಕ ಅಧ್ಯಕ್ಷೆ ವಿದುಷಿ ರಮಾಮಣಿ ಗುರುಪ್ರಸಾದ್ ಭಾಗವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ಸ್ವರಾಲಯ ಅಧ್ಯಕ್ಷೆ ವಿದುಷಿ ಡಾ.ಸುಮಾ ಹರಿನಾಥ್ ವಹಿಸಲಿದ್ದಾರೆ. ವೇದಿಕೆ ಕಾರ್ಯಕ್ರಮದ ನಂತರ ಸಾಂಸ್ಕೃತಿಕ ಚಟುವಟಿಕೆಯಲ್ಲಿ ಸಂಸ್ಥೆಯ ವಿದ್ಯಾರ್ಥಿಗಳಿಂದ ಸುಗಮ ಸಂಗೀತ, ದಾಸರ ಪದಗಳ ಗಾಯನ, ದ್ವಂದ್ವ ಶಾಸ್ತ್ರೀಯ ಸಂಗೀತವನ್ನು ಏರ್ಪಡಿಸಲಾಗಿದೆ. ಸಾರ್ವಜನಿಕರಿಗೆ ಉಚಿತ ಪ್ರವೇಶವಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಕಲಾಭಿಮಾನಿಗಳು ಆಗಮಿಸಬೇಕೆಂದು ಸ್ವರಾಲಯದ ಕಾರ್ಯದರ್ಶಿ ಹೆಚ್.ಎಸ್.ಶ್ರೀಕಾಂತಾಮಣಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಕ್ರೀಡಾ ಸಂಕೀರ್ಣ ಅತಿ ಶೀಘ್ರದಲ್ಲೇ ಕ್ರೀಡಾಪಟುಗಳಿಗೆ ಮುಕ್ತ

ಮೈಸೂರು-ಕೊಡಗು ಸಂಸದರ ಅನುದಾನದಡಿ ನಿರ್ಮಾಣ

ಮೈಸೂರು, ಆ.17(ಜಿಎ)– ಮೈಸೂರಿನಲ್ಲಿ ನಿರ್ಮಾಣವಾಗುತ್ತಿರುವ ಕ್ರೀಡಾ ಸಂಕೀರ್ಣ ಕಾಮಗಾರಿ ಮುಕ್ತಾಯದ ಹಂತದಲ್ಲಿದೆ. 45 ದಿನಗಳೊಳಗೆ ಕ್ರೀಡಾಪಟುಗಳ ಬಳಕೆಗೆ ಮುಕ್ತವಾಗಲಿದೆ.

ನಗರದ ದಟ್ಟಗಳ್ಳಿಯ ಮುಡಾದ ಒಂದು ಮುಕ್ಕಾಲು ಎಕರೆಯ ಮೈದಾನದಲ್ಲಿ ಮೈಸೂರು ಕೊಡಗು ಸಂಸದರ ಅವರ ಅನುದಾನದಡಿ ಒಂದು ಕೋಟಿ ರೂ. ವೆಚ್ಚದಲ್ಲಿ ಕ್ರೀಡಾ ಸಂಕೀರ್ಣ ಕಾಮಗಾರಿ ನಾಲ್ಕು ತಿಂಗಳ ಹಿಂದೆಯೇ ಆರಂಭವಾಗಿದ್ದು, ಸದ್ಯದಲ್ಲಿಯೇ ಕ್ರೀಡಾಪಟುಗಳಿಗೆ ತಾಲೀಮು ಮಾಡಲು ಅವಕಾಶ ಸಿಗಲಿದೆ.

ಬೆಂಗಳೂರಿನಲ್ಲಿ ಬಿಬಿಎಂಪಿ ವತಿಯಿಂದ ಈ ರೀತಿಯ ಕ್ರೀಡಾ ಸಂಕೀರ್ಣಗಳನ್ನು ನಿರ್ಮಾಣ ಮಾಡಿ ಯಶಸ್ಸು ಕಂಡಿದ್ದು, ಅದರಂತೆ ಅದೇ ಮಾದರಿಯಲ್ಲಿ ಮೈಸೂರು ಸಂಸದರು ಮೈಸೂರಿನಲ್ಲಿ ಕ್ರೀಡಾ ಸಂಕೀರ್ಣ ಮಾಡಲು ಮುಂದಾಗಿದ್ದು, ಅದು ಮುಕ್ತಾಯದ ಹಂತ ತಲುಪಿದೆ.

ಸಂಸದ ಪ್ರತಾಪ್ ಸಿಂಹ, ಮೇಯರ್ ಶಿವಕುಮಾರ್ ಮತ್ತು ಅಧಿಕಾರಿಗಳು ಕ್ರೀಡಾ ಸಂಕೀರ್ಣಕ್ಕೆ ಭೇಟಿ ನೀಡಿ ಕಾಮಗಾರಿ ಪರಿಶೀಲನೆ ಮಾಡಿದರು.



ಈ ಕ್ರೀಡಾ ಸಂಕೀರ್ಣದಲ್ಲಿ 18X18 ಮೀಟರ್‌ನ ಎರಡು ಒಳಾಂಗಣ ಬ್ಯಾಡ್ಮಿಂಟನ್ ಕೋರ್ಟ್, 17X34 ಮೀಟರ್ ಟೆನಿಸ್ ಕೋರ್ಟ್, 18X27 ಮೀಟರ್‌ನ ಫುಟ್ಸಾಲ್ (ಬ್ಯಾಸ್ಕೆಟ್‌ಬಾಲ್ ಅಂಕಣದಂತಹ ಹಾರ್ಡ್ ಕೋರ್ಟ್‌ನಲ್ಲಿ, ಫುಟ್‌ಬಾಲ್ ಪಿಚ್. ಫೈವ್–ಎ–ಸೈಡ್ ಫುಟ್‌ಬಾಲ್) ಅಂಕಣವು ಒಳಗೊಂಡಿದೆ. ಇಷ್ಟೇ ಇಲ್ಲದೇ ಒಂದೇ ಸೂರಿನಡಿ ಟೆನಿಸ್, ಫುಟ್ಬಾಲ್, ಕ್ರಿಕೆಟ್, ಹಾಕಿ, ಮತ್ತು ಬಾಸ್ಕೆಟ್‌ಬಾಲ್ ಆಡಲು ಅವಕಾಶವಿದೆ.

ಈವರೆಗೂ ಯಾವುದೇ ಪ್ರವೇಶ ಶುಲ್ಕ ನಿಗದಿ ಮಾಡಿಲ್ಲ. ಆದರೆ, ಕಾಮಗಾರಿ ಮುಕ್ತಾಯವಾದ ನಂತರ ಮುಡಾ ವತಿಯಿಂದ ಟೆಂಡರ್ ಕರೆಯಲಾಗುತ್ತದೆ. ಟೆಂಡರ್ ಪ್ರಕ್ರಿಯೆ ಮುಗಿದ ನಂತರ ತಿಂಗಳು, ವರ್ಷ ಸೇರಿದಂತೆ ವಿವಿಧ ಹಂತಗಳಲ್ಲಿ ಸದಸ್ಯರನ್ನು ನೋಂದಣಿ ಮಾಡಿಕೊಳ್ಳಲಿದ್ದು, ಅದರಂತೆ ಶುಲ್ಕವನ್ನು ನಿಗದಿಪಡಿಸಲಿದ್ದಾರೆ.

ಈ ಸಂಬಂಧ ಮೈಸೂರು ಮಿತ್ರನೊಂದಿಗೆ ಸಂಸದ ಪ್ರತಾಪ್ ಸಿಂಹ ಮಾತನಾಡಿ, ಒಮ್ಮೆ ಬೆಂಗಳೂರಿನಲ್ಲಿ ಕ್ರೀಡಾ ಸಂಕೀರ್ಣಗಳನ್ನು ನೋಡಿದ್ದೆ. ಅದನ್ನು ಮೈಸೂರಿನಲ್ಲಿ ನಿರ್ಮಾಣ ಮಾಡಬೇಕೆಂಬ ಆಸೆ ಇತ್ತು. ಅದರಂತೆ ಈಗ ಕ್ರೀಡಾ ಸಂಕೀರ್ಣ ನಿರ್ಮಾಣ ಮಾಡಲಾಗುತ್ತಿದೆ ಎಂದರು.

ಬಹಳಷ್ಟು ಸುಸಜ್ಜಿತವಾಗಿ ಒಳಾಂಗಣ ಬ್ಯಾಡ್ಮಿಂಟನ್ ಕೋರ್ಟ್, ಟೆನಿಸ್ ಕೋರ್ಟ್, ಫುಟ್ಸಾಲ್, ಹಾಕಿ, ಮತ್ತು ಬ್ಯಾಸ್ಕೆಟ್ ಬಾಲ್ ಆಡಲು ಕ್ರೀಡಾ ಸಂಕೀರ್ಣದಲ್ಲಿ ಅಂಕಣಗಳನ್ನು ನಿರ್ಮಾಣ ಮಾಡಲಾಗಿದೆ. ಸುಮಾರು 45 ದಿನಗಳಲ್ಲಿ ಕಾಮಗಾರಿ ಪೂರ್ಣಗೊಂಡು ಲೋಕಾರ್ಪಣೆಗೊಳ್ಳಲಿದೆ ಎಂದು ತಿಳಿಸಿದರು.



ಮೈಸೂರಿನ ವಿಜಯನಗರ ಒಂದನೇ ಹಂತದ ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆಯ ಆವರಣದಲ್ಲಿರುವ ಬುದ್ಧವಿಹಾರದಲ್ಲಿ ಕರ್ನಾಟಕ ಬುದ್ಧ ಧಮ್ಮ ಸಮಿತಿ ವತಿಯಿಂದ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ಸಮಿತಿಯ ಪ್ರಧಾನ ಕಾರ್ಯದರ್ಶಿ ಆರ್.ಮಹದೇವಪ್ಪ ಧ್ವಜಾರೋಹಣ ನೆರವೇರಿಸಿದರು. ಲಡಾಖ್‌ನ ಸೋದೆ ಭಂತೇಜಿ, ಎಚ್.ಶಿವರಾಜು, ಆರ್.ನಟರಾಜು, ರಾಜು ಹಂಪಾಪುರ, ಶೇಖರ್, ಪುಟ್ಟಸ್ವಾಮಿ, ಮಹದೇವಯ್ಯ, ರೂಪೇಶ್, ಸುರೇಶ್, ವಿಜಯ್, ವಿಶಾಲ್ ಹಾಜರಿದ್ದರು.



ಮೈಸೂರಿನ ರಾಜೀವ್‌ನಗರದಲ್ಲಿರುವ ಶ್ರೀ ರಾಜೀವ್ ಗಾಂಧಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 77ನೇ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು. ನಗರಪಾಲಿಕೆ ಸದಸ್ಯೆ ಶ್ರೀಮತಿ ಪುಷ್ಪಲತಾ ಜಗನ್ನಾಥ್ ಧ್ವಜಾರೋಹಣ ನೆರವೇರಿಸಿದರು. ಸ್ಥಳೀಯ ಮುಖಂಡ ಸಿರಾಜುದ್ದೀನ್ ಹಾಗೂ ಚಂದನ್ ಉಪಸ್ಥಿತರಿದ್ದರು. ಮುಖ್ಯ ಶಿಕ್ಷಕ ಪ್ರಸನ್ನಕುಮಾರ್ ಎಂ.ಎಸ್. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.



ಮೈಸೂರಿನ ಚಾಮರಾಜ ಮೊಹಲ್ಲಾದ ಚೆಲುವಾಂಬ ಅಗ್ರಹಾರದಲ್ಲಿ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮವನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಬಡಾವಣೆಯ ಹಿರಿಯರಾದ ಕೆ.ರಾಜೇಂದ್ರ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಪ್ರಮಿಳಾ, ಮಾಜಿ ಸದಸ್ಯ ಪ್ರಶಾಂತ್‌ಗೌಡ, ವಿಷ್ಣುಕುಮಾರ್, ಸುದರ್ಶನ್, ಶ್ರೀನಿವಾಸ್, ಕುಮಾರ್, ನಾಗರಾಜ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಕುವೆಂಪುನಗರದ ಓಶನ್@9 ಡೆವಲಪರ್ಸ್ ಅಂಡ್ ಕನ್‌ಸ್ಟ್ರಕ್ಷನ್ ಸಂಸ್ಥೆ ವತಿಯಿಂದ 77ನೇ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ಮಾಜಿ ಸೈನಿಕ ಮಹೇಶ್ ಕುಮಾರ್ ಧ್ವಜಾರೋಹಣ ನೆರವೇರಿಸಿದರು. ಈ ವೇಳೆ ಕೆಆರ್‌ಎಸ್ ಆಸ್ಪತ್ರೆ ವೈದ್ಯಾಧಿಕಾರಿ ಡಾ.ಶಶಿಕುಮಾರ್, ಮಹಾಜನ ವಿದ್ಯಾಸಂಸ್ಥೆ ನಿವೃತ್ತ ಪ್ರಾಂಶುಪಾಲ ಶ್ರೀರಾಮ್ ಸ್ವಾಮಿ, ಸಂಸ್ಥೆ ಮ್ಯಾನೇಜಿಂಗ್ ಡೈರೆಕ್ಟರ್ ರಾಹುಲ್, ಪಡುವಾರಹಳ್ಳಿ ಯುವ ಮುಖಂಡ ರಾಘವ್ ಹಾಗೂ ಸಂಸ್ಥೆ ಸಿಬ್ಬಂದಿ ಇದ್ದರು.



ಮೈಸೂರಿನ ಬನ್ನಿಮಂಟಪ ನಿವಾಸಿಗಳ ಮತ್ತು ವ್ಯಾಪಾರಸ್ಥರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ 77ನೇ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ಶಾಸಕ ತನ್ವೀರ್ ಸೇಠ್ ಧ್ವಜಾರೋಹಣ ನೆರವೇರಿಸಿದರು. ಅಲ್-ಖಾಲಿದ್ ವೆಲ್‌ಫೇರ್ & ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಮೊಹಮ್ಮದ್ ಮುಮ್ತಾಜ್ ಅಹಮದ್, ಅಬ್ದುಲ್ ಅಜೀಜ್ ಚಾಂದ್ ಭಾಯ್, ನಗರಪಾಲಿಕೆ ಸದಸ್ಯರಾದ ರೇಷ್ಮಾ ಬಾನು, ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನದ ಟ್ರಸ್ಟಿ ಸುರೇಶ್, ಮಿರ್ಜಾ ಜಂಷೀದ್ ಬೇಗ್ ಅಶ್ರಫಿ, ಸೈಯದ್ ಸಿಬ್ಗತುಲ್ಲಾ ಯೂಸುಫ್ ಜಿದ್ದಾ, ಅಬ್ರಾರ್ ಅಹಮದ್, ಮುನಾವರ್, ಮೊಹಮ್ಮದ್ ಖೈಸರ್, ಅಲ್‌ಹಾಜ್ ಎಸ್.ಸ್ಟಾರ್ ಷಫಿ ಅಹಮದ್, ಅಬ್ದುಲ್ ಖಾದರ್ ಸೇಠ್ ಮತ್ತಿತರರು ಹಾಜರಿದ್ದರು.



ಮೈಸೂರಿನ ಬಿಜೆಪಿ ಪಕ್ಷದ ಕಚೇರಿಯಲ್ಲಿ 77ನೇ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು. ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಅವರು ಭಾರತಾಂಬೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು. ಬಿಜೆಪಿಯ ಹಿರಿಯ ಮುಖಂಡರಾದ ಎಸ್.ಜಯಪ್ರಕಾಶ್, ಮೈ.ವಿ.ರವಿಶಂಕರ್, ಗಿರಿಧರ್, ವಾಣೀಶ, ಸೋಮಸುಂದರ್, ನೇಹ, ಗಾಯತ್ರಿ, ಪಾಂಡೋಜಿ, ಜೋಗಿ ಮಂಜು, ಶ್ರೀಮತಿ ಶುಭಶ್ರೀ ಹನುಮಂತೇಗೌಡ, ದೇವರಾಜು, ಮಂಜು ಮತ್ತಿತರರು ಹಾಜರಿದ್ದರು.



ಮೈಸೂರಿನ ಬನ್ನಿಮಂಟಪ ಹುಡ್ಕೋ ಬಡಾವಣೆ ನಿವಾಸಿಗಳಿಂದ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ಈ ವೇಳೆ ಸೈಯದ್ ಸಲೀಂ, ನಾಸಿರ್ ಖಾನ್, ಮಿರ್ಜಾ ಜಂಷೀದ್ ಬೇಗ್ ಅಶ್ರಫಿ, ಪುಟ್ಟರಾಜು, ರಿಯಾಜ್ ಖಾನ್, ಮುದಾಸಿರ್ ಜಮೀಲ್, ಇಸ್ರಾರ್ ಅಹಮದ್ ಸಾಹೇಬ್, ಇತರರು ಹಾಜರಿದ್ದರು.

ಯಾವುದೇ ಕಾರಣಕ್ಕೂ 'ಶಕ್ತಿ ಯೋಜನೆ' ರದ್ದಾಗಲ್ಲ



ಬೆಂಗಳೂರು, ಆ.17– ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ಒದಗಿಸುವ 'ಶಕ್ತಿ ಯೋಜನೆ' ರದ್ದಾಗಲಿದೆ ಎಂಬ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ಕುರಿತು ಸಾಮಾಜಿಕ ಜಾಲತಾಣ ಟ್ವಿಟರ್‌ನಲ್ಲಿ ಟ್ವೀಟ್ ಮಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮೊದಲು ಗ್ಯಾರಂಟಿ ಯೋಜನೆಗಳು ಜಾರಿಯಾಗುವುದಿಲ್ಲ ಎಂದು ಅಪಪ್ರಚಾರ ಮಾಡಿದರು, ಈಗ ಈ ಯೋಜನೆಗಳು ಹೆಚ್ಚು ಕಾಲ ಚಾಲನೆಯಲ್ಲಿ ಇರುವುದಿಲ್ಲ ಎಂದು ಅಪಪ್ರಚಾರ ಆರಂಭಿಸಿದ್ದಾರೆ. ಇಂಥ ಸುಳ್ಳು ಸುದ್ದಿಗಳಿಗೆ ಕಿವಿಗೊಡಬೇಡಿ, ನಮ್ಮದು ನುಡಿದಂತೆ ನಡೆಯುತ್ತಿರುವ ಸರ್ಕಾರ. ಇದಕ್ಕೆ ನಾನೇ ಗ್ಯಾರಂಟಿ ಎಂದು ಹೇಳಿದ್ದಾರೆ.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಕೂಡ ಮುಂದಿನ 10 ವರ್ಷವೂ ಶಕ್ತಿ



ಯೋಜನೆ ಮುಂದುವರಿಯಲಿದೆ. ಒಂದು ಪಕ್ಷದಿಂದ ಸಾಮಾಜಿಕ ಜಾಲತಾಣಗಳಲ್ಲಿ ಅಪಪ್ರಚಾರ ಮಾಡಲಾಗುತ್ತಿದೆ ಯಾವುದೇ ಕಾರಣಕ್ಕೂ ಶಕ್ತಿ ಯೋಜನೆ ನಿಲ್ಲಲ್ಲ. ಮಹಿಳೆಯರು ಪಾಸ್ ತೆಗೆದುಕೊಳ್ಳುವ ಅಗತ್ಯವಿಲ್ಲ ಎಂದು ತಿಳಿಸಿದ್ದಾರೆ.

ಕರ್ನಾಟಕ ವಿಧಾನಸಭೆ ಚುನಾವಣೆಗೆ ಮುನ್ನ ಕಾಂಗ್ರೆಸ್ ಪಕ್ಷವು ನೀಡಿದ್ದ 5 ಗ್ಯಾರಂಟಿಗಳಲ್ಲಿ ಒಂದಾದ ಶಕ್ತಿ ಯೋಜನೆಯಡಿ ಸರ್ಕಾರಿ ಬಸ್‌ಗಳಲ್ಲಿ ರಾಜ್ಯಾದ್ಯಂತ ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯ ನೀಡಲಾಗುತ್ತಿದೆಯ ಈ ಯೋಜನೆಯನ್ನು ಜೂನ್ 11ರಂದು ಜಾರಿಗೆ ತರಲಾಗಿದೆ. ಈ ನಡುವೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆಎಸ್‌ಆರ್‌ಟಿಸಿ) ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಕೂಡ ಸ್ಪಷ್ಟನೆ ನೀಡಿದೆ.

ಶಕ್ತಿಯನ್ನು ಹಿಂತೆಗೆದುಕೊಳ್ಳುವುದಿಲ್ಲ ಸಾರ್ವಜನಿಕರು ವದಂತಿಗಳಿಗೆ ಕಿವಿಗೊಡಬಾರದು. ಯೋಜನೆಯ ಬಗ್ಗೆ ಸಾರ್ವಜನಿಕರಿಗೆ ನಿಯಮಿತವಾಗಿ ಮಾಹಿತಿ ನೀಡಲಾಗುವುದು ಎಂದು ಹೇಳಿದೆ.

ಕಾಂಗ್ರೆಸ್ ಸರ್ಕಾರ ಮಹತ್ವಾಕಾಂಕ್ಷೆಯ ಶಕ್ತಿ ಯೋಜನೆ ಸ್ವಾತಂತ್ರ್ಯ ದಿನಾಚರಣೆ ಬಳಿಕ ಸ್ಥಗಿತಗೊಳ್ಳಲಿದೆ ಎಂಬ ವದಂತಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಈ ವದಂತಿಯನ್ನು ನಂಬಿದ್ದ ಹಲವರು ಗೊಂದಲಕ್ಕೊಳಗಾಗಿದ್ದರು.

KSRTCಗೆ 'ಏಷ್ಯಾದ ಅತ್ಯುತ್ತಮ ಉದ್ಯೋಗದಾತ' ಬ್ರ್ಯಾಂಡ್ ಪ್ರಶಸ್ತಿ

ಬೆಂಗಳೂರು, ಆ.17– ದೇಶದ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಅತ್ಯುತ್ತಮ ಸಂಚಾರ ಸೇವೆ ಒದಗಿಸುತ್ತಿರುವ ಸಂಸ್ಥೆಗಳಲ್ಲಿ ಪ್ರಮುಖ ಸಂಸ್ಥೆಯಾಗಿರುವ ಕೆಎಸ್‌ಆರ್‌ಟಿಸಿ ಈ ಬಾರಿ ಏಷ್ಯಾದ ಅತ್ಯುತ್ತಮ ಉದ್ಯೋಗದಾತ ಬ್ರ್ಯಾಂಡ್ ಪ್ರಶಸ್ತಿ ಲಭಿಸಿದ್ದು, ಕೆಎಸ್‌ಆರ್‌ಟಿಸಿ ಮುಕುಟಕ್ಕೆ ಜಾಗತಿಕ ಮನ್ನಣೆ ಸಿಕ್ಕಂತಾಗಿದೆ.

ಸಿಂಗಾಪುರದ ವಿಶ್ವ ಸುಸ್ಥಿರ ಕಾಂಗ್ರೆಸ್ ನೀಡುವ ಏಷ್ಯಾದ ಅತ್ಯುತ್ತಮ ಉದ್ಯೋಗದಾತ ಬ್ರ್ಯಾಂಡ್ 2023ನೇ ಸಾಲಿನ 14ನೇ ಆವೃತ್ತಿಯ 18ನೇ ಪ್ರಶಸ್ತಿಗೆ ನಿಗಮವು ಅತ್ಯುತ್ತಮ ಮಾನವ ಸಂಪನ್ಮೂಲ ಉಪಕ್ರಮಗಳ ಅನುಷ್ಠಾನ ವರ್ಗದಲ್ಲಿ ಆಯ್ಕೆಯಾಗಿದೆ. ಇಂದು ಸಿಂಗಾಪುರದಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನಿಗಮದ ಪರವಾಗಿ ಮುಖ್ಯ ಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರ್ತಿ ಮಂಜುಳ ನಾಯ್ಕ್, ಮಂಡಳಿ ಕಾರ್ಯದರ್ಶಿ ಹಾಗೂ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಡಾ.ಲತಾ ಟಿ.ಎಸ್ ಪ್ರಶಸ್ತಿ ಸ್ವೀಕರಿಸಿದರು.

ಹೊಸ ಸೇವೆಗಳನ್ನು ಪರಿಚಯಿಸುವ ಮೂಲಕ ದೇಶದ ಗಮನ ಸೆಳೆದಿರುವ ಕೆಎಸ್‌ಆರ್‌ಟಿಸಿ ಹಲವಾರು ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದೆ. 2018–19ರಲ್ಲಿ ಜೀವನಮಟ್ಟ ಸುಧಾರಿಸುವ ಉತ್ತಮ ಉಪಕ್ರಮಗಳ ಪ್ರಶಸ್ತಿ, ಅತ್ಯುತ್ತಮ ಪ್ರಯಾಣಿಕ ಸಾರಿಗೆ ಸಂಸ್ಥೆ ವಿಭಾಗದಲ್ಲಿ ಎಕ್ಸಲೆನ್ಸಿ ಪ್ರಶಸ್ತಿ ಪಡೆಯಲಾಗಿತ್ತು. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು 2020ರಲ್ಲಿ ಶ್ರೀ ಶೌಚಾಲಯ ಮತ್ತು ಮೊಬೈಲ್ ಫೀವರ್ ಕ್ಲಿನಿಕ್ ಅಭಿವೃದ್ಧಿಪಡಿಸಿದ್ದಕ್ಕಾಗಿ ರಾಷ್ಟ್ರೀಯ ಉದ್ದಿಮೆಗಳ ಅತ್ಯುತ್ತಮ



ಪ್ರಶಸ್ತಿ ಪಡೆದುಕೊಂಡಿತ್ತು. 2021ರಲ್ಲಿ ಭಾರತೀಯ ಸಾರ್ವಜನಿಕ ಮಂಡಳಿ ನೀಡುವ ಪಿಆರ್‌ಸಿಐ ಎಕ್ಸಲೆನ್ಸ್ ಪ್ರಶಸ್ತಿಯನ್ನು ಐದು ವರ್ಗದಲ್ಲಿ ಸಾಧಿಸಿದೆ. ಇದೀಗ ಈ ಬಾರಿ ಏಷ್ಯಾದ ಅತ್ಯುತ್ತಮ ಉದ್ಯೋಗದಾತ ಬ್ರ್ಯಾಂಡ್ ಪ್ರಶಸ್ತಿ ಪಡೆದುಕೊಂಡು ಸಾರಿಗೆ ಸಂಸ್ಥೆಯ ಕೀರ್ತಿಯನ್ನು ಮತ್ತಷ್ಟು ಹೆಚ್ಚಿಸಿಕೊಂಡಿದೆ.

ಕೆಎಸ್‌ಆರ್‌ಟಿಸಿ ನಾಲ್ಕು ಸಂಸ್ಥೆಗಳಾಗಿ ವಿಭಜನೆ: ಪ್ರಯಾಣಿಕರಿಗೆ ಉತ್ತಮ ಗುಣಮಟ್ಟದ ಸೇವೆ ಒದಗಿಸಲು ಹಾಗೂ ಆಡಳಿತಾತ್ಮಕ ದೃಷ್ಟಿಯಿಂದ ಸರ್ಕಾರವು ಕೆಎಸ್‌ಆರ್‌ಟಿಸಿಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಸಂಸ್ಥೆಗಳನ್ನಾಗಿ ವಿಭಜಿಸಿದೆ. 1996–97ರ ವರೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಏಕೀಕೃತ ಸಂಸ್ಥೆಯಾಗಿಯೇ ಕಾರ್ಯನಿರ್ವಹಿಸುತ್ತಿತ್ತು. ಆದರೆ 1997–98ನೇ ಸಾಲಿನಲ್ಲಿ ಸರ್ಕಾರವು ಕ.ರಾ.ರ.ಸಾ ಸಂಸ್ಥೆಯಿಂದ ಎರಡು ಹೊಸ ಸಂಸ್ಥೆಗಳನ್ನು ಹುಟ್ಟುಹಾಕಿತು. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಮತ್ತು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳಾಗಿ ಹೊಸದಾಗಿ ಪ್ರಾರಂಭಿಸಿತು.

ಚಂದ್ರಯಾನ–3 ಲ್ಯಾಂಡರ್ ಪ್ರತ್ಯೇಕ ಪ್ರಕ್ರಿಯೆ ಯಶಸ್ವಿ: ಇಸ್ರೋ

ಬೆಂಗಳೂರು, ಆ.17– ಚಂದ್ರಯಾನ–3 ರಲ್ಲಿ ಇಸ್ರೋ ಮತ್ತೊಂದು ಮಹತ್ವದ ಘಟ್ಟ ತಲುಪಿದ್ದು, ಲ್ಯಾಂಡರ್ ಪ್ರತ್ಯೇಕ ಪ್ರಕ್ರಿಯೆ ಯಶಸ್ವಿಯಾಗಿದೆ ಎಂದು ಬಾಹ್ಯಾಕಾಶ ಸಂಸ್ಥೆ ತಿಳಿಸಿದೆ. ಪ್ರೊಪಲ್ಷನ್ ಮಾಡ್ಯೂಲ್‌ನಿಂದ ಪ್ರತ್ಯೇಕಗೊಂಡ ಲ್ಯಾಂಡರ್, ಚಂದ್ರನ ಅಂತಿಮ ಕಕ್ಷೆ ಪ್ರವೇಶಿಸಿದ್ದು, ಚಂದ್ರನಿಗೆ ಮತ್ತಷ್ಟು ಹತ್ತಿರವಾಗಿದೆ. ನಾಳೆ ಸಂಜೆ ವೇಳೆಗೆ ಡೀ–ಬೂಸ್ಟಿಂಗ್ ನಡೆಯಲಿದ್ದು, ಲ್ಯಾಂಡರ್ ಅನ್ನು ಹಂತ ಹಂತವಾಗಿ ಚಂದ್ರನ ಮೇಲ್ಮೈಗೆ ಇಳಿಸುವ ಪ್ರಕ್ರಿಯೆ ಪ್ರಾರಂಭವಾಗಲಿದೆ.

ಜುಲೈ 14ರಂದು ಉಡಾವಣೆಗೊಂಡ ಚಂದ್ರಯಾನ–3 ನೌಕೆ ಆಗಸ್ಟ್ 5ರಂದು ಚಂದ್ರನ ಕಕ್ಷೆ ಪ್ರವೇಶಿಸಿತ್ತು. ಅದಾದ ಬಳಿಕ ಸತತ ಮೂರು ಕಕ್ಷೆ ಪರಿಚಲನೆ ಮೂಲಕ (ಆಗಸ್ಟ್ 6, 9 ಹಾಗೂ 14) ಚಂದ್ರನ ಮೇಲ್ಮೈಯ ಸನಿಹಕ್ಕೆ ತಲುಪಿದೆ. ಆಗಸ್ಟ್ 23ರಂದು ಸಾಫ್ಟ್ ಲ್ಯಾಂಡಿಂಗ್ ಮೂಲಕ ಚಂದ್ರನ ಮೇಲ್ಮೈಯಲ್ಲಿ ಲ್ಯಾಂಡರ್ ಅನ್ನು ಸುರಕ್ಷಿತವಾಗಿ ಇಳಿಸಲು ಯೋಜಿಸಲಾಗಿದೆ.



ಮೈಸೂರಿನ ಮಂಡಕಳ್ಳಿ ಸಮೀಪವಿರುವ ಭೀಮ ಅಶ್ವಿನಿ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದಿಂದ ಸ್ವಾತಂತ್ರ್ಯ ದಿನ ಆಚರಿಸಲಾಯಿತು.

ಕೃಷಿ ಸಂಬಂಧಿತ ಸಮಗ್ರ ಮಾಹಿತಿಗೆ ಏಕೀಕೃತ ರೈತ ಕರೆ ಕೇಂದ್ರ ಹೆಚ್ಚು ಪರಿಣಾಮಕಾರಿ

ಬೆಂಗಳೂರು, ಆ.17(ಕೆಎಂಶಿ) – ಕೃಷಿ ಸಂಬಂಧಿತ ಮಾಹಿತಿ, ಸಲಹೆ, ಮಾರ್ಗದರ್ಶನ ಪಡೆಯಲು ಏಕೀಕೃತ ರೈತ ಕರೆ ಕೇಂದ್ರ ಹೆಚ್ಚು ಪರಿಣಾಮಕಾರಿಯಾಗಲಿದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ.

ಕೃಷಿ ಇಲಾಖೆಯ ಕೃಷಿ ಆಯುಕ್ತಾಲಯದಲ್ಲಿ ರೈತ ಕರೆ ಕೇಂದ್ರ ಉದ್ಘಾಟಿಸಿ, 2023–24 ನೇ ಸಾಲಿನ ಬೆಳೆ ಸಮೀಕ್ಷೆ ಕಾರ್ಯಕ್ರಮದಡಿ ತಾಲೂಕು ಮಟ್ಟದ ಮಾಸ್ಟರ್ ತರಬೇತುದಾರರಿಗೆ ಏರ್ಪಡಿಸಿದ್ದ ರಾಜ್ಯಮಟ್ಟದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ, ಭೀಮಾ ಪಲ್ಸ್ ತೊಗರಿ ಬೇಳೆ ಬ್ರಾಂಡ್ ಬಿಡುಗಡೆ ಮಾಡಿ ಸಚಿವರು ಮಾತನಾಡಿದರು. ಬೆಳೆ, ಹವಾಮಾನ, ವಿಮೆ, ರೈತ ವಿದ್ಯಾನಿಧಿ, ಕೃಷಿ ಸಂಜೀವಿನಿ, ಪಿಎಂ ಕಿಸಾನ್, ಕೆ.ಕಿಸಾನ್, ಬೆಳೆ ಸಮೀಕ್ಷೆ ಮತ್ತಿತರ ವಿಷಯಗಳಲ್ಲಿ ಉಪಯುಕ್ತ ಮಾಹಿತಿ,



ಸಲಹೆ ಹಾಗೂ ಮಾರ್ಗದರ್ಶನಗಳನ್ನು ಸುಲಭವಾಗಿ ಒದಗಿಸುವುದು ಏಕೀಕೃತ ರೈತ ಕರೆ ಕೇಂದ್ರದ ಉದ್ದೇಶ ಎಂದರು. ಈ ಹಿಂದೆ ವಿವಿಧ ಯೋಜನೆಗಳಿಗೆ ಇದ್ದ 8 ಪ್ರತ್ಯೇಕ ಕರೆ ಸಂಖ್ಯೆಗಳನ್ನು ಒಗ್ಗೂಡಿಸಿ ಏಕೀಕೃತ ಕರೆ ಕೇಂದ್ರ ಸ್ಥಾಪಿಸಲಾಗಿದೆ. 1800–425–3553 ನೂತನ ಏಕೀಕೃತ ಸಹಾಯವಾಣಿ ಕರೆ ಸಂಖ್ಯೆಗೆ ಕರೆ ಮಾಡಿ ಮಾಹಿತಿ ಪಡೆಯಬಹುದಾಗಿದೆ ಎಂದು ಹೇಳಿದರು. ಮಾಹಿತಿ ಹಾಗೂ ತಾಂತ್ರಿಕ ನೆರವಿನ ಜೊತೆಗೆ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೂ ಇಲಾಖೆ ಮುಂದಾಗಿದೆ. ಇದರ ಅಂಗವಾಗಿ ಭೀಮಾ ಪಲ್ಸ್ ಎಂಬ ಬ್ರಾಂಡ್ ತೊಗರಿ ಬೇಳೆ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ ಎಂದರು.

ರೈತರಿಗೆ ಸರ್ಕಾರದ ಯೋಜನೆಗಳು ಸಮರ್ಪಕವಾಗಿ ತಲುಪಲು ಬೆಳೆ ಸಮೀಕ್ಷೆ ಕೂಡ ಪ್ರಮುಖ. ಕ್ಷೇತ್ರ ಮಟ್ಟದಲ್ಲಿ ಸಮೀಕ್ಷೆ ನಡೆಸುವವರಿಗೆ ತಾಂತ್ರಿಕ ಅರಿವು ಹಾಗೂ ಇತರ ಮಾಹಿತಿ ಅಗತ್ಯ. ಹೀಗಾಗಿ ರಾಜ್ಯ ಮಟ್ಟದಲ್ಲಿ ಬೆಳೆ ಸಮೀಕ್ಷೆ ಮಾಸ್ಟರ್ ತರಬೇತುದಾರರ ತರಬೇತಿ ಹಮ್ಮಿಕೊಳ್ಳಲಾಗಿದೆ. ಎಲ್ಲಾ ಅಧಿಕಾರಿ, ಸಿಬ್ಬಂದಿ ಜವಾಬ್ದಾರಿಯಿಂದ ರೈತರ ಹಿತ ಗಮನದಲ್ಲಿಟ್ಟು ಸಮೀಕ್ಷೆ ನಡೆಸಬೇಕು. ಕಂದಾಯ, ಕೃಷಿ,ತೋಟಗಾರಿಕೆ, ರೇಷ್ಮೆ ಇಲಾಖೆ ಜಂಟಿಯಾಗಿ ಬೆಳೆ ಸಮೀಕ್ಷೆ ಕಾರ್ಯದಲ್ಲಿ ತೊಡಗುತ್ತಿವೆ ಇದರಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳನ್ನು ತೊಡಗಿಸಿಕೊಂಡರೆ ಉತ್ತಮ ಎಂದು ಹೇಳಿದರು.



ಮೈಸೂರಿನ ಕುವೆಂಪುನಗರದ ವಿಶ್ವಮಾನವ ಜೋಡಿ ರಸ್ತೆಯಲ್ಲಿರುವ ನಾಗರಿಕ ವೇದಿಕೆಯ ಪೂರ್ಣಪ್ರಜ್ಞಾ ವಿದ್ಯಾಕೇಂದ್ರ ಶಾಲೆಯಲ್ಲಿ 77ನೇ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ನಾಗರಿಕ ವೇದಿಕೆ ಅಧ್ಯಕ್ಷ ಶ್ರೀರಂಗಯ್ಯ, ಶಾಲಾ ಸಮಿತಿ ಅಧ್ಯಕ್ಷ ಲಯನ್ ಜೆ ಲೋಕೇಶ್, ಕಾರ್ಯದರ್ಶಿ ಕುಳ್ಳೇಗೌಡ, ಉಪಾಧ್ಯಕ್ಷ ಅರವಿಂದ್, ಖಜಾಂಚಿ ಎಸ್.ಪಿ. ತ್ಯಾಗರಾಜು, ದೇವಸ್ಥಾನ ಸಮಿತಿ ಅಧ್ಯಕ್ಷ ಶೈಲೇಂದ್ರ, ಸದಸ್ಯರಾದ ರೇವಣ್ಣರಾಜು, ಲಕ್ಷ್ಮಿಗೌಡ, ರಮೇಶ್, ಎಚ್.ಕೆ.ಅಪ್ಪಾಜಿಗೌಡ, ಮುಖ್ಯೋಪಾಧ್ಯಾಯಿನಿ ಶಾಮಲಾದೇವಿ, ಶಿಕ್ಷಕಿಯರಾದ ಯಮುನಾರಾಣಿ, ಸಂಧ್ಯಾ, ಗೀತಾ, ಲೀಲಾವತಿ, ಮೀನಾಕ್ಷಿ, ಲತಾ, ಶಿಲ್ಪಶ್ರೀ, ಮಾಲತಿ, ಗೀತಾ ಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಸರ್ ಎಂ ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದಿಂದ ಸ್ವಾತಂತ್ರ್ಯ ದಿನ ಹಾಗೂ ಸಂಗೊಳ್ಳಿ ರಾಯಣ್ಣ ಜಯಂತಿಯನ್ನು ಸಂಘದ ಕಚೇರಿಯಲ್ಲಿ ಆಚರಿಸಲಾಯಿತು. ಈ ವೇಳೆ ಮಹೇಶ್, ಸುರೇಶ್ ಕುಮಾರ್, ರವಿಕುಮಾರ್, ಪಳನಿ, ಪ್ರಕಾಶ್, ಅನಿಲ್, ಚಂದ್ರೇಗೌಡ, ಶಿವರಾಜ್, ರುದ್ರಸ್ವಾಮಿ, ಸಂತೋಷ್ ಕುಮಾರ್, ಮೊಹಮ್ಮದ್ ಜಾಕಿರ್ ಹುಸೇನ್, ಕುಮಾರ್, ರಮೇಶ್ ಉಪಸ್ಥಿತರಿದ್ದರು.

ಆ.20, ಡಿ.ದೇವರಾಜ ಅರಸು ಜನ್ಮ ದಿನಾಚರಣೆ

ಮೈಸೂರು,ಆ.17– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೈಸೂರು ವತಿಯಿಂದ ಶೋಷಿತರ ಅಭಿವೃದ್ಧಿ ಹರಿಕಾರ, ನೊಂದವರ ನಂದಾದೀಪ, ಧೀಮಂತ ನಾಯಕ ಮಾಜಿ ಮುಖ್ಯಮಂತ್ರಿಗಳಾದ ಡಿ.ದೇವರಾಜ ಅರಸು ಅವರ 108ನೇ ಜನ್ಮ ದಿನಾಚರಣೆಯನ್ನು ಆ.20 ರಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಕರ್ನಾಟಕ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆಯ ಸಚಿವ ಕೆ.ವೆಂಕಟೇಶ್ ಉಪಸ್ಥಿತಿಯಲ್ಲಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ನೆರ



ವೇರಿಸಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ವಹಿಸುವರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಹಾನಗರ ಪಾಲಿಕೆ ಮೇಯರ್ ಶಿವಕುಮಾರ್, ಲೋಕಸಭಾ ಸದಸ್ಯರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್ ಪ್ರಸಾದ್ ಹಾಗೂ ಸುಮಲತಾ ಅಂಬರೀಶ್ ಭಾಗವಹಿಸಲಿದ್ದಾರೆ. ಸಮಾರಂಭದ ಅತಿಥಿಗಳಾಗಿ ವಿಧಾನಸಭಾ ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಅನಿಲ್ ಕುಮಾರ್.ಸಿ, ರವಿಶಂಕರ್.ಡಿ, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಟಿ.ಎಸ್ ಶ್ರೀವತ್ಸ ವಿಧಾನಪರಿಷತ್ತಿನ ಶಾಸಕರಾದ ಮರಿತಿಬ್ಬೇಗೌಡ, ಹೆಚ್.ವಿಶ್ವನಾಥ್, ಡಾ.ಡಿ ತಿಮ್ಮಯ್ಯ, ಮಧು ಜಿ ಮಾದೇಗೌಡ, ಸಿ.ಎನ್.ಮಂಜೇಗೌಡ ಹಾಗೂ ಉಪ ಮೇಯರ್ ಡಾ.ಜಿ ರೂಪ ಹಾಗೂ ಮುಖ್ಯ ಭಾಷಣಕಾರರಾಗಿ ಮುಕ್ತಗಂಗೋತ್ರಿಯ ಕುವೆಂಪು ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಸಂಯೋಜನಾಧಿಕಾರಿ ಡಾ.ಎನ್.ಆರ್ ಚಂದ್ರೇಗೌಡ ಭಾಗವಹಿಸುವರು ಎಂದು ಜಿಲ್ಲಾಡಳಿತ ಪ್ರಕಟಣೆಯಲ್ಲಿ ತಿಳಿಸಿದೆ.



ಮೈಸೂರಿನ ಪಿಕೆಟಿಬಿ ಮತ್ತು ಸಿಡಿ ಆಸ್ಪತ್ರೆಯಲ್ಲಿ 77ನೇ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು. ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಸಿ.ಪ್ರಶಾಂತ್, ಆಪ್ತ ಸಮಾಲೋಚಕರಾದ ನಾಗೇಂದ್ರ ಪ್ರಸಾದ್, ಗೀತಾ, ಪ್ರಯೋಗಶಾಲೆ ವಿಭಾಗದ ಪುಟ್ಟರಾಜು, ಉಷಾ ಅರಸ್, ದಿಲೀಪ್, ಮೂರ್ತಿ, ಮೇಘನಾ, ಮಹೇಶ್ ಇತರರು ಹಾಜರಿದ್ದರು.

ಪೌರ ಕಾರ್ಮಿಕರಾದ ಪಲ್ಲಮ್ಮರಿಗೆ ಧ್ವಜಾರೋಹಣ ಭಾಗ್ಯ

ಮೈಸೂರು, ಆ. 17– ಪೌರಕಾರ್ಮಿಕ ಮಹಿಳೆಯೊಬ್ಬರಿಗೆ ಧ್ವಜಾರೋಹಣ ಮಾಡಲು ಅವಕಾಶ ಕಲ್ಪಿಸುವ ಮೂಲಕ ಮೈಸೂರಿನ ನವಭಾರತ್ ಸೇವಾ ಟ್ರಸ್ಟ್ ವತಿಯಿಂದ ವಿನೂತನವಾಗಿ 77ನೇ ಸ್ವಾತಂತ್ರ್ಯ ದಿನ ಆಚರಿಸಲಾಯಿತು.

ಹೆಬ್ಬಾಳು ಬಡಾವಣೆಯಲ್ಲಿರುವ ಟ್ರಸ್ಟ್ ಆಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪೌರಕಾರ್ಮಿಕ ಮಹಿಳೆ ಪಲ್ಲಮ್ಮ ಅವರು 77ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಧ್ವಜಾರೋಹಣ ಮಾಡಿದರು.



ಈ ವೇಳೆ ಮಾತನಾಡಿದ ಪಲ್ಲಮ್ಮ, ನನ್ನಂತಹವರಿಗೆ ಈ ರೀತಿಯ ಅವಕಾಶ ನೀಡುವ ಮೂಲಕ ನಮ್ಮನ್ನು ಸಮಾಜದ ಮುನ್ನೆಲೆಗೆ ತರುವ ಪ್ರಯತ್ನ ಮಾಡಿರುವುದಕ್ಕೆ ಖುಷಿ ಆಗುತ್ತಿದೆ ಎಂದರು.

ಸ್ವಚ್ಛತೆಯೇ ನಮ್ಮ ಬದುಕು ಎಂದುಕೊಂಡವರಿಗೆ ಇಂತಹ ಅವಕಾಶಗಳು ಬೇಕಿದೆ. ನಮ್ಮಂತಹವರೂ ಈ ಸಮಾಜದಲ್ಲಿ ಗೌರವಯುತ ಬದುಕು ಸಾಗಿಸಲು ಅವಕಾಶ ಕೊಟ್ಟ ನಗರಪಾಲಿಕೆ ಸದಸ್ಯರಾದ ಕೆ.ವಿ.ಶ್ರೀಧರ್ ಅವರಿಗೆ ಧನ್ಯವಾದ ಸಲ್ಲಿಸುವುದಾಗಿ ಹೇಳಿದರು.

ನಗರಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್ ಮಾತನಾಡಿ, 77ನೇ ಸ್ವಾತಂತ್ರ್ಯ ದಿನಾಚರಣೆಯ ಈ ಸಂದರ್ಭದಲ್ಲಿ ಓರ್ವ ಪೌರಕಾರ್ಮಿಕ ಮಹಿಳೆಯಿಂದ ಧ್ವಜಾರೋಹಣ ನೆರವೇರಿಸಿರುವುದು ಹೆಚ್ಚಿನ ಸಂತೋಷ ತಂದಿದೆ. ಏಕೆಂದರೆ, ಸಮಾಜದ ಮುಖ್ಯಸ್ತರಗಳಲ್ಲಿ ಉಳ್ಳವರೇ ಹಾಸುಹೊಕ್ಕಾಗಿದ್ದಾರೆ. ಪರಿಣಾಮ, ಇಲ್ಲದವರು ಮೂಲೆಗುಂಪಾಗುತ್ತಿದ್ದಾರೆ. ಈ ರೀತಿಯ ತಾರತಮ್ಯ ಸಲ್ಲದು ಎಂದರು.

ನಮ್ಮ ಮನೆಯ ಗಲೀಜಿನ ಬಗ್ಗೆ ಅಸಹ್ಯ ಮಾಡಿಕೊಳ್ಳುವ ನಾವು ಇಡೀ ನಗರದ ಸ್ವಚ್ಛತೆ ಕಾಪಾಡುವವರ ಬಗ್ಗೆ ಕನಿಷ್ಠ ಪ್ರಮಾಣದ ಕಾಳಜಿ ವಹಿಸಬೇಕು. ಅವರಿಲ್ಲದ ಸಮಾಜವನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ ಎಂಬ ವಿಚಾರ ನಮಗೆ ತಿಳಿದಿರಬೇಕು. ಆಗ ಮಾತ್ರ ಅವರಿಗೆ ಗೌರವ ನೀಡಲು ಸಾಧ್ಯ ಎಂದು ಹೇಳಿದರು. ಸಮಾಜದ ಮುಖ್ಯವಾಹಿನಿಯಲ್ಲಿ ಇರುವವರನ್ನೇ ವೇದಿಕೆ ಮೇಲೆ ಕುಳ್ಳಿರಿಸಿ ರಾಷ್ಟ್ರೀಯ ಹಬ್ಬ ಆಚರಿಸುವುದು ಹಿಂದಿನಿಂದ ನಡೆದುಕೊಂಡು ಬಂದಿರುವ ಸಂಪ್ರದಾಯ. ಆದರೆ, ಇಂದು ಅದಕ್ಕೆ ವ್ಯತಿರಿಕ್ತವಾಗಿ ಹೊಂಗಮ್ಮ ಅವರಂತಹವರಿಗೆ ಅವಕಾಶ ಕಲ್ಪಿಸಿರುವುದು ಹೆಮ್ಮೆಯ ವಿಚಾರ ಎಂದು ತಿಳಿಸಿದರು.

ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡುವಲ್ಲಿ ಅಹಿಂಸಾ ಹೋರಾಟದೊಂದಿಗೆ ಕ್ರಾಂತಿಕಾರಿ ಹೋರಾಟವೂ ಪ್ರಮುಖವಾಗಿದೆ. ಈ ಸಂದರ್ಭದಲ್ಲಿ ಭಾರತ ಮಾತೆಯನ್ನು ಬ್ರಿಟಿಷರ ಸಂಕೋಲೆಯಿಂದ ಬಿಡಿಸಲು ಶಾಂತಿ ಹಾಗೂ ಕ್ರಾಂತಿಯ ಹಾದಿ ಹಿಡಿದು ತಮ್ಮ ಕುಟುಂಬ, ಪ್ರಾಣ, ಜೀವನವನ್ನೇ ದೇಶಕ್ಕಾಗಿ ಅರ್ಪಿಸಿದ ಎಲ್ಲರನ್ನೂ ಗೌರವಿಸಬೇಕು. ಈ ವೇಳೆ ಕ್ರಾಂತಿಕಾರರ ತ್ಯಾಗ ಬಲಿದಾನ ಹೋರಾಟವನ್ನು ನೆನೆಯದೆ ಹೋದರೆ ಅವರಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ. ಇದೇ ವೇಳೆ ಪಲ್ಲಮ್ಮ ಮತ್ತು ಪೌರಕಾರ್ಮಿಕ ಆರುಮುಗಂ ಅವರಿಗೆ ಶಾಲು ಹೊದಿಸಿ, ಫಲ ತಾಂಬೂಲ ನೀಡಿ ಗೌರವಿಸಲಾಯಿತು. ಈ ವೇಳೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ಮತ್ತಿತರರು ಇದ್ದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಇತಿಹಾಸ ಮರೆಯಲಾಗದು

ರಾಯಣ್ಣ ಜಯಂತ್ಯೋತ್ಸವದಲ್ಲಿ ಪುರಸಭಾಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ ಅಭಿಮತ



ತಿ.ನರಸೀಪುರ, ಆ.17– ಧೈರ್ಯ, ಶೌರ್ಯದಿಂದ ದೇಶಕ್ಕಾಗಿ ಹೋರಾಡಿದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಇತಿಹಾಸ ಎಂದಿಗೂ ಮರೆಯಲಾಗದು ಎಂದು ಪುರಸಭಾಧ್ಯಕ್ಷ ಹಾಗೂ ತಾಲೂಕು ಕುರುಬರ ಸಂಘದ ಮಾಜಿ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ ತಿಳಿಸಿದರು.

ಪಟ್ಟಣದ ಮರಿಗೌಡ ಸ್ಮಾರಕ ಭವನದಲ್ಲಿ ತಾಲೂಕು ಕುರುಬರ ಸಂಘದಿಂದ ಆಯೋಜಿಸಿದ್ದ 77ನೇ ಸ್ವಾತಂತ್ರ್ಯೋತ್ಸವ ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಯಂತ್ಯೋತ್ಸವ ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

1798 ಆ.15ರಂದು ಸಂಗೊಳ್ಳಿಯಲ್ಲಿ ಜನಿಸಿದ ರಾಯಣ್ಣ ಸ್ವಾತಂತ್ರ್ಯ ಹೋರಾಟಗಾರ, ದೇಶಪ್ರೇಮಿ, ಕ್ರಾಂತಿವೀರರಾಗಿದ್ದರು. ಕಿತ್ತೂರು ರಾಣಿ ಚೆನ್ನಮ್ಮನ ಮನೆ ಮಗನಾಗಿದ್ದ ರಾಯಣ್ಣ ಬ್ರಿಟಿಷರನ್ನು ಸದೆ ಬಡೆಯುವ ಪ್ರಯತ್ನದಲ್ಲಿ ಯಶಸ್ಸು ಕಂಡಿದ್ದರು. ಗೆರಿಲ್ಲಾ ಮಾದರಿ ಯುದ್ಧಕಲೆ ನಿಪುಣರಾಗಿದ್ದ ರಾಯಣ್ಣ ಬ್ರಿಟಿಷರಿಗೆ ಸಿಂಹಸ್ವಪ್ನವಾಗಿದ್ದರು. ಅಂದು ಲಂಡನ್ ಪತ್ರಿಕೆಗಳು ಕೂಡ ರಾಯಣ್ಣನ ಪರಾಕ್ರಮವನ್ನು ವರದಿ ಮಾಡಿದ್ದವು ಎಂದರು.

ಕಿಯೋನಿಕ್ಸ್ ಮಾಜಿ ನಿರ್ದೇಶಕ ಉಕ್ಕಲಗೆರೆ ಬಸವಣ್ಣ ಮಾತನಾಡಿ, ಸಂಗೊಳ್ಳಿ ರಾಯಣ್ಣನ ಜೀವನ ಚರಿತ್ರೆ, ಹೋರಾಟದ ಬಗ್ಗೆ ಯುವ ಸಮುದಾಯ ತಿಳಿಯಬೇಕು. ಅಲ್ಲದೇ ಉನ್ನತ ಶಿಕ್ಷಣ ಪಡೆದು ಉತ್ತಮ ಪ್ರಜೆಯಾಗಿ ರೂಪುಗೊಳ್ಳಬೇಕು ಎಂದು ಕರೆ ನೀಡಿದರು.

ಸಂಗೊಳ್ಳಿ ರಾಯಣ್ಣ ಒಂದು ಸಮುದಾಯಕ್ಕೆ ಸೀಮಿತರಲ್ಲ. ಅವರೊಬ್ಬ ಅಪ್ಪಟ ದೇಶಪ್ರೇಮಿ. ಸ್ವಾತಂತ್ರ್ಯ ಹೋರಾಟಗಾರ. ದೇಶಕ್ಕಾಗಿ ಪ್ರಾಣವನ್ನೇ ತ್ಯಾಗ ಮಾಡಿದ ವೀರ ಯೋಧ. ಅವರ ತತ್ವಾದರ್ಶಗಳನ್ನು ನಾವೆಲ್ಲರೂ ಪಾಲಿಸಬೇಕು ಎಂದರು.

ಪಟ್ಟಣದ ಪ್ರಮುಖ ಸ್ಥಳದಲ್ಲಿ ಸಂಗೊಳ್ಳಿ ರಾಯಣ್ಣ ಪ್ರತಿಮೆ ನಿರ್ಮಿಸುವಂತೆ ಪುರಸಭೆಗೆ ಅರ್ಜಿ ಸಲ್ಲಿಸಿದ್ದರೂ, ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಬಗ್ಗೆ ತಾಲೂಕು ಕುರುಬರ ಸಂಘ ಕ್ರಮ ವಹಿಸಬೇಕು ಎಂದರು.

ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೇಹುಂಡಿ ಮಹೇಶ್ ಅಧ್ಯಕ್ಷತೆ ವಹಿಸಿದ್ದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಕುಪ್ಯ ಪುಟ್ಟಸ್ವಾಮಿ ಮುಖ್ಯ ಭಾಷಣಗಾರರಾಗಿ ಮಾತನಾಡಿದರು. ಇದೇ ವೇಳೆ ಹೆಚ್ಚು ಅಂಕ ಗಳಿಸಿದ 7 ಎಸ್‌ಎಸ್‌ಎಲ್‌ಸಿ, 11 ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

ಪಟ್ಟಣದ ಲಕ್ಷ್ಮೀ ವೆಂಕಟರಮಣಸ್ವಾಮಿ ದೇಗುಲದ ಅರ್ಚಕ ದೊರೆ ಸಾಮೀಜಿ, ಸಂಘದ ಕಾರ್ಯಾಧ್ಯಕ್ಷ ಮಾದೇಶ್, ಕಾರ್ಯದರ್ಶಿ ಕೊತ್ತೇಗಾಲ ಬಸವರಾಜು, ಟೌನ್ ಪಂಚಾಯಿತಿ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ನಿರ್ದೇಶಕರಾದ ಆದಿಬೆಟ್ಟಹಳ್ಳಿ ಎ.ಬಿ.ಮಂಜುನಾಥ್, ವೆಂಕಟೇಶ್, ಚಂದ್ರಶೇಖರ್, ವಾಟಾಳ್ ಶಿವಶಂಕರ್, ಮಲ್ಲೇಶ, ಅಶ್ವಿನ್ ಕುಮಾರ್, ವಾಟಾಳು ಗ್ರಾಪಂ ಅಧ್ಯಕ್ಷ ಸೋಮಣ್ಣ, ರಾಮಾಂಜನೇಯ, ಹಾಳೇಗೌಡ, ಶಾಂತಿ, ಪದ್ಮ ಮಹದೇವ್, ನಾಗರಾಜು, ಲಿಂಗಣ್ಣ, ಕುಪ್ಯ ಭಾಗ್ಯಮ್ಮ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ, ಜಯರಾಂ, ಚಿಕ್ಕಸಿದ್ದೇಗೌಡ, ಚೌಹಳ್ಳಿ ಮಲ್ಲೇಶ್, ಲೋಹಿತ್ ಮತ್ತಿತರರಿದ್ದರು.

ಸರಗೂರು ಗ್ರಂಥಾಲಯದಲ್ಲಿ ಸ್ವಾತಂತ್ರ್ಯ ದಿನಾಚರಣೆ



ಸರಗೂರು, ಆ.17– ಶಿಕ್ಷಣದಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂದು ಗ್ರಂಥಪಾಲಕ ಬಿಡಗಲು ಶಿವಣ್ಣ ತಿಳಿಸಿದರು.

ಪಟ್ಟಣದ ಗ್ರಂಥಾಲಯದಲ್ಲಿ ನಡೆದ 77ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರನ್ನು ಸ್ಮರಿಸುವ ದಿನ. ಮಕ್ಕಳು ಅಹಿಂಸಾ ಮನೋಭಾವ, ದೇಶಪ್ರೇಮ ಬೆಳೆಸಿಕೊಳ್ಳಬೇಕು ಎಂದರು.

ಗ್ರಂಥಾಲಯ ಸಹಾಯಕಿ ವರ್ಷ ಭಾಸ್ಕರ್, ಓದುಗರಾದ ಸಂಪತ್, ಕುಮಾರ್, ವಿಜಯ ಭಾಸ್ಕರ್, ಸೋಮೇಶ್, ಪ್ರಕಾಶ್, ಉಲ್ಲಾಸ್, ಶಾಲಾ ಮಕ್ಕಳು ಹಾಜರಿದ್ದರು.



ಬೆಟ್ಟದಪುರದಲ್ಲಿ ಜೈ ಕರ್ನಾಟಕ ಸಂಘಟನೆ ಹಾಗೂ ರಾಯಲ್ ಮೆಕಾನಿಕಲ್ ಒಕ್ಕೂಟದಿಂದ 77ನೇ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಉಮೇಶ್ ಧ್ವಜಾರೋಹಣ ನೆರವೇರಿಸಿದರು. ಜೈ ಕರ್ನಾಟಕ ಸಂಘಟನೆಯ ರುದ್ರೇಶ್ ಕುಮಾರ್, ಗ್ರಾಪಂ ಸದಸ್ಯ ಸೈಯದ್ ಇಮ್ರಾನ್, ರಾಯಲ್ ಮೆಕಾನಿಕಲ್ ಸಂಘಟನೆಯ ಮಂಜುನಾಥ್, ಅನೀಫ್, ಸಾಮಾಜಿಕ ಜಾಲತಾಣದ ಉಪಾಧ್ಯಕ್ಷ ತಾಹೀರ್ ಪಾಷಾ, ಅಣ್ಣೇಗೌಡ, ಮಂಜುನಾಥ್ ಸೇರಿದಂತೆ ಎಲ್ಲಾ ವಿಭಾಗದ ಕಾರ್ಮಿಕರು ಭಾಗವಹಿಸಿದ್ದರು.



ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಜಯಪುರದ ಹಳೇ ಆಸ್ಪತ್ರೆ ಆವರಣದಲ್ಲಿ ಅಖಿಲ ಕರ್ನಾಟಕ ಶ್ರೀಕಾಂತ್ ಅಭಿಮಾನಿ ಬಳಗದಿಂದ ಪೌರ ಕಾರ್ಮಿಕರಾದ ಹರೀಶ್, ಮಹೇಶ್, ರಂಗಸ್ವಾಮಿ ಅವರನ್ನು ಸಮಾಜ ಸೇವಕ ಎಸ್.ಶ್ರೀಕಾಂತ್ ಸನ್ಮಾನಿಸಿದರು. ಈ ವೇಳೆ ಅಭಿಮಾನಿ ಬಳಗದ ಅಧ್ಯಕ್ಷ ಎಸ್.ಸಂತೋಷ್ ಕುಮಾರ್, ಉಪಾಧ್ಯಕ್ಷ ರಮೇಶ, ಪದಾಧಿಕಾರಿಗಳಾದ ಅಜೀಜ್, ಶಿವರಾಜು, ಗಿರೀಶ್, ಕೃಷ್ಣೇಗೌಡ, ಚಂದ್ರು, ಮಣಿ, ರಾಜೇಶ್, ರಂಗಸ್ವಾಮಿ, ಮುಖಂಡರಾದ ಮೂಗನಾಯಕ, ಮಹದೇವಯ್ಯ, ಅಬ್ದುಲ್ ಮುತಾಲೀಪ್, ನಾಗರಾಜು, ರೇಣುಕಾ ಇದ್ದರು.



ಹುಣಸೂರು ತಾಲೂಕು ನಾಗರಹೊಳೆ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದ ಡಿ.ಬಿ.ಕುಪ್ಪೆ ವನ್ಯಜೀವಿ ವಲಯದ ಬಳ್ಳೆ ಕೇಂದ್ರ ಸ್ಥಾನದ ನೂತನ ವಲಯ ಅರಣ್ಯಾಧಿಕಾರಿಗಳ ಕಚೇರಿಯನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರಾಜೀವ್ ರಂಜನ್ ಉದ್ಘಾಟಿಸಿದರು. ಈ ವೇಳೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಹರ್ಷಕುಮಾರ್ ಚಿಕ್ಕನರಗುಂದ, ಮೇಟಿಕುಪ್ಪೆ ಉಪ ವಿಭಾಗದ ಅರಣ್ಯ ಸಂರಕ್ಷಾಧಿಕಾರಿ ರಂಗಸ್ವಾಮಿ, ವಲಯ ಅರಣ್ಯಾಧಿಕಾರಿಗಳಾದ ಮಧು, ಸಿದ್ದರಾಜು, ಹರ್ಷಿತ್, ಸಿಬ್ಬಂದಿ ಇದ್ದರು.

ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ, ಬಲಿದಾನ ಸ್ಮರಿಸಿ

ಶಾಸಕ ದರ್ಶನ್ ಧ್ರುವನಾರಾಯಣ್



ನಂಜನಗೂಡು, ಆ.17– ಹಲವು ಹೋರಾಟಗಾರರು ತಮ್ಮ ಜೀವನವನ್ನೇ ಮುಡುಪಾಗಿಟ್ಟು ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಿದ್ದಾರೆ. ಅವರ ತ್ಯಾಗ ಬಲಿದಾನ ಸ್ಮರಿಸಿ ದೇಶವನ್ನು ಸರ್ವ ಜನಾಂಗದ ಶಾಂತಿಯ ತೋಟವನ್ನಾಗಿಸಲು ಎಲ್ಲರೂ ಕೈ ಜೋಡಿಸಬೇಕು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿಯಿಂದ ಆಯೋಜಿಸಿದ್ದ 77ನೇ ಸ್ವಾತಂತ್ರ್ಯ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬ್ರಿಟಿಷರ ದಾಸ್ಯಕ್ಕೆ ಒಳಗಾಗಿದ್ದ ದೇಶಕ್ಕೆ ಸ್ವಾತಂತ್ರ್ಯ ಹೋರಾಟಗಾರರು ಸ್ವಾತಂತ್ರ್ಯ ತಂದುಕೊಟ್ಟಿದ್ದಾರೆ ಎಂದರು.

ಇತಿಹಾಸ ತಜ್ಞ ಪಿ.ವಿ.ನಂಜರಾಜೇ ಅರಸ್ ಮಾತನಾಡಿ, ಕುವೆಂಪು ಅವರ ಸರ್ವ ಜನಾಂಗದ ಶಾಂತಿಯ ತೋಟ ಬರೀ ಚಿಂತನೆ ಮತ್ತು ಕಲ್ಪನೆಯಲ್ಲಿ ಮಾತ್ರ ಉಳಿದಿದೆ. ನಾವೆಲ್ಲರೂ ಬ್ರಿಟಿಷರ ದಾಸ್ಯದಿಂದ ಮುಕ್ತರಾಗಿದ್ದರೂ, ಸ್ವಾರ್ಥ ಚಿಂತನೆಗಳಿಂದ ಮುಕ್ತರಾಗಿಲ್ಲ. ಆದ್ದರಿಂದ ದೇಶದಲ್ಲಿ ಕೋಮು, ಘರ್ಷಣೆ ಮುಂದುವರೆದಿವೆ. ದೇಶವನ್ನು ಸರ್ವ ಜನಾಂಗದ ಶಾಂತಿಯ ತೋಟವನ್ನಾಗಿಸಲು ಎಲ್ಲರೂ ಸ್ವಾರ್ಥ ಬಿಟ್ಟು ದೇಶ ಕಟ್ಟುವ ಕೆಲಸ ಮಾಡಬೇಕು ಎಂದರು. ಕಾರ್ಯಕ್ರಮದಲ್ಲಿ ಪೊಲೀಸ್ ಇಲಾಖೆ, ಮತ್ತು ವಿವಿಧ ಶಾಲೆ ಮಕ್ಕಳು ನಡೆಸಿಕೊಟ್ಟ ಪಥ ಸಂಚಲನ ಆಕರ್ಷಕವಾಗಿತ್ತು. ಅಲ್ಲದೇ ಶಾಲಾ ಮಕ್ಕಳು ನಡೆಸಿಕೊಟ್ಟ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಮನರಂಜನೆ ನೀಡಿದವು. ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರ್, ಡಿವೈಎಸ್ಪಿ ಗೋವಿಂದರಾಜು, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕೆ.ಜಿ.ಮಹೇಶ್, ಶ್ರೀಕಂಠನಾಯಕ, ಸಿ.ಎಂ.ಶಂಕರ್, ನಗರಸಭಾ ಸದಸ್ಯರಾದ ಎಸ್.ಪಿ.ಮಹೇಶ್, ಸಿದ್ದಿಖ್, ಮುಖಂಡರಾದ ದೊರೆಸ್ವಾಮಿ, ಅಬ್ದುಲ್ ಖಾದರ್, ದೊರೆಸ್ವಾಮಿ ನಾಯಕ, ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.



ತಿ.ನರಸೀಪುರ ತಾಲೂಕಿನ ಅತ್ತಹಳ್ಳಿ ಗ್ರಾಪಂ ನೂತನ ಅಧ್ಯಕ್ಷ ಸುನೀಲ್ ಅವರನ್ನು ಬನ್ನೂರು ಎಪಿಎಂಸಿ ಆವರಣದಲ್ಲಿ ಪುರಸಭಾ ಮಾಜಿ ಅಧ್ಯಕ್ಷ ಪದ್ಮನಾಭ ಅಭಿನಂದಿಸಿದರು. ಮೈಮುಲ್ ನಿರ್ದೇಶಕ ಆರ್.ಚೆಲುವರಾಜು, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಪುರಸಭಾ ಮಾಜಿ ಅಧ್ಯಕ್ಷ ಮುನವರ್ ಪಾಷಾ, ಮೈಮುಲ್ ಮಾಜಿ ನಿರ್ದೇಶಕ ಪ್ರಭಾಕರ್, ಉದ್ಯಮಿ ನಾಗೇಂದ್ರ, ಬನ್ನೂರು ರಮೇಶ್, ಪ್ರಥಮ ದರ್ಜೆ ಗುತ್ತಿಗೆದಾರ ಚಾಮನಹಳ್ಳಿ ಎ.ಎನ್.ಸ್ವಾಮಿ, ಮಲಿಯೂರು ಗ್ರಾಪಂ ಮಾಜಿ ಅಧ್ಯಕ್ಷ ಜಯರಾಮ್, ವಕೀಲ ರವಿ, ಗ್ರಾಪಂ ಸದಸ್ಯ ಮಹೇಶ್, ನಾಗರಾಜು ಇತರರಿದ್ದರು.

ಕರ್ಣಕುಪ್ಪೆ ಗ್ರಾಪಂನಲ್ಲಿ ಸ್ವಾತಂತ್ರ್ಯೋತ್ಸವ ಸಂಭ್ರಮ



ಹುಣಸೂರು,ಆ.17– ಮೇರಾ ಮಿಟ್ಟಿ ಮೇರ ದೇಶ (ನನ್ನ ನೆಲ ನನ್ನ ದೇಶ) ಅಭಿಯಾನದಡಿ ಮುಷ್ಟಿಯಲ್ಲಿ ಮಣ್ಣನ್ನು ಹಿಡಿದು ಪಂಚ ಪ್ರಾಣ ಪ್ರತಿಜ್ಞೆ ನೆರವೇರಿಸಿ ಭಾರತೀಯರಲ್ಲಿ ದೇಶಾಭಿಮಾನ ಹೆಚ್ಚಿಸುವ 77ನೇ ಸ್ವಾತಂತ್ರ್ಯ ದಿನಾಚರಣೆ ಆಚರಿಸುತ್ತಿರುವುದು ಹೆಮ್ಮೆಯ ವಿಷಯ ಎಂದು ಕರ್ಣಕುಪ್ಪೆ ಗ್ರಾಪಂ ಅಧ್ಯಕ್ಷ ಇ.ಸಿ. ಹರೀಶ್ ಮಾವುಡು ತಿಳಿಸಿದರು.

ತಾಲೂಕಿನ ಕರ್ಣಕುಪ್ಪೆ ಗ್ರಾಪಂನಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆ ಹಾಗೂ "ನನ್ನ ನೆಲ ನನ್ನ ದೇಶ" ಅಭಿಯಾನದಡಿ ದೇಶದ ಪ್ರತಿ ಮೂಲೆಯಿಂದ ಮಣ್ಣನ್ನು ಸಂಗ್ರಹಿಸುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ದೇಶದ ಸ್ವಾತಂತ್ರ್ಯಕ್ಕಾಗಿ ಹಲವು ಮಹನೀಯರು ಹೋರಾಡಿದ್ದಾರೆ. ಅವರಂತೆ ನಮ್ಮ ವೀರ ಯೋಧರು ದೇಶದ ಗಡಿಯಲ್ಲಿ ತಮ್ಮ ಪ್ರಾಣ ಲೆಕ್ಕಿಸದೇ ದೇಶ ರಕ್ಷಣೆ ಕಾರ್ಯದಲ್ಲಿ ತೊಡಗಿದ್ದಾರೆ ಎಂದರು.

ಆಜಾದಿ ಕಾ ಅಮೃತ ಮಹೋತ್ಸವ ಅಂಗವಾಗಿ ಗ್ರಾಪಂ ವ್ಯಾಪ್ತಿಯಲ್ಲಿ ಹುತಾತ್ಮ ವೀರ ಯೋಧರಿಗೆ ನಮನ ಸಲ್ಲಿಸುವ ಸಲುವಾಗಿ ನಿರ್ಮಿಸಲಾಗಿರುವ ಶಿಲಾ ಫಲಕವನ್ನು ಅನಾವರಣ ಮಾಡಿ ಮಾತನಾಡಿದ ಪಿಡಿಓ ರಾಮಣ್ಣ, ವಸುದಾ ವಂದನ ಕಾರ್ಯಕ್ರಮದಡಿ ವಿವಿಧ ಬಗೆಯ ಸಸಿಗಳನ್ನು ಆಯುಕ್ತಾಲಯದ ನಿರ್ದೇಶನದಂತೆ ನೆಟ್ಟಿರುತ್ತೇವೆ ಎಂದರು.

ಔಟ್‌ರೀಚ್ ಸಂಸ್ಥೆ ತರಬೇತಿ ಸಂಯೋಜಕ ಜಿ.ಎಸ್.ಜಗದೀಶ್ ಮಾತನಾಡಿದರು. ಇದೇ ವೇಳೆ ಸಂಗೊಳ್ಳಿ ರಾಯಣ್ಣ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಅಮರ ಜಯಂತಿ ಆಚರಿಸಲಾಯಿತು. ವಿವಿಧ ಆಟೋಟ, ಸಾಂಸ್ಕೃತಿಕ ಕಾರ್ಯಕ್ರಮ, ಪ್ರಬಂಧ ಹಾಗೂ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ಈ ವೇಳೆ ಗ್ರಾಪಂ ಉಪಾಧ್ಯಕ್ಷೆ ಮಂಜುಳ, ಸದಸ್ಯರಾದ ಸರಸ್ವತಿ, ಕೆ.ಜೆ.ಮಾದೇಗೌಡ, ಕುಮಾರಸ್ವಾಮಿ, ವೆಂಕಟೇಶಯ್ಯ, ಸೋಮಶೇಖರ್, ಪಾಪಣ್ಣ, ರಂಜಿತಾ, ಮೀನಾಕ್ಷಿ, ಬೀರಪ್ಪ, ರಾಣಿ, ಪುಟ್ಟಮ್ಮ, ಸುಂದ್ರಮ್ಮ, ಇಂಜಿನಿಯರ್ ಪವಿತ್ರ ಸೇರಿದಂತೆ ಗ್ರಾಪಂ ಸಿಬ್ಬಂದಿ, ಗ್ರಾಮಸ್ಥರು, ಶಾಲಾ ಶಿಕ್ಷಕರು ಮತ್ತು ಮಕ್ಕಳು ಇದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಹೆಚ್.ಡಿ.ಕೋಟೆ, ಆ.17– ಹೆಚ್.ಡಿ.ಕೋಟೆ ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿ ಕೋಟೆ ಟೌನ್, ಮೇಟಿಕುಪ್ಪೆ, ಚಕ್ಕೂಡನಹಳ್ಳಿ, ಭೀಮನಹಳ್ಳಿ, ಹಿರೇಹಳ್ಳಿ, ಅಣ್ಣೂರು, ಪಡುವಕೋಟೆ, ಸವ್ವೆ, ನಾಗನಹಳ್ಳಿ ಮತ್ತು ಚಿಕ್ಕಕೆರೆಯೂರು ಪಂಚಾಯಿತಿ ಮತ್ತು ಸುತ್ತಮುತ್ತಲಿನ ಗ್ರಾಮಗಳು. ಯರಹಳ್ಳಿ–ಹ್ಯಾಂಡ್‌ಪೋಸ್ಟ್ ವಿದ್ಯುತ್ ವಿತರಣಾ ಕೇಂದ್ರ ವ್ಯಾಪ್ತಿ ಹೈರಿಗೆ, ಹೆಬ್ಬಲಗುಪ್ಪೆ ಮತ್ತು ನೂರಲಕುಪ್ಪೆ ಪಂಚಾಯಿತಿ ವ್ಯಾಪ್ತಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಆ.18 (ಶುಕ್ರವಾರ) ಬೆಳಗ್ಗೆ 10ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

ಚಿತ್ರನಟ ಉಪೇಂದ್ರ ಬಂಧನಕ್ಕೆ ದಸಂಸ ಒತ್ತಾಯ



ನಂಜನಗೂಡು, ಆ.17– ಆಕ್ಷೇಪಾರ್ಹ ಪದ ಬಳಸಿರುವ ಚಿತ್ರನಟ ಉಪೇಂದ್ರ ಅವರನ್ನು ಬಂಧಿಸಿ, ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ದಸಂಸ ಜಿಲ್ಲಾ ಸಂಚಾಲಕ ಬನ್ನಹಳ್ಳಿ ಸೋಮಣ್ಣ ಒತ್ತಾಯಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಗುರುವಾರ ನಡೆದ ದಸಂಸ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಆಕ್ಷೇಪಾರ್ಹ ಪದ ಬಳಕೆಯನ್ನು ಸಂವಿಧಾನದಲ್ಲಿ ನಿಷೇಧಿಸಲಾಗಿದ್ದು, ಯಾವುದೇ ಒಂದು ನಿರ್ದಿಷ್ಟ ಸಮುದಾಯ ಮತ್ತು ಜಾತಿಗೆ ನೋವುಂಟು ಮಾಡುವ ಉದ್ದೇಶದಿಂದ ಆಕ್ಷೇಪಾರ್ಹ ಪದ ಬಳಸಿದರೆ ಅದು ಅಕ್ಷಮ್ಯ ಅಪರಾಧ. ಹೀಗಾಗಿ ಯಾವುದೇ ವ್ಯಕ್ತಿ ಅಂತಹ ಪದ ಬಳಸಿದರೇ ಆ ವ್ಯಕ್ತಿ ಮೇಲೆ ಪರಿಶಿಷ್ಟ ಜಾತಿ ಹಾಗೂ ವರ್ಗದ ದೌರ್ಜನ್ಯ ಕಾಯ್ದೆ ಅಡಿ ದೂರು ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂಬ ಕಾನೂನು ಇದೆ. ಈ ಸಂಬಂಧ ಬೆಂಗಳೂರಿನ ಚೆನ್ನಮ್ಮ ಅಚ್ಚುಕಟ್ಟು ಪೊಲೀಸ್ ಠಾಣೆಯಲ್ಲಿ ಚಿತ್ರನಟ ಉಪೇಂದ್ರ ವಿರುದ್ಧ ದೂರು ದಾಖಲಾಗಿರುವ ಪ್ರಕರಣಕ್ಕೆ ನ್ಯಾಯಾಲಯ ತಡೆಯಾಜ್ಞೆ ನೀಡಿರುವುದು ಬಹುಸಂಖ್ಯಾತ ದಲಿತ ಸಮುದಾಯದಕ್ಕೆ ನೋವುಂಟು ಮಾಡಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಹಿಂದೆ ಇದ್ದ ಸರ್ಕಾರದ ಅವಧಿಯಲ್ಲಿ ನಟ ಚೇತನ್ ಅವರು ಒಂದು ಹೇಳಿಕೆ ಟ್ವೀಟ್ ಮಾಡಿದಾಗ ಅಂದಿನ ಸರ್ಕಾರ ಕೋಮು ಸೌಹಾರ್ದತೆಗೆ ಧಕ್ಕೆಂಯಾಗುತ್ತದೆ ಎಂದು ಕೇವಲ ಹತ್ತು ನಿಮಿಷಗಳಲ್ಲಿ ಚೇತನ್ ಅವರನ್ನು ಬಂಧಿಸಿತ್ತು. ಉಪೇಂದ್ರ ಅವರು ಹೇಳಿಕೆ ನೀಡಿ ಮೂರ್ನಾಕು ದಿನ ಕಳೆದರೂ ಸರ್ಕಾರ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸದಿರುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರ ಕೂಡಲೇ ಉಪೇಂದ್ರ ಅವರನ್ನು ಬಂಧಿಸಿ ಜೈಲಿಗೆ ಕಳಿಸಬೇಕು. ಇಲ್ಲದಿದ್ದರೆ ಸರ್ಕಾರದ ವಿರುದ್ಧ ದಸಂಸ ಅಂಬೇಡ್ಕರ್ ವಾದ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಇನ್ನೂ ಮುಂದೆ ಪರಿಶಿಷ್ಟ ಜಾತಿ ಮತ್ತು ವರ್ಗದವರು ಉಪೇಂದ್ರ ಅಭಿನಯದ ಎಲ್ಲಾ ಚಿತ್ರಗಳನ್ನು ಬಹಿಷ್ಕರಿಸಬೇಕು. ಚಿತ್ರ ಮಂದಿರಗಳಲ್ಲಿ ಉಪೇಂದ್ರ ಸಿನಿಮಾ ಪ್ರದರ್ಶನ ವೇಳೆ ಘೇರಾವು ಮಾಡುವುದು ಹಾಗೂ ಪೋಸ್ಟರ್‌ಗಳ ಮೇಲೆ ಬಣ್ಣ ಬಳಿಯಬೇಕು ಎಂಬ ನಿರ್ಣಯ ಕೈಗೊಳ್ಳಲಾಯಿತು.

ಇದೇ ವೇಳೆ ಮಲ್ಲಹಳ್ಳಿ ನಾರಾಯಣ್, ದೊಡ್ಡಸಿದ್ದು, ದೇವರಸನಹಳ್ಳಿ ಬಸವರಾಜು, ಹೆಚ್.ಡಿ.ಕೋಟೆ ಸಣ್ಣಕುಮಾರ್, ಜಿ.ಜಿ ಕಾಲೋನಿ ರವಿ, ಗೋರನಹಳ್ಳಿ ನಾರಾಯಣ, ಕೃಷ್ಣಮೂರ್ತಿ, ಸಣ್ಣಮಲ್ಲಪುರ ಮಹೇಶ್, ಹೊಳವಾಡಿ ಅರುಣ್ ಕುಮಾರ್, ಹಳೇಪುರ ಮಹದೇವಸ್ವಾಮಿ, ಕುಮಾರ್, ಸೋಮಣ್ಣ, ರವಿ ಇದ್ದರು.

ಕುಪ್ಯ ಡೈರಿಗೆ ಪ್ರಭಾಕರ್ ಬಲರಾಮ್ ಅಧ್ಯಕ್ಷ, ರಾಜಮ್ಮ ಉಪಾಧ್ಯಕ್ಷೆ



ತಿ.ನರಸೀಪುರ, ಆ.17– ಕುಪ್ಯ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕೆ.ಬಿ.ಪ್ರಭಾಕರ್ ಬಲರಾಮ್, ಉಪಾಧ್ಯಕ್ಷೆಯಾಗಿ ರಾಜಮ್ಮ ಪುಟ್ಟಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಿಕಟಪೂರ್ವ ಅಧ್ಯಕ್ಷ ಪಿ.ಶಿವರಾಂ ಹಾಗೂ ಉಪಾಧ್ಯಕ್ಷ ಪುಟ್ಟಸ್ವಾಮಿ ಅಧಿಕಾರಾವಧಿ ಮುಗಿದ ಹಿನ್ನೆಲೆಯಲ್ಲಿ ಗುರುವಾರ ಸಂಘದ ಆವರಣದಲ್ಲಿ ನಡೆದ ಚುನಾವಣಾ ಸಭೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಜಿಪಂ ಮಾಜಿ ಅಧ್ಯಕ್ಷ ದಿ.ಕೆ.ಸಿ.ಬಲರಾಂ ಅವರ ಪುತ್ರ ಕೆ.ಬಿ.ಪ್ರಭಾಕರ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ರಾಜಮ್ಮ ಪುಟ್ಟಸ್ವಾಮಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಹಕಾರ ಇಲಾಖೆಯ ಅಶ್ವಿನ್ ಕುಮಾರ್ ಘೋಷಿಸಿದರು. ಈ ವೇಳೆ ಡೈರಿ ಆವರಣದಲ್ಲಿ ನೆರೆದಿದ್ದ ಬೆಂಬಲಿಗರು ಹಾಗೂ ಅಭಿಮಾನಿಗಳು ನೂತನ ಅಧ್ಯಕ್ಷ ಉಪಾಧ್ಯಕ್ಷೆಯನ್ನು ಅಭಿನಂದಿಸಿ, ಸಿಹಿ ಹಂಚಿ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ನಿಕಟಪೂರ್ವ ಅಧ್ಯಕ್ಷ ಪಿ.ಶಿವರಾಂ, ಉಪಾಧ್ಯಕ್ಷ ಪುಟ್ಟಸ್ವಾಮಿ, ನಿರ್ದೇಶಕರಾದ ಜೆ.ಶಿವರಾಮು, ಚಿಕ್ಕಬಸವಯ್ಯ, ಡಿ.ಬಸವರಾಜು, ಪುಟ್ಟರಾಜು, ಪುಟ್ಟಮಾದಮ್ಮ, ರಾಜೇಶ್ ಚುನಾವಣಾ ಸಭೆಗೆ ಹಾಜರಾಗಿ ಸಹಕಾರ ಸಂಘದ ವರಿಷ್ಠರ ಆಯ್ಕೆಗೆ ಅನುಮೋದನೆ ನೀಡಿದರು. ನೂತನ ಅಧ್ಯಕ್ಷ ಕೆ.ಬಿ.ಪ್ರಭಾಕರ್ ಬಲರಾಮ್ ಮಾತನಾಡಿ, 40 ವರ್ಷಗಳ ಇತಿಹಾಸ ಹೊಂದಿರುವ ಕುಪ್ಯ ಗ್ರಾಮದ ಸಹಕಾರ ಸಂಘ ಅಂದಿನಿಂದ ಇಂದಿನವರೆಗೂ ಉತ್ತಮ ವ್ಯವಹಾರದೊಂದಿಗೆ ಯಶಸ್ವಿಯಾಗಿ ನಡೆದುಕೊಂಡು ಬಂದಿದೆ. ಜಾಗದ ಕೊರತೆಯಿಂದ ನೂತನ ಕಟ್ಟಡ ಹಾಗೂ ಬಿಎಂಸಿ ಕೇಂದ್ರ ಮಾಡಲಾಗಿಲ್ಲ. ಸ್ಥಳದ ಅಭಾವದಿಂದಾಗಿ ಬಿಎಂಸಿ ಕೇಂದ್ರಕ್ಕೆ ಬೇಕಾದ ಸಲಕರಣೆಗಳು ವಾಪಸ್ ಹೋಗಿವೆ. ಮುಂದಿನ ದಿನಗಳಲ್ಲಿ ವಿಶಾಲವಾದ ಉತ್ತಮ ಕಟ್ಟಡ ನಿರ್ಮಿಸಿ ಬಿಎಂಸಿ ಕೇಂದ್ರ ಮಾಡುವ ಉದ್ದೇಶ ಹೊಂದಲಾಗಿದೆ. ಗ್ರಾಮದ ಡೈರಿಗೆ ನಿತ್ಯ 900 ಲೀ. ಹಾಲು ಸರಬರಾಜಾಗುತ್ತಿದ್ದು, ಇನ್ನೂ ಹೆಚ್ಚಿನ ಹಾಲು ಉತ್ಪಾದನೆಯಾಗಬೇಕಿದ್ದಲ್ಲಿ ಉತ್ಪಾದಕರಿಗೆ ಹೆಚ್ಚು ಪ್ರೋತ್ಸಾಹ ಸಿಗಬೇಕಿದೆ ಎಂದರು.

ಸರ್ಕಾರದ ವಿವಿಧ ಇಲಾಖೆಗಳಿಂದ ಹೈನುಗಾರಿಕೆಗೆ ದೊರಕಬಹುದಾದ ಅನುದಾನ ತಂದು ಗ್ರಾಮದಲ್ಲಿ ಹಾಲು ಉತ್ಪಾದನೆ ಹೆಚ್ಚಿಸುವ ನಿಟ್ಟಿನಲ್ಲಿ ಪೂರಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಪ್ರಾಮಾಣಿಕವಾಗಿ ಪ್ರಯತ್ನ ಪಡುತ್ತೇನೆ ಎಂದು ತಿಳಿಸಿದರು.

ಈ ವೇಳೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಕುಪ್ಯ ಪುಟ್ಟಸ್ವಾಮಿ, ಡಿಸಿಸಿ ಸದಸ್ಯ ಮೋಹನ್ ಅಣ್ಣಯ್ಯ, ಸಂತೋಷ್, ಡೈರಿ ಕಾರ್ಯದರ್ಶಿ ವಿಶ್ವನಾಥ್, ಜಯರಾಮ್, ಹಾಲು ಪರೀಕ್ಷಕ ನಾಗೇಂದ್ರ, ಕಂಪ್ಯೂಟರ್ ಆಪರೇಟರ್ ನಳಿನಿ ಸೇರಿದಂತೆ ಗ್ರಾಮಸ್ಥರು, ಯಜಮಾನರು ಹಾಜರಿದ್ದರು.

ಲಿಬಿಯಾದಲ್ಲಿ ಸಶಸ್ತ್ರ ಗುಂಪುಗಳ ನಡುವೆ ಕಾದಾಟ; 55 ಸಾವು, 146 ಜನರಿಗೆ ಗಾಯ

ಟ್ರಿಪೋಲಿ (ಲಿಬಿಯಾ), ಆ.17– ಲಿಬಿಯಾದಲ್ಲಿನ ವಿಶ್ವಸಂಸ್ಥೆ ಬೆಂಬಲಿತ ಸರಕಾರವನ್ನು ಬೆಂಬಲಿಸುವ ಎರಡು ಭಯೋತ್ಪಾದಕ ಗುಂಪುಗಳ ನಡುವೆ ಟ್ರಿಪೋಲಿಯಲ್ಲಿ ಭುಗಿಲೆದ್ದ ಭೀಕರ ಘರ್ಷಣೆಯಲ್ಲಿ ಕನಿಷ್ಠ 55 ಮಂದಿ ಮೃತಪಟ್ಟು, 146 ಮಂದಿ ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಒಂದು ಮಿಲಿಶಿಯಾ (ಭಯೋತ್ಪಾದಕ) ಗುಂಪಿನ ಮಿಲಿಟರಿ ಕಮಾಂಡರ್ ಬಂಧನದ ಬಳಿಕ ಟ್ರಿಪೋಲಿ ರಣಾಂಗಣವಾಗಿದೆ.

ರಾಜಧಾನಿ ಟ್ರಿಪೋಲಿಯ ಕೆಲ ಭಾಗಗಳಲ್ಲಿ 444 ಬ್ರಿಗೇಡ್ ಮತ್ತು ವಿಶೇಷ ಪ್ರತಿರೋಧ ಪಡೆ ನಡುವೆ ಹಿಂಸಾಚಾರ ಭುಗಿಲೆದ್ದಿದೆ. 444 ಬ್ರಿಗೇಡ್‌ನ ಪ್ರಬಲ ಕಮಾಂಡರ್‌ನನ್ನು ಬಂಧಿಸಿದ ಬಳಿಕ ಸಂಘರ್ಷ ಆರಂಭವಾಗಿದೆ. ಬುಧವಾರ ಸಾವಿನ ಸಂಖ್ಯೆಯನ್ನು ದೃಢಪಡಿಸಿದ ಲಿಬಿಯಾದ ತುರ್ತು ಔಷಧ ಮತ್ತು ನೆರವು ಕೇಂದ್ರ, ಬಲಿಯಾದವರಲ್ಲಿ ನಾಗರಿಕರು ಮತ್ತು ಭದ್ರತಾ ಸಿಬ್ಬಂದಿ ಸೇರಿದ್ದು, ಈವರೆಗೂ ಹಲವಾರು ಶವಗಳನ್ನು ಗುರುತಿಸಲಾಗಿಲ್ಲ ಎಂದು ಹೇಳಿದೆ. ತುರ್ತು ಸೇವಾ ಕೇಂದ್ರದ ಪ್ರಕಾರ 234 ಕುಟುಂಬಗಳನ್ನು ಹೋರಾಟ ನಡೆಯುತ್ತಿರುವ ಮುಂಚೂಣಿ ಪ್ರದೇಶಗಳಿಂದ ಸ್ಥಳಾಂತರಿಸಲಾಗಿದೆ. 60 ಆಂಬ್ಯುಲೆನ್ಸ್‌ಗಳನ್ನು ನಿಯೋಜಿಸಲಾಗಿದ್ದು, ಗಾಯಾಳುಗಳ ಚಿಕಿತ್ಸೆಗೆ ಮೂರು ಸ್ಥಳೀಯ ಆಸ್ಪತ್ರೆಗಳನ್ನು ಸ್ಥಾಪಿಸಲಾಗಿದೆ. ದೇಶದ ಪ್ರಧಾನಿ ಮತ್ತು ಟ್ರಿಪೋಲಿಯ ಹಿರಿಯರು ನಡೆಸಿದ ರಾಜಿ ಸಂಧಾನದ ಬಳಿಕ ಹೋರಾಟ ನಿರತ ಬಣಗಳು ಕದನವಿರಾಮಕ್ಕೆ ಒಪ್ಪಿದ್ದು, ಹೋರಾಟ ನಿಂತಿದೆ ಎಂದು ಆಂತರಿಕ ಸಚಿವಾಲಯ ಮಂಗಳವಾರ ಪ್ರಕಟಿಸಿದೆ.

1ನೇ ವರ್ಷದ ಸವಿನೆನಪು



ರಾಜು (ಕೋಣ)

ಹೆಬ್ಬಾಳ್ ಮೇನ್ ರೋಡ್,ಸೂರ್ಯ ಬೇಕರಿ ಹಾಗೂ ಕುಂಬಾರಕೊಪ್ಪಲ್, ಮೈಸೂರು

ದುಃಖತಪ್ತರು: ಕುಟುಂಬಸ್ಥರು ಹಾಗೂ ಸ್ನೇಹಿತರು.

16ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 16 ವರ್ಷ ಕಳೆದರೂ ನೀವು ನಮ್ಮ ಮನಸ್ಸಿನಲ್ಲಿ ಅಮರ: ಕುಟುಂಬ ವರ್ಗದವರು, ಸಿದ್ಧಾರ್ಥನಗರ, ಮೈಸೂರು

ಶ್ರೀ ಹೆಚ್.ಎಂ.ರಾಮಕೃಷ್ಣಯ್ಯ

ಸುಜಾತ ಸೂಪರ್ ಸ್ಟೋರ್ ಮತ್ತು ಲಲಿತ ಸೂಪರ್ ಮಾರ್ಕೆಟ್

ಸವಿನೆನಪು



ಡಾ. ಹೆಚ್.ಕೆ. ಕಾಳಪ್ಪ

18–8–2019

ದು:ಖತಪ್ತರು: ಕುಟುಂಬವರ್ಗದವರು ಮತ್ತು ಸ್ನೇಹಿತರು

ಸಹಕಾರ ಸಂಘಗಳ ಜಂಟಿ ನಿಬಂಧಕರ ನ್ಯಾಯಾಲಯ, ಮೈಸೂರು ಪ್ರಾಂತ, ಮೈಸೂರು

ದಾವಾ ಸಂಖ್ಯೆ ಜೆಆರ್‌ಎಂ/ಡಿಡಿಎಸ್/2206/2020–21

ಪತ್ರಿಕಾ ಪ್ರಕಟಣೆ

ವಾದಿ: ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ
ಮೈಸೂರು

ವಿರುದ್ಧ

ಪ್ರತಿವಾದಿಗಳು: 1) ಶ್ರೀಮತಿ ಕಮಲಮ್ಮ ಕೋಂ ಸಿ. ಹೊನ್ನಪ್ಪ
2) ಹೆಚ್. ಸುರೇಶ್ ಬಿನ್ ಸಿ. ಹೊನ್ನಪ್ಪ
3) ಹೆಚ್. ದಿನೇಶ್ ಬಿನ್ ಸಿ. ಹೊನ್ನಪ್ಪ
ನಂ. 1122, 1ನೇ ಕ್ರಾಸ್, ಕುರುಬಗೇರಿ,
ಲಷ್ಕರ್ ಮೊಹಲ್ಲಾ, ಮೈಸೂರು ಸಿಟಿ


ಮೇಲ್ಕಂಡ ನ್ಯಾಯಾಲಯದಲ್ಲಿ ವಾದಿಯು, ಪ್ರತಿವಾದಿಯಾದ ಶ್ರೀಮತಿ ಕಮಲಮ್ಮ ಕೋಂ ಸಿ.ಹೊನ್ನಪ್ಪರವರ ವಿರುದ್ಧ ರೂ.36,82,562–60ಗಳ ವಸೂಲಾತಿಗಾಗಿ ಕೋರಿ ಉಲ್ಲೇಖಿತ ದಾವೆಯನ್ನು ಹೂಡಿರುತ್ತಾರೆ. ಈ ಮಧ್ಯೆ, 1ನೇ ಪ್ರತಿವಾದಿಯು ಮರಣ ಹೊಂದಿದ ನಿಮಿತ್ತ ಅವರ ಕಾನೂನುಬದ್ಧ ವಾರಸುದಾರರಾದ 2 ಮತ್ತು 3ನೇ ಪ್ರತಿವಾದಿಗಳಾದ ನಿಮ್ಮನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿದ್ದು, ಈ ಸಂಬಂಧ ಜಂಟಿ ನಿಬಂಧಕರ ನ್ಯಾಯಾಲಯದ ಕಛೇರಿಯಿಂದ ದಿನಾಂಕ : 09–06–2023ರಂದು ನಿಗದಿಯಾಗಿದ್ದ ದಾವಾ ವಿಚಾರಣೆ ಸಂಬಂಧ ನೋಂದಾಯಿತ ಅಂಚೆ ಮೂಲಕ ವಿಚಾರಣಾ ನೋಟೀಸ್‌ನ್ನು ಜಾರಿ ಮಾಡಿರುತ್ತಾರೆ. ಆದರೆ 2 ಮತ್ತು 3ನೇ ಪ್ರತಿವಾದಿಗಳಾದ ನೀವು ಈ ನೋಂದಾಯಿತ ಅಂಚೆಯ ನೋಟೀಸ್‌ನ್ನು ಸ್ವೀಕರಿಸಿರುವುದಿಲ್ಲ ವೆಂದು ಅಂಚೆ ಇಲಾಖೆಯವರು "Unclaimed, hence returned to sender" ಎಂಬ ಷರಾದೊಂದಿಗೆ ನೋಟೀಸ್‌ನ್ನು ದಿನಾಂಕ : 15–06–2023 ರಂದು ನ್ಯಾಯಾಲಯದ ಕಛೇರಿಗೆ ಹಿಂದಿರುಗಿಸಿರುತ್ತಾರೆ.

ಈ ಕಾರಣದಿಂದ ಮೇಲ್ಕಂಡ ದಾವೆಯ ಮುಂದಿನ ವಿಚಾರಣೆಯು ದಿನಾಂಕ : 25–08–2023ರ ಮಧ್ಯಾಹ್ನ 3–00 ಗಂಟೆಗೆ ನಿಗದಿಯಾಗಿದ್ದು, ಈ ದಿನಾಂಕದಂದು ತಪ್ಪದೇ 2 ಮತ್ತು 3ನೇ ಪ್ರತಿವಾದಿಗಳಾದ ನೀವುಗಳು ದಾವಾ ವಿಚಾರಣೆಗೆ ಹಾಜರಾಗಲು ಅಂತಿಮ ಅವಕಾಶವನ್ನು ಈ ಪತ್ರಿಕಾ ಪ್ರಕಟಣೆ ಮೂಲಕ ನೀಡಲಾಗಿದೆ.

ಸಹಕಾರ ಸಂಘಗಳ ಜಂಟಿ ನಿಬಂಧಕರ ನ್ಯಾಯಾಲಯದ ಆದೇಶದ ಮೇರೆಗೆ

ಡಿ.ಬಿ. ಜೋಷಿ
ವಾದಿ ವಕೀಲರು
1146/1, ಸಿಹೆಚ್–7/1, ನರಸರಾಜ ರಸ್ತೆ
ಚಾಮರಾಜಪುರಂ, ಸಂಭ್ರಮ ಹೋಟೆಲ್ ಹತ್ತಿರ
ಮೈಸೂರು–570005, ಮೊಬೈಲ್ ನಂ. 9448045024

4ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಕಾಶಿಪತಿ

ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಮೃತರ ಧರ್ಮಪತ್ನಿ ಶ್ರೀಮತಿ ಯಶೋಧ, ಮಕ್ಕಳು: ಮಮತ.ಕೆ ಮತ್ತು ತೇಜಸ್ವಿನಿ.ಕೆ ಹಾಗೂ ಮೊಮ್ಮಕ್ಕಳಾದ ನಿಸರ್ಗ.ಕೆ ಮತ್ತು ಪ್ರಥಮ್ ಸೂರ್ಯ.ಎಂ ಹಾಗೂ ಸಮಸ್ತ ಕುಟುಂಬವರ್ಗದವರು. 16ನೇ ಕ್ರಾಸ್, ಆರ್.ಪಿ.ರಸ್ತೆ, ನಂಜನಗೂಡು

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸ್ಥಾಪನೆ: 1916 Ph: 0821-2424909, 8904771073

ದಿ ಭಾವಸಾರ ಕ್ಷತ್ರಿಯ ಕೋ–ಆಪರೇಟಿವ್ ಸೊಸೈಟಿ (ಲಿ.,)

"ಎ" ಶ್ರೇಣಿಯ ಸಹಕಾರ ಸಂಘ

ನಂ.279, ಬೆಂಕಿನವಾಬ ರಸ್ತೆ, ಮಂಡಿ ಮೊಹಲ್ಲಾ, ಮೈಸೂರು–570021

ಪ್ರಕಟಣೆ

ಮೇಲ್ಕಂಡ ಸಂಘದ ಆಡಳಿತ ಮಂಡಳಿಯ ಚುನಾವಣೆಯು ದಿನಾಂಕ: 20–08–2023ರ ಭಾನುವಾರದಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆಯವರೆಗೆ, ಸ್ಥಳ: ಕುಂಚಿಟಿಗರ ಸಂಘ (ರಿ) ಧರ್ಮ ಪರಾಯಿಣೆ ಶ್ರೀಮತಿ ಆಲಮ್ಮನವರ ಛತ್ರ, ದಿವಾನ್ಸ್ ರಸ್ತೆ, ಶಿವರಾಂಪೇಟೆ, ಮೈಸೂರು. ಇಲ್ಲಿ ನಡೆಸುವುದರಿಂದ ಎಲ್ಲಾ ಅರ್ಹ ಸದಸ್ಯರುಗಳೂ ತಮ್ಮ ಭಾವಚಿತ್ರವಿರುವ ಪಾಸ್‌ಪುಸ್ತಕ ಹಾಗೂ ಗುರುತಿನ ಚೀಟಿಯನ್ನು ತಪ್ಪದೇ ತಂದು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಚುನಾವಣೆಯಲ್ಲಿ ಮತ ಚಲಾಯಿಸಬೇಕೆಂದು ಕೋರಲಾಗಿದೆ.

ವಿಶೇಷ ಸೂಚನೆ: ಒಬ್ಬ ಮತದಾರರು 10 ಮತಗಳನ್ನು ಮಾತ್ರ ಚಲಾಯಿಸಬಹುದಾಗಿರುತ್ತದೆ.

ಸಹಿ/– ಕಾರ್ಯದರ್ಶಿ,
ದಿ ಭಾವಸಾರ ಕ್ಷತ್ರಿಯ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್, ಮೈಸೂರು

Reg No.DRMC3/RGN/48303-2017, Dt 31.10.2017 Ph: 08221-297377

ನಂಜನಗೂಡು ತಾಲ್ಲೂಕು ಪದವೀಧರರ ಸಹಕಾರ ಸಂಘ ನಿಯಮಿತ (ರಿ.)

#3180, ಗೋಮತಿ ಕಾಂಪ್ಲೆಕ್ಸ್, 16ನೇ ಕ್ರಾಸ್, ಆರ್.ಪಿ.ರಸ್ತೆ, ನಂಜನಗೂಡು–571301

ಪ್ರಕಟಣೆ

ಈ ಮೂಲಕ ನಮ್ಮ ನಂಜನಗೂಡು ತಾಲ್ಲೂಕು ಪದವೀಧರರ ಸಹಕಾರ ಸಂಘವು ತಾರೀಖು 20–08–2023ನೇ ಭಾನುವಾರದಂದು ಬೆಳಿಗ್ಗೆ 11.00 ಗಂಟೆಗೆ ವಾರ್ಷಿಕ ಮಹಾಸಭೆಯನ್ನು ಭಾರತ ವಿಕಾಸ ಸ್ಕೂಲ್, ಸಿದ್ದೇಗೌಡ ಬಡಾವಣೆ, ಕೆ.ಎಚ್.ಬಿ.ಕಾಲೋನಿಯಲ್ಲಿ ನಡೆಸಲು ತೀರ್ಮಾನಿಸಿದ್ದು, ಈಗಾಗಲೇ ನಮ್ಮ ಸದಸ್ಯರಿಗೆ ಅಂಚೆ ಮೂಲಕ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿದೆ. ತಲುಪದೇ ಇರುವವರು ಇದನ್ನೇ ಆಹ್ವಾನ ಪತ್ರಿಕೆಯೆಂದು ತಿಳಿದು ಸಭೆಗೆ ಹಾಜರಾಗಲು ಕೋರಲಾಗಿದೆ.

ಸಹಿ/– ಆಡಳಿತ ಮಂಡಳಿಯ ಪರವಾಗಿ
ಕಾರ್ಯದರ್ಶಿಗಳು ತಾ॥ ಪದವೀಧರರ ಸಹಕಾರ ಸಂಘ ನಂಜನಗೂಡು